ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 12 | ಮಾರ್ಚ್ 16-22, 2020 | ಪುಟ 16 | ರೂ.10/-





ದಿಲ್ಲಿ ಹಿಂಸಾಚಾರ: ಬಯಲಿಗೆ ಬಂತು 'ನ್ಯೂ ಇಂಡಿಯಾ'ದ ವಾಸ್ತವತೆ

ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆ :

ಹೋರಾಟದ ಪರಂಪರೆಯನ್ನು ನೆನಪಿಸಿದ ದುಡಿಯುವ ಮಹಿಳೆಯರ 'ಜೈಲ್ ಭರೋ'






ಕೆ.ಪಿ.ಸಿ.ಸಿ. ಗೆ ಅಧ್ಯಕ್ಷರ ನೇಮಕ




ಯಸ್ ಬ್ಯಾಂಕ್ ಪುನಶ್ಚೇತನ ಕ್ರಮಗಳು ಫಲ ಕೊಟ್ಟಾವೆ?

ಸಿಎಎ / ಎನ್‌ಪಿಆರ್ / ಎನ್‌ಆರ್‌ಸಿ ವಿರೋಧಿಸಿ, ಒಂದು ಆಧುನಿಕ, ಎಲ್ಲರನ್ನೂ ಒಳಗೊಳ್ಳುವ ಭಾರತಕ್ಕಾಗಿ ಮಾರ್ಚ್ 23ರಂದು ಹುತಾತ್ಮ ದಿನಾಚರಣೆ: ಎಡಪಕ್ಷಗಳ ಕರೆ



ಎಡಪಕ್ಷಗಳು ಭಗತ್ ಸಿಂಗ್, ರಾಜಗುರು ಮತ್ತು ಸುಖದೇವ್ ಹುತಾತ್ಮರಾದ ಮಾರ್ಚ್ 23 ರಂದು ಸಿಎಎ/ಎನ್‌ಪಿಆರ್/ಎನ್‌ಆರ್‌ಸಿ ಪ್ರಕ್ರಿಯೆಗೆ ವಿರೋಧವನ್ನು ಕ್ರೋಡೀಕರಿಸಲು ಮತ್ತು ಭಗತ್ ಸಿಂಗ್ ಕಂಡರಿಸಿದ, ಅದಕ್ಕಾಗಿ ದುಡಿದ ಮತ್ತು ಪ್ರಾಣತ್ಯಾಗ ಮಾಡಿದ ಒಂದು ಆಧುನಿಕ, ಎಲ್ಲರನ್ನೂ ಒಳಗೊಳ್ಳುವ ಭಾರತದ ಕಣ್ಣೋಟವನ್ನು ಮುಂದಿಡಲು ನಿರ್ಧರಿಸಿವೆ.

ಬಿಜೆಪಿಯ ಅಡಿಯಲ್ಲಿ ಅದರ ಕೋಮುವಾದಿ ಧ್ರುವೀಕರಣವನ್ನು ಮುನ್ನಡೆಸಲು ಮತ್ತು ಶಾಂತಿಯುತ ಪ್ರತಿಭಟನೆಗಳನ್ನು ಸಂಗಟಿಸುವ ಜನಗಳ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ದಾಳಿ ನಡೆಸಲು ಪೋಲೀಸನ್ನು ಬಳಸಲಾಗುತ್ತಿದೆ. ಜಾಮಿಯ ಮಿಲಿಯ ವಿಶ್ವವಿದ್ಯಾಲಯ, ಅಲಿಗಢ್ ಮುಸ್ಲಿಂ ವಿಶ್ವವಿದ್ಯಾಲಯದ ಮೇಲೆ ಭಂಡತನದ ದಾಳಿಗಳ ನಂತರ ಮುಸುಕುಧಾರಿ ಗೂಂಡಾಗಳು ಪೋಲೀಸ್ ರಕ್ಷಣೆಯಲ್ಲಿ ಜೆನ್‌ಯು ಮೇಲೆ ದಾಳಿ ಮಾಡಿದ್ದಾರೆ. ಮುಂದುವರೆದು ಉತ್ತರಪ್ರದೇಶದಲ್ಲಿ , ಇತರ ಬಿಜೆಪಿ ಆಳ್ವಿಕೆಯ ರಾಜ್ಯಗಳಲಲಿ ಮತ್ತು ದಿಲ್ಲಿಯಲ್ಲಿ ದುಷ್ಟ ದಾಳಿಗಳನ್ನು ನಡೆಸಿದ್ದಾರೆ. ಇತ್ತೀಚೆಗೆ ರಾಷ್ಟ್ರೀಯ ರಾಜಧಾನಿಯನ್ನು ತಲ್ಲಣಗೊಳಿಸಿದ ಕೋಮುವಾದಿ ಹಿಂಸಾಚಾರಕ್ಕೆ ಕನಿಷ್ಟ 53(ಅಧಿಕೃತ ಎಣಿಕೆ) ಮಂದಿ ಸತ್ತಿದ್ದಾರೆ, ಇದು ಇನ್ನೂ ಏರು ಸಂಭವ ಇದೆ, ನೂರಾರು ಜನ ಗಾಯುಗೊಂಡಿದ್ದಾರೆ. ಕೋಟ್ಯಂತರ ರೂಪಾಯಿಗಳ ಆಸ್ತಿಗಳ ಲೂಟಿಯಾಗಿದೆ. ಇನ್ನೂ ಕೆಟ್ಟ ಸಂಗತಿಯೆಂದರೆ, ಈ ಹಿಂಸಾಚಾರದಿಂದ ಬಾಧಿತರಾದವರ ಮೇಲೆಯೇ ಈಗ ಪೋಲೀಸರು ಆರೋಪಿಗಳನ್ನಾಗಿ ಮಾಡುತ್ತಿದ್ದಾರೆ. ಕೇಂದ್ರ ಸರಕಾರದ ಅಡಿಯಲ್ಲಿರುವ ದಿಲ್ಲಿ ಪೋಲೀಸ್ ಹೆಚ್ಚೆಂದರೆ, ಮೂಕಪ್ರೇಕ್ಷಕರಾಗಿ ನಿಂತಿದ್ದರು, ಕೆಲವೊಮ್ಮೆಯಂತೂ ಅಪರಾಧಗಳಿಗೆ ಕುಮ್ಮಕ್ಕು ನೀಡಿದರು. ಇದನ್ನು ಬಲವಾಗಿ ಕಮಡಿಸಿರುವ ಎಡಪಕ್ಷಗಳು ಈ ಹಿಂಸಾಚಾರದ ಬಗ್ಗೆ ಒಂದು ಸಮಯಬದ್ಧ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಆಗ್ರಹಿಸುತ್ತಿವೆ.



ಎಡಪಕ್ಷಗಳು ಇತ್ತಿಚಿನ ಬಜೆಟ್ ಪ್ರಸ್ತಾವಗಳಿಗೆ ಬಲವಾದ ವಿರೋಧವನ್ನು ವ್ಯಕ್ತಪಡಿಸಿವೆ. ಈ ಬಜೆಟ್, ಶ್ರೀಮಂತರಿಗೆ ಮತ್ತು ಕಾರ್ಪೊರೇಟ್‌ಗಳಿಗೆ ಹೆಚ್ಚಿನ ಪರಿಹಾರ, ರಿಯಾಯ್ತಿಗಳನ್ನು ನೀಡುತ್ತಲೇ, ಜನಗಳ ಜೀವನಾಧಾರಗಳ ಮೇಲೆ ತೀವ್ರ ದಾಳಿಗಳನ್ನು ಹರಿಯ ಬಿಟ್ಟಿದೆ. ಈ ಬಜೆಟ್ ವ್ಯಾಪಕ ಪ್ರಮಾಣದಲ್ಲಿ ಸಾರ್ವಜನಿಕ ವಲಯದ ಖಾಸಗೀಕರಣದ ಮೂಲಕ ನಮ್ಮ ರಾಷ್ಟ್ರೀಯ ಆಸ್ತಿಗಳನ್ನು ಮಾರಿಕೊಳ್ಳುವ ಯೋಜನೆ ಹಾಕಿದೆ. ಆರ್ಥಿಕ ಬುನಾದಿಯನ್ನು ಗಂಭೀರವಾಗಿ ಶಿಥಿಲಗೊಳಿಸುತ್ತಿದೆ, ಮತ್ತು ಅದೇ ವಏಳೆಯಲ್ಲಿ ಜನಗಳ ಮೇಲೆ ಅಭೂತಪೂರ್ವ ಹೊರೆಗಳನ್ನು ಹಾಕಿ ಅವರ ಸಂಕಟಗಳನ್ನು ಹಲವು ಪಟ್ಟು ಹೆಚ್ಚಿಸುತ್ತಿದೆ.

ಮಾರ್ಚ್ 23ರಂದು ಎಡಪಕ್ಷಗಳ ಎಲ್ಲ ಘಟಕಗಳು ರಾಜ್ಯಗಳ ರಾಜಧಾನಿಗಳಲ್ಲಿ ಮತ್ತು ಜಿಲ್ಲಾ ಮುಖ್ಯಾಲಯಗಳಲ್ಲಿ ಒಟ್ಟಾಗಿ ಕಾರ್ಯಕ್ರಮಗಳನ್ನು ರೂಪಿಸುತ್ತವೆ. ವಿವಧೆಡೆಗಳಿಂದ ಮೆರವಣಿಗೆಗಳನ್ನು ನಡೆಸಿ ಒಂದು ಕೇಂದ್ರ ಸ್ಥಳದಲ್ಲಿ ರಾಜಕೀಯ ಮುಕಂಡರು, ಸಾಮಸ್ಕೃತಿಕ ವ್ಯಕ್ತಿಗಳು ಮತ್ತು ಕಾರ್ಯಕರ್ತರು, ಚಿಂತಕರು ಮತ್ತು ಜನತಾ ಆಂದೋಲನಗಳು ಒಮದು ಸಾರ್ವಜನಿಕ ಸಭೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸುತ್ತಾರೆ. ಕಾರ್ಯಕ್ರಮದ ಕೊನೆಯಲ್ಲಿ ಒಂದು ಪ್ರತಿಜ್ಞೆಯನ್ನು ಕೈಗೊಳ್ಳಲಾಗುವುದು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ, ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜ, ಸಿಪಿಐ(ಎಂಎಲ್)–ಲಿನಬರೇಷನ್ ಪ್ರಧಾವನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ, ಅಖಿಲ ಬಾರತ ಫಾರ್ವರ್ಡ್ ಬ್ಲಾಕ್ ಪ್ರಧಾನ ಕಾರ್ಯದರ್ಶಿ ದೇಬಬ್ರತ ಬಿಸ್ವಾಸ್ ಮತ್ತು ಆರ್‌ಎಸ್‌ಪಿ ಮುಖಂಡ ಮನೋಜ್ ಭಟ್ಟಾಚಾರ್ಯ ಈ ಕುರಿತ್ಮಾಚ 13ರಮದು ಒಂದು ಜಂಟಿ ಹೇಳಿಕೆಯನ್ನು ನೀಡಿದ್ದಾರೆ.

ಗೃಹಮಂತ್ರಿಗಳ ಟಿಪ್ಪಣಿ ಪ್ರಾಮಾಣಿಕವಾಗಿದ್ದರೆ 2003ರ ಪೌರತ್ವ ತಿದ್ದುಪಡಿ ಕಾಯ್ದೆಯ ತಿದ್ದುಪಡಿ ಅಗತ್ಯ ನಿಬಂಧನೆಗಳನ್ನು ರದ್ದು ಮಾಡಬೇಕು, ಕಾಯ್ದೆಯನ್ನು ತಿದ್ದುಪಡಿ ಮಾಡಬೇಕು –ಸಿಪಿಐ(ಎಂ) ಪೊಲಿಟ್‌ಬ್ಯುರೊ

ದಿಲ್ಲಿಯನ್ನು ಇತ್ತೀಚೆಗೆ ಅಲುಗಾಡಿಸಿ ಬಿಟ್ಟ ಭೀಕರ ಕೋಮುವಾದಿ ಹಿಂಸಾಚಾರದ ಮೇಲಿನ ಚರ್ಚೆಗೆ ಉತ್ತರಿಸುತ್ತ ಕೇಂದ್ರ ಗೃಹಮಂತ್ರಿ ಅಮಿತ್ ಷಾ "ಎನ್‌ಪಿಆರ್ ಬಗ್ಗೆ ಯಾರೂ ಭಯಪಡಬೇಕಾಗಿಲ್ಲ, ಸಮಕಾಲಿಕಗೊಳಿಸುವ ಪ್ರಕ್ರಿಯೆಯಲ್ಲಿ ಯಾರನ್ನೂ 'ಸಂದೇಹಾಸ್ಪದರು' ಎಂದು ಗುರುತು ಮಾಡುವುದಿಲ್ಲ" ಎಂದು ಗುಡುಗಿದರು.

ಈ ಟಿಪ್ಪಣಿಯ ಬಗ್ಗೆ ಈ ಬಿಜೆಪಿ ಸರಕಾರ ಪ್ರಾಮಾಣಿಕವಾಗಿರುವುದಾದರೆ, ಅವರು 2003ರ ಪೌರತ್ವ ತಿದ್ದುಪಡಿ ಕಾಯ್ದೆಯ ನಿಬಂಧನೆಗಳನ್ನು ತಿದ್ದುಪಡಿ ಮಾಡಬೇಕಾಗುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ. ನಿಬಂಧನೆ ಸಂಖ್ಯೆ 3, 4, 5, 5(ಎ), (ಬಿ), 6(ಎ), (ಬಿ), (ಸಿ) ನಿರ್ದಿಷ್ಟವಾಗಿ ಎನ್‌ಪಿಆರ್ ಸಿದ್ಧಗೊಳಿಸುವ ಪ್ರಕ್ರಿಯೆಗೆ ಮತ್ತು ಪೌರತ್ವ ಸಂದೇಹಾಸ್ಪದವಾಗಿರುವ ವ್ಯಕ್ತಿಗಳನ್ನು ಗುರುತಿಸುವುದಕ್ಕೆ ಸಂಬಂಧಪಟ್ಟವುಗಳು. ಹೀಗೆ ಸಂದೇಹಾಸ್ಪದರು ಎಂದು ಗುರುತಿಸಲ್ಪಟ್ಟ ಜನಗಳ ಮುಂದಿನ ವಿಚಾರಣೆಯ ಪ್ರಕ್ರಿಯೆ ಮತ್ತು ಅವರಿಂದ ಬೇಕಾಗುವ ದಸ್ತಾವೇಜುಗಳೇನು ಎಂದು ಅವು ವಿಧಿಸುತ್ತವೆ.

ಸಂಸತ್ತಿಗೆ ಗೃಹಮಂತ್ರಿಗಳ ಆಶ್ವಾಸನೆಯನ್ನು ನಂಬಬೇಕಾದರೆ, ಈ ಸರಕಾರ ತಕ್ಷಣವೇ ಈ ನಿಬಂಧನೆಗಳನ್ನು ರದ್ದು ಮಾಡಬೇಕಾಗುತ್ತದೆ. ಹಾಗೆ ಮಾಡಿದಾಗ 2003ರ ಪೌರತ್ವ ತಿದ್ದುಪಡಿ ಕಾಯ್ದೆಯಲ್ಲಿ ಎನ್‌ಆರ್‌ಸಿಗೆ ಕಾನೂನಾತ್ಮಕ ಸ್ಥಾನಮಾನವನ್ನು ನೀಡುವ ಅಂಶಗಳು ನಿರರ್ಥಕಗೊಳ್ಳುತ್ತವೆ, ಅದರಿಂದಾಗಿ ಎನ್‌ಆರ್‌ಸಿಯನ್ನು ರದ್ದು ಮಾಡಲು ಈ ಕಾನೂನನ್ನೂ ತಿದ್ದುಪಡಿ ಮಾಡಬೇಕಾಗುತ್ತದೆ.

ಬಹುಪಾಲು ರಾಜ್ಯ ಸರಕಾರಗಳು ಎನ್‌ಆರ್‌ಸಿಗೆ ವಿರೋಧವನ್ನು ವ್ಯಕ್ತಪಡಿಸಿವೆ. ಇವು ನಮ್ಮ ಜನಸಂಖ್ಯೆಯ ಒಂದು ದೊಡ್ಡ ಭಾಗವನ್ನು ಪ್ರತಿನಿಧಿಸುವವುಗಳು. ಇದಕ್ಕೆ ಗೌರವ ನೀಡಲು ಕೂಡ, 2003ರ ತಿದ್ದುಪಡಿಯನ್ನು ಎನ್‌ಆರ್‌ಸಿಯನ್ನು ರದ್ದು ಪಡಿಸಲಿಕ್ಕಾಗಿ ಸೂಕ್ತವಾಗಿ ತಿದ್ದುಪಡಿ ಮಾಡಬೇಕಾಗುತ್ತದೆ.

ಕೇವಲ ಸಂಸತ್ತಿನಲ್ಲಿ ಒತ್ತಿ ಹೇಳುವುದರಿಂದಷ್ಟೇ, ಜನಗಳಲ್ಲಿ ಎನ್‌ಪಿಆರ್‌ನ್ನು ಮುಂದೊಂದು ದಿನ ಎನ್‌ಆರ್‌ಸಿಗೆ ಅನುಕೂಲ ಕಲ್ಪಿಸಲು ಬಳಸಲಾಗುವುದಿಲ್ಲ ಎಂಬ ವಿಶ್ವಾಸವನ್ನು ಮೂಡಿಸಲು ಸಾಧ್ಯವಿಲ್ಲ ಎಂದು ಒತ್ತಿ ಹೇಳಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸಂಬಂಧಪಟ್ಟ ನಿಬಂಧನೆಗಳನ್ನು ರದ್ದು ಮಾಡಬೇಕು ಮತ್ತು 2003ರ ಕಾಯ್ದೆಯನ್ನು ತಿದ್ದುಪಡಿ ಮಾಡಬೇಕು ಎಂದು ಆಗ್ರಹಿಸಿದೆ.

ತಂತ್ರಜ್ಞಾನದ ಕರಾಳ ದುರುಪಯೋಗವನ್ನು ನಿಲ್ಲಿಸಿ–ಸಿಪಿಐ(ಎಂ) ಪೊಲಿಟ್ ಬ್ಯುರೊ

ದಿಲ್ಲಿಯ ಕೋಮುವಾದಿ ಹಿಂಸಾಚಾರದ ಮೇಲೆ ಸಂ ಸತ್ತಿನಲ್ಲಿ ನಡೆದ ಚರ್ಚೆಯಲ್ಲಿ ಕೇಂದ್ರ ಗೃಹ ಮಂತ್ರಿ ಅಮಿತ್ ಷಾ ಪೋಲೀಸರು ಮತ್ತು ಸರಕಾರ ಹಿಂಸಾಚಾರಕ್ಕೆ ಹೊಣೆಗಾರರಾದ ಗಲಭೆಕೋರರನ್ನು ಗುರುತಿಸಲು ಮುಖ ಗುರುತಿಸುವ ತಂತ್ರಜ್ಞಾನವನ್ನು ಬಳಸುತ್ತಿವೆ ಎಂದು ಹೇಳಿಕೊಂಡಿರುವುದನ್ನು ಬಲವಾಗಿ ಖಂಡಿಸಿದೆ.

ಈ ತಂತ್ರಜ್ಞಾನ ಪ್ರತಿಭಟನಾಕಾರರನ್ನು ಕಾನೂನಿನ ಉಲ್ಲಂಘನೆಯೊಂದಿಗೆ ನಿಖರವಾಗಿ ತಳಕು ಹಾಕುತ್ತವೆ ಎಂದೇನೂ ಇಲ್ಲ. ಅಲ್ಲದೆ ಪೋಲೀಸರು ಗಲಭೆನಿರತ ಜನಜಂಗುಳಿಗೆ ಅನುಕೂಲ ಕಲ್ಪಿಸಿಕೊಡುವುದರಲ್ಲಿ ಮಾತ್ರವೇ ಅಲ್ಲ, ಸಿಸಿಟಿವಿ ಕ್ಯಾಮರಾಗಳನ್ನು ಒಡೆದು ಹಾಕುವಲ್ಲಿಯೂ ಶಾಮೀಲಾಗಿದ್ದರು ಎನ್ನುವುದಕ್ಕೆ ಸ್ಪಷ್ಟವಾದ ವೀಡಿಯೋಗಳಿವೆ ಎಂಬುದೂ ಬೆಳಕಿಗೆ ಬಂದಿದೆ. ಅಂದರೆ ವೀಡಿಯೋಗಳನ್ನು ಸಾಕ್ಷಿಯಾಗಿ ಬಳಸಲು ಪಕ್ಷಪಾತಪೂರ್ಣ ರೀತಿಯಲ್ಲಿ ಆಯ್ಕೆ ಮಾಡುವ ಸಾಧ್ಯತೆ ಇದೆ.

ಇನ್ನೂ ಆಶ್ಚರ್ಯಕಾರೀ ಸಂಗತಿಯೆಂದರೆ, ದಿಲ್ಲಿ ಪೋಲೀಸ್ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ 2018ರಲ್ಲಿ ಈ ತಂತ್ರಜ್ಞಾನದ ನಿಖರತೆ ಕೇವಲ 2ಶೇ. ಎಂದು ದಿಲ್ಲಿ ಹೈಕೋರ್ಟಿನಲ್ಲಿ ಒಪ್ಪಿಕೊಂಡಿದ್ದವು. ಇದು 2019ರಲ್ಲಿ 1ಶೇ.ಕ್ಕೆ ಇಳಿದಿದೆ. ಅಲ್ಲದೆ ಇದು ಲಿಂಗ ವ್ಯತ್ಯಾಸವನ್ನೂ ಗುರುತಿಸಲಾರದು ಎಂದು ಹೇಳಲಾಗಿದೆ.

ಗೃಹಮಂತ್ರಿಗಳು ಸೂಚಿಸಿದ ಉದ್ದೇಶಕ್ಕೆ ಈ ತಂತ್ರಜ್ಞಾನವನ್ನು ಬಳಸಲು ಯಾವುದೇ ಕಾನೂನು ಚೌಕಟ್ಟು ಇಲ್ಲ, ಅಥವ ಯಾವುದೇ ನ್ಯಾಯಾಂಗದ ಆದೇಶವಿಲ್ಲ ಎಂಬುದು ಸ್ಪಷ್ಟವಾಗಿದೆ. ಇಂತಹ ತಂತ್ರಜ್ಞಾನವನ್ನು ಮನಬಂದಂತೆ ಬಳಸುವುದು ಖಾಸಗಿತ್ವದ ಹಕ್ಕುಗಳ ಮತ್ತು ಪ್ರತಿಭಟನೆಯ ಸ್ವಾತಂತ್ರ್ಯದ ಉಲ್ಲಂಘನೆಯಾಗುತ್ತದೆ ಎಂದು ತಾನು ದೃಢವಾಗಿ ಬೊಟ್ಟು ಮಾಡಬಯಸುವುದಾಗಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಈ ತಂತ್ರಜ್ಞಾನ ಗಲಭೆಕೋರರ ಜಾತಿ, ಮತ, ಧಾರ್ಮಿಕ ಗುರುತಿನ ಬೇಧಭಾವ ಮಾಡುವುದಿಲ್ಲ ಎಂಬ ಗೃಹಮಂತ್ರಿಗಳ ಸೂಚನೆಯನ್ನು ಪೊಲಿಟ್‌ಬ್ಯುರೊ ಬಲವಾಗಿ ತಿರಸ್ಕರಿಸಿದೆ. ಇದನ್ನು ಮೇಲೆ ಹೇಳಿರುವ ಕಾರಣಗಳಿಗಾಗಿ ಸಂಪೂರ್ಣವಾಗಿ ತಿರಸ್ಕರಿಸಬೇಕಾಗಿದೆ ಎಂದು ಅದು ಹೇಳಿದೆ.

ಸಂಪಾದಕೀಯ

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಗೆ ಅಧ್ಯಕ್ಷರ ನೇಮಕ

ಕೊನೆಗೂ ರಾಜ್ಯ ಪ್ರದೇಶ ಕಾಂಗ್ರೆಸ್ ಸಮಿತಿಗೆ ನೂತನ ಅಧ್ಯಕ್ಷರು ನೇಮಕಗೊಂಡಿದ್ದಾರೆ ! ಬಹುಸಂಖ್ಯಾತ ಕಾಂಗ್ರೆಸ್ ಕಾರ್ಯಕರ್ತರ ನಿರೀಕ್ಷೆಯಂತೆ ಡಿ.ಕೆ. ಶಿವಕುಮಾರ್ ರವರಿಗೆ ಅತ್ಯಂತ ಸಂದಿಗ್ಧ ಸಮಯದಲ್ಲಿ ಪಕ್ಷವನ್ನು ಮುನ್ನಡೆಸುವ ಜವಾಬ್ದಾರಿಯನ್ನು ನೀಡಲಾಗಿದೆ. ಇದೊಂದು ಕಾಂಗ್ರೆಸ್ ಪಕ್ಷದ ಆಂತರಿಕ ವಿಷಯ. ಆದರೂ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ನಾಯಕರೂ ಪಕ್ಷದ ಹೈ ಕಮಾಂಡ್ ತೀರ್ಮಾನವನ್ನು ಒಮ್ಮತದಿಂದ ಸ್ವೀಕರಿಸಿದಂತೆ ಕಾಣುತ್ತದೆ.ಇದೊಂದು ಒಳ್ಳೆಯ ಬೆಳವಣಿಗೆ ಎಂದು ಹೇಳಬಹುದು. ಅಧ್ಯಕ್ಷರು ಎಲ್ಲ ಕಾರ್ಯಕರ್ತರನ್ನು ಒಟ್ಟಿಗೆ ಕರೆದುಕೊಂಡು ಹೋಗಬೇಕು ಎಂದು ಅಪೇಕ್ಷೆ ಪಟ್ಟಿದ್ದಾರೆ. ಹಾಗೆಯೇ ಡಿ.ಕೆ ಶಿವಕುಮಾರ್ ರವರು ಎಲ್ಲರನ್ನೂ ಒಟ್ಟಿಗೆ ಕರೆದುಕೊಂಡು ಹೋಗುವ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ. ರಾಜ್ಯದ ಉಪಚುನಾವಣೆಯಲ್ಲಿ ಕಾಂಗ್ರೆಸ್ ತೀರ್ವ ಸೋಲನ್ನು ಅನುಭವಿಸಿದಾಗ ಸಹಜವಾಗಿ ಅಧ್ಯಕ್ಷರಾಗಿದ್ದ ದಿನೇಶ್ ಗುಂಡೂರಾವ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರೂ ಅದು ಅಂಗೀಕಾರ ಆಗಿರಲಿಲ್ಲ. ಪರ್ಯಾಯ ಹೆಸರಿಗೆ ಒಮ್ಮತ ಮೂಡಿರಲಿಲ್ಲ. ಮಧ್ಯಪ್ರದೇಶ ರಾಜ್ಯದಿಂದ ದೊರೆತ ಎಚ್ಚರಿಕೆಯನ್ನು ಗಂಭೀರವಾಗಿ ಪರಿಗಣಿಸಿದ ಹೈಕಮಾಂಡ್ ತುರ್ತು ನೇಮಕಕ್ಕೆ ಮುಂದಾಗಿರುವಂತೆ ಭಾಸವಾಗುತ್ತದೆ. ಇಂದು ಯುವಜನತೆಯನ್ನು ಕಡೆಗಣಿಸಿ ಯಾವ ಪಕ್ಷವೂ ಮುನ್ನಡೆ ಸಾಧಿಸಲು ಸಾಧ್ಯವಾಗದು ಎಂಬುದನ್ನೇ ಈ ಬೆಳವಣಿಗೆಗಳು ತೋರಿಸುತ್ತವೆ.

ಜ್ಯೋತಿರಾದಿತ್ಯ ಸಿಂಧಿಯಾ ಕಾಂಗ್ರೆಸ್ ತ್ಯಜಿಸಿ ಬಿಜೆಪಿಗೆ ಹಾರಿದ್ದು ಆಶ್ಚರ್ಯಕರವಾದ ಬೆಳವಣಿಗೆಯಲ್ಲ. ಸಿಂಧಿಯಾ ಕಾಂಗ್ರೆಸ್ ಬಿಡಲು ಅಧಿಕಾರದಾಹ, ಸಮಯ ಸಾಧಕತನ ಕಾರಣವಾಗಿರಬಹುದು. ಅಂಥವರು ಕಾಂಗ್ರೆಸ್ ಪಕ್ಷದಲ್ಲಿ ಗಣನೀಯ ಸಂಖ್ಯೆಯಲ್ಲಿದ್ದಾರೆ. ಅವರು ಕಾಂಗ್ರೆಸ್ ನಲ್ಲಿರುವ ಬಿಜೆಪಿಗರು ಅಥವ ಸಂಘ ಪರಿವಾರದವರು ಆಗಿರುತ್ತಾರೆ. ಸಿಂಧಿಯಾರವರ ಅಜ್ಜಿ ವಿಜಯರಾಜೇ ಸಿಂಧಿಯಾ ಜನಸಂಘ ಮತ್ತು ಬಿಜೆಪಿಯನ್ನು ಕಟ್ಟಿ ಬೆಳೆಸಿದವರು. ಜ್ಯೋತಿರಾದಿತ್ಯ ಸಿಂಧಿಯಾ ಅವರು ಬಿಜೆಪಿಗೆ ಬಂದಿರುವುದನ್ನು 'ಮರಳಿ ಮನೆಗೆ' ಎಂದು ಸ್ವಾಗತಿಸಿದ್ದಾರೆ. ಅಂತವರು ಕಾಂಗ್ರೆಸ್ ಬಿಡುವುದು ಕಾಂಗ್ರೆಸಿಗೆ ಅಂತಿಮವಾಗಿ ಒಳ್ಳೆಯದೇ.

ದೇಶಕ್ಕೆ ಇಂದು ಬಲಿಷ್ಠವಾದ ವಿರೋಧ ಪಕ್ಷಬೇಕಾಗಿದೆ. ಅಥವ ಧೋರಣೆಗಳ ಆಧಾರದಲ್ಲಿ ಒಂದಾದ ವಿರೋಧ ಪಕ್ಷಗಳ ದೃಢವಾದ ಮೈತ್ರಿ ಬೇಕಾಗಿದೆ. ಕೋಮು ದ್ವೇಷವನ್ನು ಭಿತ್ತಿ ಬೆಳೆಸುವ ಶಕ್ತಿಗಳನ್ನು ಹಿಮ್ಮೆಟ್ಟಿಸಲು ಭಗತ್ ಸಿಂಗ್ ರಂತಹ ವೀರರ ಪಡೆಗಳು ಬೇಕಾಗಿವೆ. ಕಾಂಗ್ರೆಸ್ ಅಂತಹ ಒಂದು ಪಕ್ಷವಾಗಿ ಇದನ್ನು ಗುರುತ್ತಿಸುತ್ತಿಲ್ಲ. ಅದು ಜಾತಿ, ಧರ್ಮಗಳ ಆಧಾರದಲ್ಲಿ ಪಕ್ಷವನ್ನು ಕಟ್ಟಲು ಪ್ರಯತ್ನಿಸುತ್ತದೆ. ಒಮ್ಮೆ ಬಾಬಾಗಳ ಕಾಲು ಹಿಡಿಯುತ್ತದೆ. ಒಮ್ಮೆ ಗುಡಿಗುಂಡಾರ ಗಳಿಗೆ ಶರಣಾಗುತ್ತದೆ. ಮತಗಳಿಕೆಗಾಗಿ ಜಾತ್ಯತೀತ ಸಿದ್ಧಾಂತದೊಂದಿಗೆ ರಾಜಿ ಮಾಡಿಕೊಳ್ಳಲಾಗುತ್ತದೆ. ಹಿಂದೂಗಳ ಮತಗಳ ಮೇಲೆ, ಮುಸಲ್ಮಾನರ ಮತಗಳ ಮೇಲೆ ಆಸೆ ಇಟ್ಟುಕೊಂಡು ನಿಷ್ಠುರವಾದ ಜನಪರ ಧೋರಣೆಯನ್ನು ಅನುಸರಿಸಲಾಗದು. ದಿವಾಳಿಕೋರ ಧೋರಣೆಗಳನ್ನು ಕೈಬಿಡಲು, ಜನಪರವಾದ ಧೋರಣೆಗಳಿಗೆ ಬದ್ಧರಾಗಲೂ ಕಾಂಗ್ರೆಸ್ ಇನ್ನೂ ಬಹಳಷ್ಟು ಕಲಿಯುವುದಿದೆ.

ಕರ್ನಾಟಕದಲ್ಲಿ ಡಿ.ಕೆ. ಶಿವಕುಮಾರ್ ಅನೇಕ ಸವಾಲುಗಳನ್ನು ಎದುರಿಸಬೇಕಾಗುವುದು. ಕಾನೂನು ಉಲ್ಲಂಘನೆಯ ತೊಡಕುಗಳು ಹಲವಾರು ಇರಬಹುದು. ಕಾಂಗ್ರೆಸ್ ಪಕ್ಷ ಅವರ ಮೇಲೆ ಬಹಳಷ್ಟು ನಿರೀಕ್ಷೆ ಇಟ್ಟುಕೊಂಡಂತೆ ಕಾಣುತ್ತದೆ. ಮಧ್ಯಪ್ರದೇಶದ 'ಆಪರೇಷನ್ ಕಮಲ'ದ ನಿರ್ವಹಣೆಯ ಜವಾಬ್ದಾರಿಯನ್ನು ಅವರು ವಹಿಸಿಕೊಳ್ಳಬೇಕಾಗಬಹುದು. ಕರ್ನಾಟಕವನ್ನು ಸಂಘಪರಿವಾರದ ಬಲೆಯಿಂದ ಬಿಡಿಸುವ ಪ್ರಯತ್ನದಲ್ಲಿ ರಾಜ್ಯದ ಪ್ರಗತಿಪರ ಶಕ್ತಿಗಳ ಸಹಕಾರ ಇದ್ದೇ ಇರುತ್ತದೆ.

ಯಡಿಯೂರಪ್ಪ ನಂತರ ಯಾರು?

ಬಿಜೆಪಿ ಹೈಕಮಾಂಡ್ ರಾಜ್ಯ ಮುಖ್ಯಮಂತ್ರಿ ಯಡಿಯೂರಪ್ಪನವರನ್ನು ಅವಧಿ ಮೊದಲೇ ಕುರ್ಚಿಯಿಂದ ಕೆಳಗಿಳಿಸುತ್ತಾರೆ ಎಂಬ ಸುದ್ದಿಯೊಂದು ಸುತ್ತಾಡತೊಡಗಿದೆ. ಬಜೆಟ್ ಅಂಗೀಕಾರದ ನಂತರ ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಇರುವುದಿಲ್ಲ ಎನ್ನಲಾಗುತ್ತಿದೆ. ಈ ಬಗ್ಗೆ ಯಡಿಯೂರಪ್ಪ ನವರ ಆಪ್ತರಲ್ಲೇ ಕೆಲವರು ಸಂಭ್ರಮಿಸುತ್ತಿದ್ದಾರೆ. ಯಡಿಯೂರಪ್ಪ ನವರು ವಿರೋಧ ಪಕ್ಷದ ಕೆಲವು ನಾಯಕರೊಂದಿಗೆ ನಡೆದುಕೊಳ್ಳುತ್ತಿರುವುದನ್ನು ಗಮನಿಸಿದರೆ ರಾಜ್ಯ ಬಿಜೆಪಿಯೊಳಗೆ ಏನೋ ನಡೆದಿದೆ. ಎಂಬ ಸಂಶಯ ಉಂಟಾಗುತ್ತದೆ.

ಬಿಜೆಪಿ ಅಖಿಲ ಭಾರತ ನಾಯಕತ್ವ ರಾಜ್ಯದಲ್ಲಿ ಮುಖ್ಯಮಂತ್ರಿ ಪಟ್ಟ ಕಟ್ಟಲು ಬೇರೆ ವ್ಯಕ್ತಿಯನ್ನು ಹುಡುಕುತ್ತಿದ್ದಾರೆ ಎನ್ನಲಾಗುತ್ತದೆ. ಸಂಘ ಪರಿವಾರಕ್ಕೆ ಹೆಚ್ಚು ಬದ್ಧವಾಗಿರುವವರನ್ನು ತರಲಾಗುತ್ತದೆ ಎಂದು ಸಹ ಹೇಳಲಾಗುತ್ತಿದೆ. ಯಡಿಯೂರಪ್ಪರವರಿಗೂ ತಮ್ಮ ಸ್ಥಾನಕ್ಕೆ ಬಂದಿರುವ ಗಂಡಾಂತರ ಅರ್ಥವಾಗಿದೆ. ಆದ್ದರಿಂದಲೇ ತುಮಕೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾಗಿದ್ದ 3 ಸಾವಿರ ಕೋಟಿ ರೂ. ಬರಲಿಲ್ಲ ಎಂದು ಪ್ರಧಾನಿ ಮೋದಿ ಎದುರಿನಲ್ಲೇ ಹೇಳುವ ಎದೆಗಾರಿಕೆ ಪ್ರದರ್ಶಿಸಿದ್ದರು. ಅದರಂತೆಯೇ ಬಜೆಟ್ ಮಂಡಿಸುವಾಗ, ಕೇಂದ್ರದಿಂದ ಬರಬೇಕಾಗಿದ್ದ ತೆರಿಗೆ ಪಾಲಿನ ಮೊತ್ತದಲ್ಲಿ 11,000 ಕೋಟಿ ಕಡಿಮೆಯಾಗಲಿದೆ ಎಂದು ಹೇಳಿದ್ದು ಯಡಿಯೂರಪ್ಪನವರು ಅಸಮಾಧಾನ ವ್ಯಕ್ತಪಡಿಸಿದ ವಿಧಾನವದು.

ಬಿಜೆಪಿ ನಾಯಕತ್ವಕ್ಕೆ ಯಡಿಯೂರಪ್ಪನವರ ನಡವಳಿಕೆ ಇಷ್ಟವಾಗಿಲ್ಲ. ಮುಖ್ಯಮಂತ್ರಿ ಬದಲಿಸುವಲ್ಲಿ ಸಾಕಷ್ಟು ಹಿಂದಿನಿಂದಲೇ ಚರ್ಚೆ ನಡೆಸಲಾದಂತಿದೆ. ಈಗ ಅವರ ಕೆಲವು ಆಪ್ತರು ಅವರ ವಿರುದ್ಧ ಧ್ವನಿ ಎತ್ತುವ ಮಟ್ಟಕ್ಕೆ ಹೋಗಿದ್ದಾರೆ. ಯಡಿಯೂರಪ್ಪ ಕುಟುಂಬ ರಾಜಕಾರಣಕ್ಕೆ ಮುಂದಾಗಿದ್ದಾರೆ. ತನ್ನ ನಂತರ ತನ್ನ ಮಗನನ್ನು ತರಲು ಪ್ರಯತ್ನ ಮಾಡುತ್ತಿದ್ದಾರೆ. ಮಗನು ಕೂಡ ತಂದೆಯ ಉತ್ತರಾಧಿಕಾರಿ ಎಂಬಂತೆ ವರ್ತಿಸುತ್ತಾರೆ. ಸಣ್ಣ ಸಣ್ಣ ವಿಷಯಗಳಿಗೂ ಮುಖ್ಯಮಂತ್ರಿ ಮಕ್ಕಳ ಎದುರು ಕೈಯೊಡ್ಡಬೇಕಾಗುತ್ತದೆ ಎಂದು ಶಾಸಕರಲ್ಲಿ ಅನೇಕರು ಹಿಂದಿನಿಂದ ಹೇಳಿಕೊಳ್ಳುತ್ತಿದ್ದಾರೆ. ಹೀಗಾಗಿ ಯಡಿಯೂರಪ್ಪನವರಿಗೆ ರಾಜ್ಯದಲ್ಲಿ ಜನಪರ ಆಡಳಿತ ನೀಡುವ ಯಾವ ಮಹತ್ವಕಾಂಕ್ಷೆ ಇಲ್ಲದಂತಾಗಿದೆ. ಹೈಕಮಾಂಡ್ ಗೆ ಇನ್ನೊಂದು ಬಲವಾದ ಪೆಟ್ಟು ಕೊಡಲು ಯಡಿಯೂರಪ್ಪ ಸಜ್ಜಾಗುತ್ತಿದ್ದಾರೆಯೇ, ಇನ್ನೂ ಸ್ವಲ್ಪ ಕಾದು ನೋಡಬೇಕು.

ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧ ದುಡಿಯುವ ಮಹಿಳೆಯರಿಂದ ಪ್ರತಿಭಟನೆಗಳು

ವರದಿ: ವಾ.ಉ.

ಈ ವರ್ಷದ ಮಹಿಳಾ ದಿನವನ್ನು ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ವಿರೋಧಿಸಿ ದೇಶಾದ್ಯಂತ ಆಚರಿಸಬೇಕೆಂದು ಸಿಐಟಿಯು ಅಖಿಲ ಭಾರತ ಸಮ್ಮೇಳನ ಚೆನ್ನೈನಲ್ಲಿ ಸೇರಿದಾಗ ಕೈಗೊಂಡ ನಿರ್ಣಯದಂತೆ ಕರಾವಳಿಯ ಪಟ್ಟಣಗಳಲ್ಲೂ ಸಿಐಟಿಯು ನೇತೃತ್ವದಲ್ಲಿ ದುಡಿಯುವ ಮಹಿಳೆಯರು ಮಾರ್ಚ್ 6 ರಂದು ಪ್ರತಿಭಟನೆ ನಡೆಸಿದರು.

ಮಹಿಳೆಯರ ಮೇಲೆ ಕಿರುಕುಳ ನಿಲ್ಲಲಿ, ಸಂಸತ್ತು ವಿಧಾನಸಭೆಗಳಲ್ಲಿ ಮಹಿಳಾ ಮೀಸಲಾತಿ ಜಾರಿಗೊಳ್ಳಲಿ, ಸಮಾನ ಕೆಲಸಕ್ಕೆ ಮಹಿಳೆಯರಿಗೂ ಸಮಾನ ವೇತನ ಜಾರಿಯಾಗಲಿ ಎಂದು ಈ ಪ್ರತಿಭಟನೆಗಳಲ್ಲಿ ಆಗ್ರಹಿಸಲಾಯಿತು.

ಕುಂದಾಪುರ:

ಸಿಐಟಿಯು ಕುಂದಾಪುರ ತಾಲೂಕು ಸಮಿತಿ ನೇತೃತ್ವದಲ್ಲಿ ಕುಂದಾಪುರ ಅಂಚೆ ಕಚೇರಿ ಎದುರು ಧರಣಿಯನ್ನು ನಡೆಸಲಾಯಿತು ಪ್ರತಿಭಟನೆಯನ್ನು ಉದ್ದೇಶಿಸಿ ಸಿಐಟಿಯು ಕುಂದಾಪುರ ತಾಲೂಕಿನ ನಾಯಕಿ ನಾಗರತ್ನ ನಾಡ, ಸಿಐಟಿಯು ಉಡುಪಿ ಜಿಲ್ಲಾಧ್ಯಕ್ಷ ಕೆ.ಶಂಕರ್ ಮಾತನಾಡಿದರು. ಸಿಐಟಿಯು ತಾಲೂಕು ಸಂಚಾಲಕರಾದ ಎಚ್.ನರಸಿಂಹ, ಮುಖಂಡರಾದ ಮಹಾಬಲ ವಡೇರಹೋಬಳಿ, ಸುರೇಶ್ ಕಲ್ಲಾಗರ, ವೆಂಕಟೇಶ ಕೋಣಿ, ಬಲ್ಕೀಸ್ ಬಾನು, ಪದ್ಮಾವತಿ ಶೆಟ್ಟಿ, ಸುಶೀಲ ನಾಡ, ಆರತಿ ಧರಣಿಯಲ್ಲಿ ಭಾಗವಹಿಸಿದ್ದರು. ಇದಕ್ಕೂ ಮುನ್ನ ಕುಂದಾಪುರ ಹೊಸ ಬಸ್ ನಿಲ್ದಾಣದಿಂದ ಅಂಚೆ ಕಚೇರಿವರೆಗೆ ಮೆರವಣಿಗೆ ನಡೆಸಲಾಯಿತು. ಅಂಚೆ ಪ್ರಧಾನ ಪಾಲಕರ ಮೂಲಕ ಪ್ರಧಾನ ಮಂತ್ರಿಗಳಿಗೆ ಮನವಿಯನ್ನು ಸಲ್ಲಿಸಲಾಯಿತು.

ಉಡುಪಿ:

ಸಿಐಟಿಯು ಉಡುಪಿ ತಾಲೂಕು ಸಮಿತಿ ನೇತೃತ್ವದಲ್ಲಿ ಉಡುಪಿಯ ಪ್ರಧಾನ ಅಂಚೆ ಕಚೇರಿಯ ಎದುರು ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು. ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಮಹಿಳಾ ವಿರೋಧಿಯಾದ ಸಿಎಎ, ಎನ್ಆರ್‌ಸಿ ಹಾಗೂ ಎನ್‌ಪಿಆರ್ ಕಾಯ್ದೆಗಳನ್ನು ಕೇಂದ್ರ ಸರಕಾರ ಕೂಡಲೇ ಕೈಬಿಡಬೇಕೆಂದು ಆಗ್ರಹಿಸಿದರು. ಸಿಐಟಿಯು ಮುಖಂಡರಾದ ಪಿ.ವಿಶ್ವನಾಥ ರೈ, ಶಶಿಧರ ಗೊಲ್ಲ ಕೂಡಾ ಧರಣಿ ನಿರತರನ್ನು ಉದ್ದೇಶಿಸಿ ಮಾತನಾಡಿದರು. ಸಿಐಟಿಯು ಉಡುಪಿ ತಾಲೂಕು ಅಧ್ಯಕ್ಷ ರಾಮ ಕರ್ಕಡ, ಕಾರ್ಯದರ್ಶಿ ಕವಿರಾಜ್, ಮುಖಂಡರಾದ ಉಮೇಶ್ ಕುಂದರ್ ಭಾರತಿ, ನಳಿನಿ ಪ್ರತಿಭಟನೆಯಲ್ಲಿ ಉಪಸ್ಥಿತರಿದ್ದರು.

ಮಂಗಳೂರು:

ಸಿಐಟಿಯು ದ.ಕ.ಜಿಲ್ಲಾ ಸಮಿತಿ ಹಾಗೂ ಜನವಾದಿ ಮಹಿಳಾ ಸಂಘಟನೆ ದ.ಕ. ಜಿಲ್ಲಾ ಸಮಿತಿಗಳು ಜಂಟಿಯಾಗಿ ಸಹಾಯಕ ಕಾರ್ಮಿಕ ಆಯುಕ್ತರ ಕಚೇರಿ ಎದುರು ಜೈಲ್‌ಭರೋ ಚಳುವಳಿ ನಡೆಸಿದರು. ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಜನವಾದಿ ಮಹಿಳಾ ಸಂಘಟನೆಯ ದ.ಕ.ಜಿಲ್ಲಾಧ್ಯಕ್ಷೆ ಜಯಂತಿ ಶೆಟ್ಟಿ, ಸಿಐಟಿಯು ರಾಜ್ಯ ಉಪಾಧ್ಯಕ್ಷರಲ್ಲೊಬ್ಬರಾದ ಪದ್ಮಾವತಿ ಶೆಟ್ಟಿ, ಸಿಐಟಿಯು ದ.ಕ.ಜಿಲ್ಲಾಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿದರು. ದುಡಿಯುವ ಮಹಿಳೆಯರ ಮುಖಂಡರಾದ ಗಿರಿಜಾ ಮೂಡಬಿದರೆ, ವಿಲಾಸಿನಿ ತೊಕ್ಕೊಟ್ಟು, ರಾಧಾ ಮೂಡಬಿದರೆ, ವಸಂತಿ ಕುಪ್ಪೆಪದವು, ಲೋಲಾಕ್ಷಿ ಬಂಟ್ವಾಳ, ಪುಷ್ಪ, ಜನವಾದಿ ಮಹಿಳಾ ಸಂಘಟನೆಯ ಮುಖಂಡರಾದ ರಮಣಿ ಮೂಬಿದರೆ ಜಯಲಕ್ಷ್ಮಿ ಜಪ್ಪಿನಮೊಗರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿ, ಜಿಲ್ಲಾ ಮುಖಂಡರಾದ ಯು.ಬಿ.ಲೋಕಯ್ಯ, ಸದಾಶಿವದಾಸ್, ನೋಣಯ್ಯ ಗೌಡ, ಗಂಗಯ್ಯ ಅಮೀನ್ ಉಪಸ್ಥಿತರಿದ್ದರು.

ಜೈಲ್‌ಭರೋ ಚಳುವಳಿಯ ಭಾಗವಾಗಿ ನಡೆಸಿದ ಪ್ರತಿಭಟನೆಯಲ್ಲಿ ಭಾಗವಹಿಸಿದವರನ್ನು ಪೊಲೀಸರು ವಶಕ್ಕೆ ಪಡೆದು ಬಳಿಕ ಬಿಡುಗಡೆ ಮಾಡಿದರು.

ಬೆಳ್ತಂಗಡಿ:

ಸಿಐಟಿಯು ಬೆಳ್ತಂಗಡಿ ತಾಲೂಕು ಸಮಿತಿಯ ನೇತೃತ್ವದಲ್ಲಿ ಅಲ್ಲಿನ ಮಿನಿ ವಿಧಾನಸೌಧದ ಎದುರು ಪ್ರತಿಭಟನೆಯನ್ನು ನಡೆಸಲಾಯಿತು. ಪ್ರತಿಭಟನೆಯನ್ನು ಉದ್ದೇಶಿಸಿ ಸಿಐಟಿಯು ತಾಲೂಕು ಮುಖಂಡರಾದ ಶಿವಕುಮಾರ್ ಎಸ್.ಎಂ, ವಸಂತ ನಡ ಮತ್ತು ಸುಕನ್ಯಾ ಬೆಳ್ತಂಗಡಿ ಮಾತನಾಡಿದರು. ಸಿಐಟಿಯು ಮುಖಂಡರಾದ ಪದ್ಮಾವತಿ, ಲಲಿತಾ, ಶೇಖರ ಲಾಯಿಲ ಉಪಸ್ಥಿತರಿದ್ದರು. ತಹಶೀಲ್ದಾರರ ಮೂಲಕ ದುಡಿಯುವ ಮಹಿಳೆಯರ ಬೇಡಿಕೆಗಳ ಮನವಿಯನ್ನು ಪ್ರಧಾನ ಮಂತ್ರಿಯವರಿಗೆ ಕಳುಹಿಸಿಕೊಡಲಾಯಿತು. ಪ್ರತಿಭಟನೆಗೂ ಮೊದಲು ಬೆಳ್ತಂಗಡಿ ಸಿಐಟಿಯು ಕಚೇರಿಯಿಂದ ಮಿನಿವಿಧಾನಸೌಧದ ವರೆಗೆ ಮೆರವಣಿಗೆ ನಡೆಸಲಾಯಿತು.

ಹಾಸನ ಹೊಸ ಬಸ್ ನಿಲ್ದಾಣದ ಮುಂಭಾಗದ ರೈಲ್ವೆ ಮೇಲ್ಸೇತುವೆ ಕಳಪೆ ಕಾಮಗಾರಿ ಖಂಡಿಸಿ ಸಿಪಿಐಎಂ ಪ್ರತಿಭಟನೆ

15 ವರ್ಷಗಳ ಬೇಡಿಕೆಯ ಫಲವಾಗಿ ಕಳೆದ ಮೂರು ವರ್ಷಗಳ ಹಿಂದೆ ಆರಂಭವಾದ ಎನ್.ಆರ್. ವೃತ್ತದಿಂದ ಹೊಸ ಬಸ್‌ನಿಲ್ದಾಣಕ್ಕೆ ಸಂಪರ್ಕಿಸುವ ರಸ್ತೆಯಲ್ಲಿನ ರೈಲ್ವೆ ಮೇಲ್ಸೇತುವೆಯು ಕುಸಿತವಾಗಿದೆ. ಇದಕ್ಕೆ ಕಳಪೆ ಕಾಮಗಾರಿ ಕಾರಣವಾಗಿದ್ದು, ಕಳಪೆ ಕಾಮಗಾರಿಗೆ ಕಾರಣವಾದ ಗುತ್ತಿಗೆದಾರನನ್ನು ಕಪ್ಪುಪಟ್ಟಿಗೆ ಸೇರಿಸಿ ಗುಣಮಟ್ಟದ ಕಾಮಗಾರಿ ಭರವಸೆ ನೀಡಬೇಕು ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಆಗ್ರಹಿಸುತ್ತದೆ.

ರೈಲ್ವೆ ಮೇಲ್ಸೇತುವೆ ಕುಸಿತ ಖಂಡಿಸಿ ಹಾಸನ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದ ಸಿಪಿಎಂ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಸಿಪಿಎಂ ಸ್ಥಳೀಯ ಸಮಿತಿ ಕಾರ್ಯದರ್ಶಿ ಎಚ್.ಆರ್.ನವೀನ್‌ಕುಮಾರ್, ಹಾಸನ ಹೃದಯ ಭಾಗವಾದ ಎನ್.ಆರ್.ವೃತ್ತದಿಂದ ಹೊಸ ಬಸ್ ನಿಲ್ದಾಣಕ್ಕೆ ಹೋಗುವ ಮಾರ್ಗ ಮಧ್ಯೆ ರೈಲ್ವೆ ಹಳಿ ಇದ್ದು, ಹಾಸನ– ಸಕಲೇಶಪುರ ಮಾರ್ಗದ ರೈಲುಗಳು ಸಂಚರಿಸುವಾಗ ಸಂಚಾರ



ದಟ್ಟಣೆ ಉಂಟಾಗುತ್ತಿತ್ತು. ಇದರಿಂದ ಸಾರ್ವಜನಿಕರು ಪಡುತ್ತಿದ್ದ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ನಡೆದ ಹಲವು ಹೋರಾಟಗಳ ಫಲವಾಗಿ ರೈಲ್ವೆ ಮೇಲ್ಸೇತುವೆ ಮಂಜೂರಾಗಿ ಹಲವು ಅಡೆತಡೆಗಳ ನಡುವೆಯೂ 43 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ಆರಂಭವಾಗಿತ್ತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಕಳೆದ ಎರಡು ವರ್ಷಗಳ ಹಿಂದೆ ಮೇಲ್ಸೇತುವೆ ಕಾಮಗಾರಿ ಆರಂಭವಾಗಿತ್ತು. ಆದರೆ ಕಾಮಗಾರಿಯು ಮುಗಿಯುವ ಮೊದಲೇ ನಿರ್ಮಾಣ ಹಂತದಲ್ಲೇ ಕುಸಿದಿದೆ. ಇದಕ್ಕೆ ಕಳಪೆ ಕಾಮಗಾರಿ ಕಾರಣವಾಗಿದೆ. ಕೇಂದ್ರ ಸರ್ಕಾರದ 20% ಪರ್ಸೆಂಟೇಜ್ ಕಾಮಗಾರಿಯ ಪರಿಣಾಮ ಮತ್ತು ತಾಂತ್ರಿಕ ನೈಪುಣ್ಯತೆಯ ಕೊರತೆಯಿಂದಾಗಿ ಈ ಅವಘಡ ಸಂಭವಿಸಿದೆ ಎಂದರು.

ಕಳಪೆ ಕಾಮಗಾರಿ ಮಾಡುವ ಮೂಲಕ ಭ್ರಷ್ಟಾಚಾರದ ಜೊತೆಗೆ ಜನರ ಜೀವನದ ಜೊತೆ ಚೆಲ್ಲಾಟವಾಡುತ್ತಿರುವ ಇಲಾಖೆ ಮತು ಅಧಿಕಾರಿಗಳ ವಿರುದ್ಧ ಶೀಘ್ರವಾಗಿ ತನಿಖೆ ನಡೆಸಬೇಕು. ತನಿಖೆ ಪೂರ್ಣಗೊಳಿಸುವವರೆಗೆ ಕಾಮಗಾರಿಯನ್ನು ತಡೆಹಿಡಿದು, ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಬೇಕು. ಮತ್ತು ಕೂಡಲೇ ಗುತ್ತಿಗೆದಾರರನ್ನು ಬದಲಾಯಿಸಿ ಉತ್ತಮ ಗುಣಮಟ್ಟದ ಕಾಮಗಾರಿಯನ್ನು ನಡೆಸಿ ರೈಲ್ವೆ ಮೇಲ್ಸೇತುವೆಯಲ್ಲಿ ಹಾಸನ ನಗರದ ಜನತೆ ಸುರಕ್ಷಿತವಾಗಿ ಸಂಚರಿಸಲು ಅವಕಾಶ ಮಾಡಿಕೊಡಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸತ್ಯನಾರಾಯಣ, ಅರವಿಂದ, ಡಾ. ಮಧುಸೂದನ್, ಪ್ರಕಾಶ್, ಎನ್.ಆರ್.ಪ್ರಕಾಶ್, ಶಶಿ ಮತ್ತಿತರರು ಇದ್ದರು.

–ಧರ್ಮೇಶ್

ಬೇಡಿಕೆಗಳ ಈಡೇರಿಕೆಗಾಗಿ ದೇವದಾಸಿಯರ ಪ್ರತಿಭಟನೆ

ಬಳ್ಳಾರಿ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಗನುಗುಣವಾಗಿ ಮೀಸಲಾತಿಯನ್ನು ಹೆಚ್ಚಿಸಿ ದೇವದಾಸಿ ಮಹಿಳೆಯರು ಮತ್ತು ಮಕ್ಕಳಿಗೆ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ಪದಾಧಿಕಾರಿಗಳು ನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ರವಾನಿಸಿದರು.

ರಾಜ್ಯದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಜನ ಸಮುದಾಯಗಳ ಬಹುದಿನಗಳ ಹಕ್ಕೊತ್ತಾಯಕ್ಕೆ ಮಣಿದು ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇ.2 ರಷ್ಟು ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಶೇ. 4 ರಷ್ಟು ಹೆಚ್ಚಿಸುವ ಅಗತ್ಯ ಕೋರಿ ನ್ಯಾಯಮೂರ್ತಿ ಹೆಚ್. ಎನ್. ನಾಗಮೋಹನ ದಾಸ್ ಆಯೋಗವನ್ನು ಸರ್ಕಾರ ರಚಿಸಿರುವುದು ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ ಸ್ವಾಗತಿಸಿದೆ. ಇದು ಬೆಳೆದಿರುವ ಜನಸಂಖ್ಯೆಗನುಗುಣವಾಗಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಮೀಸಲಾತಿ ಸೌಲಭ್ಯವನ್ನು ಹೆಚ್ಚಿಸಬೇಕು ಹಾಗೂ ಮತ್ತು ಅದರಲ್ಲಿ ಕೂಲಿಕಾರರು, ಸಣ್ಣ ರೈತರು, ದಲಿತ ಮಹಿಳೆಯರು ಅದರಲ್ಲೂ ದೇವದಾಸಿ ಮಹಿಳೆಯಾಗಿ ಹಲವು ರೀತಿಯಲ್ಲಿ ಶೋಷಣೆಗೊಳಗಾದವರಿಗೆ ಆದ್ಯತೆ ನೀಡಬೇಕು. ದೇವದಾಸಿ ಮಹಿಳೆಯರು ಮತ್ತು ಅವರ ಮಕ್ಕಳಿಗೆ ಆದ್ಯತೆ ನೀಡಿದರೇ ನಾನಾ ರೀತಿಯಲ್ಲಿ ಅನುಕೂಲವಾಗಲಿದೆ ಎಂದು ಪ್ರತಿಭಟನಾಕಾರರು ತಿಳಿಸಿದರು. – ಮುಖ್ಯವಾಗಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ದೇವದಾಸಿ ಮಹಿಳೆಯರು ದೌರ್ಜನ್ಯಕ್ಕೆ ತುತ್ತಾಗಿ ದುಡಿಮೆಯ ಸೇವೆ ಒದಗಿಸಿದ್ದಾರೆ. ಇಲ್ಲಿಯವರೆಗೂ ಅವರ ದೈಹಿಕ ದೌರ್ಜನ್ಯವನ್ನು ದೇವದಾಸಿ ಪದ್ಧತಿಯ ಮೂಲಕ ಅನುಭವಿಸುತ್ತಾ ಬಂದಿದ್ದೇವೆ. ನಮ್ಮ ಕಣ್ಣೆದುರಿಗೆ ದೇವರಾಗಿ ಬಂದು ಬಲವಂತದ ಸಂಸಾರ ನಡೆಸಿದ ನಮ್ಮ ಮಕ್ಕಳ ತಂದೆಯರು, ಶ್ರೀಮಂತ ಜೀವನವನ್ನು ನಡೆಸುತ್ತಿದ್ದರೂ, ಅವರ ದೌರ್ಜನ್ಯಕ್ಕೊಳಗಾದ ನಮಗಾಗಲೇ ಹಾಗೂ ನಮ್ಮ ಮಕ್ಕಳಿಗೆ ನೆರವು ನೀಡದ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಬಿಡಲಾಗಿದೆ. ತದ ಎದುರಿಗಿದ್ದರೂ ತಡೆದು ಹೆಸರನ್ನು ನಿರ್ವಜನಿಕವಾಗಿ ಹೇಳಲಾಗದೇ ನಮ್ಮ ಮಕ್ಕಳು ಅಪಮಾನದ ಬದುಕನ್ನು ಜೀವನದುದ್ದಕ್ಕೂ ಪ್ರತಿ ಕ್ಷಣವೂ ಎದುರಿಸುತ್ತಿದ್ದಾರೆ. ಈ ಹಿನ್ನಲೆಯಲ್ಲಿ ಸರ್ಕಾರ ಕೂಡಲೇ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಕೆ.ಎನ್. ನಾಗರತ್ನಮ್ಮ, ಬಿ. ಮಾಳಮ್ಮ, ಎ. ಸ್ವಾಮಿ, ಪಿ. ಚಾಂದ, ದುರುಗಮ್ಮ, ಯಲ್ಲಮ್ಮ ಈರಮ್ಮ ಯಂಕಮ್ಮ ಇತರರಿದ್ದರು.

ದಲಿತ ಕುಟುಂಬಗಳಿಗೆ ರಕ್ಷಣೆ ನೀಡಿ

ತಪ್ಪಿತಸ್ಥರ ಮೇಲೆ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ ಡಿಸಿ ಕಚೇರಿ ಮುಂದೆ ಧರಣಿ

ಕೊಪ್ಪಳ ತಾಲೂಕಿನ ಗುಳದಳ್ಳಿ ಗ್ರಾಮದಲ್ಲಿ ದಲಿತರ ಮೇಲಿನ ದೌರ್ಜನ್ಯ ಖಂಡಿಸಿ ತಪ್ಪಿತಸರ ಮೇಲೆ ಕ್ರಮಕ್ಕೆ ಆಗ್ರಹಿಸಿ ದಲಿತ ಸಂಘಟನೆಗಳ ಒಕ್ಕೂಟದಿಂದ ನಗರದ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನಾ ಧರಣಿ ನಡೆಸಿ ಸರ್ಕಾರದ ಗಮನ ಸೆಳೆದರು.

ತಾಲೂಕಿನ ಗುಳದಳ್ಳಿ ಗ್ರಾಮದಲ್ಲಿ ದಲಿತರ ಮೇಲೆ ದೌರ್ಜನ್ಯ ಹೆಚ್ಚಾಗಿದೆ. ಅಲ್ಲಿನ ಡಾ। ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನಗೊಳಿಸಿದ್ದಾರೆ. ಕಾಮದಹನ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಗುಡುದಪ್ಪ ಎನ್ನುವ ವಿದ್ಯಾರ್ಥಿಯ ಮೇಲೆ ಹಲ್ಲೆ ಮಾಡಿದ್ದಾರೆ. ಇದನ್ನು ಕೇಳಲು ಮುಂದಾದ ವಿದ್ಯಾರ್ಥಿನಿಯರ ಮೇಲೆ ದೌರ್ಜನ್ಯ ನಡೆಸಲಾಗಿದೆ. ಅಂಬೇಡ್ಕರ್ ಭಾವಚಿತ್ರಕ್ಕೆ ಕಟ್ಟು ಕಟ್ಟಿಗೆ ಇತರ ವಸ್ತುಗಳನ್ನು ಎಸೆದು ಅಪಮಾನ ಮಾಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಿಧಾನಸಭೆ ಅಧಿವೇಶನದಲ್ಲಿ ದೇಶದ ಸಂವಿಧಾನ ಮತ್ತುಅಸ್ಪೃಶ್ಯತೆ ಆಚರಣೆ, ಜಾತಿ ದೌರ್ಜನ್ಯ ಹಾಗೂ ಡಾ। ಅಂಬೇಡ್ಕರ್ ಕುರಿತು ಗಂಭೀರ ಚರ್ಚೆ ನಡೆದಿರುವಾಗಲೇ ಇಂತಹ ಘಟನೆ ನಡೆಯುತ್ತಿರುವುದು ಬೇಸರದ ಸಂಗತಿ. ಇಲ್ಲಿ ಇಲಾಖೆ ರಾಜಕೀಯ ಒತ್ತಡಕ್ಕೆ ಒಳಗಾಗಿ ಕೌಂಟರ್ ಕೇಸ್ ದಾಖಲು ಮಾಡಿದೆ. ಜಿಲ್ಲಾದ್ಯಂತ ಅತ್ಯತೆ ಆಚರಣೆ ನಡೆದರೂ ಜಿಲ್ಲಾ ಸಮಾಜ ಕಲ್ಯಾಣ ಸರ್ಕಾರಕ್ಕೆ ಸರಿಯಾದ ಮಾಹಿತಿ ನೀಡಿಲ್ಲ ಸಭೆಗಳು ದಾಖಲಾತಿಗೆ ಮಾತ್ರ ಸೀಮಿತವಾಗಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ದಲಿತರ ಮೇಲೆ ದೌರ್ಜನ್ಯ ನಡೆಸಿ, ಡಾ। ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಅಪಮಾನಗೊಳಿಸಿದವರ ಮೇಲೆ ಕಠಿಣ ಶಿಕ್ಷೆಯಾಗಬೇಕು. ಘಟನೆಗೆ ಪ್ರಮುಖ ಕಾರಣರಾದ ಗ್ರಾಪಂ ಅಧ್ಯಕ್ಷ ಹಂದಿಗಾಲಪ್ಪ ಅವರನ್ನು ಅಧ್ಯಕ್ಷ ಸ್ಥಾನದಿಂದ ಅನರ್ಹಗೊಳಿಸಬೇಕು. ಪೊಲೀಸ್ ಅಧಿಕಾರಿಗಳ ಸಮ್ಮುಖದಲ್ಲಿ ಡಾ। ಅಂಬೇಡ್ಕರ್ ಭಾವಚಿತ್ರಕ್ಕೆ ಕಲ್ಲು ಎಸೆಯಲಾಗಿದೆ. ಈ ಬಗ್ಗೆ ಸಮಗ್ರ ತನಿಖೆಯಾಗಬೇಕು. ದೌರ್ಜನ್ಯಕ್ಕೊಳಗಾದ ದಲಿತರ ಮಲೆಯ ಸುಳ್ಳು ಕೇಸ್ ದಾಖಲಿಸಿದ ಮುನಿರಾಬಾದ್ ಪಿಎಸ್‌ಐ ಅವರನ್ನು ಸೇವೆಯಿಂದ ಅಮಾನತು ಮಾಡಬೇಕು. ಜಿಲ್ಲೆಯಲ್ಲಿ ಆಧ್ಯತೆ ಆಚರಣೆ, ಜಾತಿ ತಾರತಮ್ಯ ತಡಯಲು ವಿಫಲವಾದ ತಾಲೂಕು ಹಾಗೂ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳನ್ನು ಅಮಾನತು ಮಾಡಬೇಕೆಂದು ಒತ್ತಾಯಿಸಿದರು.

ಜಿ.ನಾಗರಾಜ, ಸುಂಕಪ್ಪ ಗದಗ, ಹುಸನಪ್ಪ ಬಸವರಾಜ ಮರಕುಂಬಿ, ಬಸವರಾಜ ಗೋನಾಳ, ಹುಸೇನಾಬ್ ನದಾಫ್. ಗುಲಾಮ ಸೈಯದ್ ಹುಸೇನ್, ರಾಮಣ್ಣ ದೊಡ್ಡಮನಿ, ಗಂಗಮ್ಮ ಫಕೀರಮ್ಮ ಕರಿಯಮ್ಮ ಸೇರಿದಂತೆ ಇತರರು ಪಾಲ್ಗೊಂಡಿದ್ದರು.



ಕೊಪ್ಪಳ: ತಾಲೂಕಿನ ಗುಳದಳ್ಳಿ ಗ್ರಾಮದಲ್ಲಿ ಸಂತ್ರಸ್ತ ಕುಟುಂಬಕ್ಕೆ ಪರಿಹಾರ ನೀಡಲು ಡಿಹೆಚ್‌ಎಸ್ ಆಗ್ರಹ

ದಲಿತರಿಗೆ ರಕ್ಷಣೆ ನೀಡುವ ಜೊತೆಗೆ ಪರಿಹಾರ ನೀಡಬೇಕೆಂದು ದಲಿತ ಹಕ್ಕುಗಳ ತಾಲೂಕು ಸಮಿತಿ ನಗರದ ಅಶೋಕ ವೃತ್ತದಲ್ಲಿ ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಿತು.

ಗುಳದಳ್ಳಿ ಗ್ರಾಮದಲ್ಲಿ ದಲಿತರ ಮೇಲೆ ಹಲ್ಲಿ ಮಾಡಿರುವುದಲ್ಲದೇ ಡಾ। ಬಿ.ಆರ್. ಅಂಬೇಡ್ಕರ್ ಬೋರ್ಡ್‌ಗೆ ಕಲ್ಲಿನಿಂದ ಹೊಡೆದು ಅವಮಾನ ಮಾಡಿದ್ದಾರೆ. ಈ ಗಲಾಟೆಯಲ್ಲಿ ಹಲವಾರು ಜನಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆದರೆ ಪೊಲೀಸ್ ಇಲಾಖೆ ಅವರ ಮೇಲೆ ಸುಳ್ಳು ಕೇಸ್ ದಾಖಲು ಮಾಡಿದೆ. ಈ ರೀತಿಯ ದಲಿತರ ಮೇಲಿನ ದೌರ್ಜನ್ಯ ಕೊಪ್ಪಳ ತಾಲೂಕಿನಲ್ಲಿ ನಿರಂತರವಾಗಿ ನಡೆಯುತ್ತಿದ್ದು ಜಿಲ್ಲಾಡಳಿತ ಮೌನವಹಿಸಿದೆ. ಕೂಡಲೇ ಈ ಬಗ್ಗೆ ಎಚ್ಚೆತ್ತು 'ನಿಂದ ಕುಟುಂಬಗಳಿಗೆ ಪರಿಹಾರ ನೀಡಬೇಕು. ದಲಿತ ಕುಟುಂಬಗಳಿಗೆ ಸೂಕ್ತ ರಕ್ಷಣೆ ನೀಡುವ ಜೊತೆಗೆ ಸುಳ್ಳು ಕೇಸ್ ವಾಪಾಸ್ ಪಡೆಯಬೇಕು ಎಂದು ಒತ್ತಾಯಿಸಿ ತಹಶೀಲಾರ್ ಮೂಲಕ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು. ಡಿಹೆಚ್‌ಎಸ್ ಮುಖಂಡರಾದ ನಿತ್ಯಾನಂದಸ್ವಾಮಿ,

ಬೆಳ್ತಂಗಡಿಯಲ್ಲಿ ವಿಶ್ವ ಮಹಿಳಾ ದಿನಾಚರಣೆ:

ಮಾರ್ಚ್ 9 ರಂದು ವಿಶ್ವ ಮಹಿಳಾ ದಿನಾಚರಣೆಯನ್ನು ಬೆಳ್ತಂಗಡಿ ತಾಲೂಕು ಜನವಾದಿ ಮಹಿಳಾ ಸಂಘಟನೆಯ ವತಿಯಿಂದ ವಿಶಿಷ್ಟ ರೀತಿಯಲ್ಲಿ ನಡೆಸಲಾಯಿತು.

ಜನವಾದಿ ಮಹಿಳಾ ಸಂಘಟನೆಯೊಂದಿಗೆ ಸಂಗಾತಿ ಎಕೆಜಿ ಸಹಕಾರಿ ಸಂಘ ಹಾಗೂ ಅಳದಂಗಡಿ ತೋಟಗಾರಿಕಾ ಸಂಘಗಳು ಜಂಟಿಯಾಗಿ ಕಾರ್ಯಕ್ರಮ ಆಯೋಜಿಸಿದ್ದವು. ಬೆಳ್ತಂಗಡಿಯ ವಿಘ್ನೇಶ್ ಸಿಟಿಯಲ್ಲಿ ಮಹಿಳಾ ದಿನಾಚರಣೆ ನಡೆದಿದ್ದು, ಮೂಡಬಿದರೆ ಕಾಲೇಜಿನ ಪ್ರಾಧ್ಯಾಪಕಿಯಾದ ಶ್ರೀಮತಿ ಮಧುಬಾಲ ಅವರು ಮಹಿಳೆಯರು ಸ್ವತ: ಬೆಳೆದ ವಿಷಮುಕ್ತ ತರಕಾರಿಯನ್ನು ಹಾಳೆತಟ್ಟೆಯಲ್ಲಿಟ್ಟು ಮಾರುಕಟ್ಟೆಗೆ ಬಿಡುಗಡೆ ಮಾಡುವುದರೊಂದಿಗೆ ಉದ್ಘಾಟಿಸಿದರು. ಅವರು ಮಾತನಾಡುತ್ತಾ, ಮಹಿಳೆಯರ ಸಮಸ್ಯೆಗಳನ್ನು ಗಂಡಸರು ಅರಿತು ಮಾನಸಿಕವಾಗಿ ಅವರನ್ನು ಪ್ರೋತ್ಸಾಹಿಸಲು ಕರೆ ನೀಡಿದರು.

ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ನಿರ್ದೇಶಕಿ ಶ್ರೀಮತಿ ಶೈಲಜಾ ಅವರು ಮಾತನಾಡಿ ವಿಷಮುಕ್ತ ತರಕಾರಿ ಉತ್ಪನ್ನಗಳ ಮಹತ್ವದ ಬಗ್ಗೆ ತಿಳಿಸಿದರು. ತರಕಾರಿ ಬೆಳೆದ ಮಹಿಳೆಯರನ್ನು ಸನ್ಮಾನಿಸಲಾಯಿತು. ಶ್ರೀ ನಾದ ಮಣಿನಾಲ್ಕೂರು ಮಹಿಳಾಪರ ಹಾಡುಗಳನ್ನು ಹಾಡಿದರು. ಜನವಾದಿ ಮುಖಂಡರಾದ ಸುಕನ್ಯಾ ಬೆಳ್ತಂಗಡಿ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಸ್ವರ್ಣ ನೂರಿತ್ತಾಯ, ಡಾ.ಕೀರ್ತನಾ, ದಿವ್ಯಾ, ಶ್ವೇತಾ, ಚೇತನಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಅಲ್ಲಲ್ಲಿ ಬಿಸಿಯೂಟ ನೌಕರರ ಪ್ರತಿಭಟನೆಗಳು:

ರಾಜ್ಯ ಸರಕಾರ ಈ ಬಾರಿಯ ಬಜೆಟ್‌ನಲ್ಲಿ ಬಿಸಿಯೂಟ ನೌಕರರಿಗೆ ಸಂಭಾವನೆ ಹೆಚ್ಚಿಸುವುದಾಗಿ ಭರವಸೆ ನೀಡಿ ಅವರಿಗೆ ವಂಚಿಸಿರುವುದನ್ನು ಖಂಡಿಸಿ ಬಿಸಿಯೂಟ ನೌಕರರು ಮಾರ್ಚ್ 10 ರಂದು ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಿದರು.

ಉಡುಪಿ:

ಉಡುಪಿ ಅಜ್ಜರಕಾಡು ಹುತಾತ್ಮ ಸ್ಮಾರಕದ ಎದುರು ಉಡುಪಿ ತಾಲುಕು ಬಿಸಿಯೂಟ ನೌಕರರ ಸಂಘದ ವತಿಯಿಂದ ನಡೆದ ಪ್ರತಿಭಟನೆಯನ್ನು ಉದ್ದೇಶಿಸಿ ಸಿಐಟಿಯು ಉಡುಪಿ ಜಿಲ್ಲಾಧ್ಯಕ್ಷ ಕೆ.ಶಂಕರ್, ಕಟ್ಟಡ ಕಾರ್ಮಿಕರ ಸಂಘದ ಜಿಲ್ಲಾ ಗೌರವಾಧ್ಯಕ್ಷ ಯು.ದಾಸು ಭಂಡಾರಿ, ಸಿಐಟಿಯು ಜಿಲ್ಲಾ ಖಜಾಂಚಿ ಶಶಿಧರ ಗೊಲ್ಲ ಮಾತನಾಡಿದರು. ಧರಣಿಯಲ್ಲಿ ಬಿಸಿಯೂಟ ನೌಕರರ ಉಡುಪಿ ತಾಲೂಕು ಅಧ್ಯಕ್ಷೆ ಸುನಂದಾ, ಕಾರ್ಯದರ್ಶಿ ಕಮಲಾ, ಮುಖಂಡರಾದ ಗಿರಿಜಾ, ರತ್ನ ಸಿಐಟಿಯು ಉಡುಪಿ ತಾಲೂಕು ಮುಖಂಡರಾದ ರಾಮ ಕರ್ಕಡ, ಕವಿರಾಜ್, ಭಾಗವಹಿಸಿದ್ದರು.

ಬೈಂದೂರು:

ಬೈಂದೂರು ತಾಲೂಕು ಅಕ್ಷರದಾಸೋಹ ನೌಕರರ ಸಂಘದ ನೇತೃತ್ವದಲ್ಲಿ ಬೈಂದೂರಿನಲ್ಲಿ ಅಕ್ಷರದಾಸೋಹ ನೌಕರರು ಬೈಂದೂರಿನಲ್ಲಿ ಮೆರವಣಿಗೆ ನಡೆಸಿದರು. ಪ್ರತಿಭಟನೆಯನ್ನು ಉದ್ದೇಶಿಸಿ ಸಿಐಟಿಯು ತಾಲೂಕು ಮುಖಂಡ ವೆಂಕಟೇಶ ಕೋಣಿ ಮಾತನಾಡಿದರು. ಸಿಐಟಿಯು ಮುಖಂಡರಾದ ರೊನಾಲ್ಡ್ ರಾಜೇಶ್, ಉದಯ ಗಾಣಿಗ, ಗಣೇಶ ತೊಂಡೆಮಕ್ಕಿ, ಬಿಸಿಯೂಟ ನೌಕರರ ಮುಖಂಡರಾದ ಜಯಶ್ರೀ, ಸಿಂಗಾರಿ, ಶಾರದಾ ಉಪಸ್ಥಿತರಿದ್ದರು.

ದಲಿತ ಶೊಷಣಾ ಮುಕ್ತಿ ಮಂಚ್ ಕೇಂದ್ರ ಸಮಿತಿ ಸಭೆ ಕರೆ

ಸಂವಿಧಾನ ಸಂರಕ್ಷಿಸಿ : ಮೀಸಾಲಾತಿ ಉಳಿಸಿ ಹಾಗು ಸಿ.ಎ.ಎ.– ಎನ್.ಆರ್.ಸಿ–ಎನ್.ಪಿ.ಆರ್. ವಿರುದ್ದ ದೇಶಾದ್ಯಾಂತ ಪ್ರಚಾರಾಂದೋಲನ

ಕೇಂದ್ರದಲ್ಲಿ ಬಿ.ಜೆ.ಪಿ ಬಹುಮತ ಪಡೆದು ಎರಡನೆ ಭಾರಿಗೆ ಅಧಿಕಾರದ ಗದ್ದುಗೆ ಹಿಡಿದಿದೆ ಇದರಿಂದ ಕೋಮುವಾದಿ ಮತ್ತು ಮನುವಾದಿ ಶಕ್ತಿಗಳು ದೈರ್ಯದಿಂದ ಮತ್ತು ಆಕ್ರಮಣಕಾರಿಯಾಗಿ ಕಳೆದ 9 ತಿಂಗಳಲ್ಲಿ ದಲಿತರ ವಿರುದ್ದ ದೌರ್ಜನ್ಯಗಳು ಅನೇಕ ಪಟ್ಟುತೀವ್ರಗೋಳ್ಳುತ್ತಿರುವುದು ಕಂಡುಬರುತ್ತಿದೆ. ಅನೇಕ ಪ್ರಕರಣಗಳಲ್ಲಿ ಅಮಾನವೀಯವಾಗಿ ದಲಿತರನ್ನು ಮುಸ್ಲಿಮರನ್ನು ಅಪರಾದಿಗಳನ್ನಾಗಿ ಕಾನೂನು ಬಾಹಿರವಾಗಿ ಶಿಕ್ಷಗೋಳಪಡಿಸುವುದಾಗಿದೆ.

ಆರ್.ಎಸ್.ಎಸ್ ಮುಖ್ಯಸ್ಥ ಮೋಹನ್ ಭಾಗವತ್ರವರು ಮೀಸಾಲಾತಿ ನೀತಿಯನ್ನು ಪುನರ್ ಚರ್ಚೆ ಮಾಡಬೇಕೆಂದು ಹೇಳಿಕೆ ಸಂಘ ಪರಿವಾರದ ಆಳವಾಗಿ ಬೇರೂರಿವ ದ್ವೇಷದ ನೀತಿಯಾಗಿದೆ. ದುರಾದೃಷ್ಟವಸತ್ ಕೋರ್ಟುಗಳು ಇದೇ ರೀತಿಯಲ್ಲಿ ಮುಂದುವರಿಯುತ್ತಿದ್ದು ಅದೇ ನಿರ್ದೇಶನಗಳನ್ನು ತೀರ್ಪುಗಳನ್ನು ನೀಡುತ್ತಿರುವುದು ಮೀಸಾಲಾತಿ ಅವಕಾಶಗಳನ್ನು ಮತ್ತು ದೌರ್ಜನ್ಯ ಕಾಯಿದೆಯನ್ನು ಕುಗ್ಗಿಸುವ ,ಹಿಮ್ಮೆಟ್ಟಿಸುವ ಸುಪ್ರೀ ಕೋರ್ಟ ತೀರ್ಪುಗಳನ್ನು ಪೆಬ್ರವರಿ 7 ಸುಪ್ರಿಂ ದ್ವಿಸದಸ್ಯ ಪೀಠವ್ಯಾಖಾನಿಸಿರುವ ಸಂವಿದಾನದ ಪರಿಚೇದ 16(40 ಮತ್ತು 16(4ಎ) ಅವಕಾಶ ಕಲ್ಪಸುವ ಅಂಶಗಳಷ್ಟೆ ಮೀಸಾಲಾತಿಯನ್ನು ಎಸ್ಸಿ/ಎಸ್ಟಿ/ಓಬಿಸಿ ಗಳು ಸರ್ಕಾರಿ ಉದ್ಯೋಗಗಳು ಹಾಊ ಬಡ್ತಿಗಳಲ್ಲಿ ಕೇಳುವ ಮೂಲಬೂತ ಹಕ್ಕಿಲವೆಂದು ನೀಡಿದೆ. ಈರೀತಿ ವ್ಯಾಖಾನಿಸುವುದು ದಲಿತ ವಿರೋಧಿ ಮತ್ತು ಬುಡಕಟ್ಟು ಜನರ ವಿರೋಧಿಯಾಗಿದೆ. ಈ ಬಗ್ಗೆ ಕೇಂದ್ರ ಸರ್ಕಾರವೂ ಸಂವಿದಾನ ಹಕ್ಕುಗಳನ್ನು ರಕ್ಷಿಸುವ ಯಾವುದೇ ಕ್ರಮ ಅನುಸರಿಸದೆ ಇರುವುದು ಅಪಾಯಕಾರಿ ಬೆಳವಣೆಗೆಯಾಗಿದೆ. ಅಲ್ಲದೆ ವ್ಯಾಖಾಯನದ ಅವಶ್ಯಕತೆಗಳ ಬಗ್ಗೆ ಸಂವಿದಾನದ ಅಗತ್ಯ ತಿದ್ದುಪಡಿ ತಕ್ಷಣ ತರಬೇಕು. ಆದರೆ ಈ ಸ್ಥಿತಿಯನ್ನು ನೋಡಿದರೆ ದಲಿತರ ಸಾಮಾಜಿಕ ನ್ಯಾಯವನ್ನು ನಿಧಾನವಾಗಿ ಕೋಣೆಗಾಣಿಸವ ಕರಮವಾಗಿದೆ.

ಸಿ.ಎ.ಎ.–ಎನ್.ಆರ್.ಸಿ –ಎನ್.ಸಿ.ಆರ್

ಪಾರ್ಲಿಮೆಂಟನಲ್ಲಿ 2019 ಡಿಸಂಬರ್ 11ರಂದು ಜಾರಿಗೆ ತಂದಿದೆ. ದಾರ್ಮಿಕ ಹಿನ್ನೆಲೆಯ ದೃಷ್ಟಿಕೋನದಿಂದ ನಾಗರೀಕ ರ್ಪಔರತ್ವ ನೀಡುವುದಾಗಿದೆ. ವೈಯುಕ್ತಿಕ, ವ್ಯಕಿಗತ ಮತ್ತು 3 ದಶಗಳಿಂದ ಪಾಕಿಸ್ಥಾನ, ಬಾಂಗ್ಲಾದೇಶ ಮತ್ತು ಅಪಾಘಾನಿಸ್ಥನ ದಿಂದ ಬರುವವರಿ ಈ ನಾಗರೀಕ ಪೌರತ್ವ ಬದಲಾವಣೆ ಸಂವಿದಾನ ವಿರೋಧಿ ಮತ್ತು ಭಾರತದ ಗಣರಾಜ್ಯ ತತ್ವಗಳಾಟದ ಜಾತ್ಯತೀತ ಪ್ರಜಾಪ್ರಭುತ್ವ ತಳಹದಿ ಕ್ಷೀಣುಸುವಂತಾಗುತ್ತದೆ. ಜೊತೆಗೆ ಸಮರೋಪಾದಿಯ ಜಾತ್ಯತೀತ ಕಾನೂನಿನ ಉಲ್ಲಂಘನೆಯಾಗಿದೆ.

ದೇಶ ಮಿಲಿಯನ್ ಬಡಜನರಿಗೆ, ಬುಡಕಟ್ಟು, ದಲಿತರಿಗೆ, ನಿರ್ಗತಿಕರಿಗೆ ನಿರಾಕರಿಸುವುದಾಗಿದೆ ಮತ್ತು ಇತರೆ ಕೆಳ ಅಂಚಿನ ಜನಾಂಗ ಮತ್ತು ಅಲ್ಪಸಂಖ್ಯಾತ. ಮುಸ್ಲಿಂರನ್ನು ಗುರಿಯಾಗಿದೆ. ಈಜನ ವಿಭಾಗಗಳು ದಾಖಲೆಗಳನ್ನು ನೀಡಲು ಸಾದ್ಯವಾಗುದಿಲ್ಲ ಆದ್ದರಿಂದ ಬೇಕಾದ ದಾಖಲೆಗಳನ್ನು ಹೆಸರು ನೋಂದಯಿಸಲು ನರಚಗೆ ಆಗುವುದಿಲ್ಲ

ಕೇಂದ್ರ ಸರ್ಕಾರವೇ ನಿರಂತರವಾಗಿ ಜೆ.ಎನ್,ಯು ಮತ್ತು ನೀತಿಗಳನ್ನು ವಿರೋಧಿಸುವವರ ಮೇಲೆದೌರ್ಜನ್ಯ ನಡೆಸುತಿದ್ದು.

ದಲಿತರಷ್ಟೆಯಲ್ಲದೆ ಇತರೆ ಬಡವರ ಮೇಲೆ ದಾಳಿ.:

ಕೇಂದ್ರ ಸರ್ಕಾರದ ಅನೇಕ ನಿಧಾರಗಳು ಖಾಸಗೀಕರಣ ನೀತಿಯ ಭಾಗವಾಗಿ ಸಾರ್ವಜನಿಕ ಊದ್ದಿಮೆಗಳಾದ ಬ್ಯಾಕ್ಗಳನ್ನು ವೀಲಿಸಗೋಳಿಸುತ್ತಿದೆ. ಶೈಕ್ಷಣಿಕ ವಿದ್ಯಾ ಸಂಸ್ಥೆಗಳಲ್ಲಿ ಶೈಕ್ಷಣಿಕಶುಲ್ಕ ಹೆಚ್ಚಳ , ಸ್ವಾಯುತತೆ ಸಂಸ್ತೆ ಮೇಲೆ ದಾಳಿ ಮಾಡುತ್ತಾ ಅದ್ಯಪಕರ ನೇಮಾಕಾತಿ, ಸೇವೆ ಕಡಿತಗೋಳಿಸತ್ತಿದೆ. ಬಜೆಟ್ನಲ್ಲ ಶಿಕ್ಷಣ ಅನುಧಾನ 3000 ಕೋಟಿ ಕಡಿತ ಮಾಡಿದೆ. ಕಾರ್ಮಿಕ ಕಾನೂನುಗಳನ್ನು ಬದಲಿಸುತ್ತಾ ದೇಶದ ಜನರಿಗೆ ದ್ರೋಹಮಾಡುತ್ತದೆ. 28 ಪಿಎಸ್‌ಯುಮೋದಿಯವರ ಖಾಸಗೀಕರಣದ ಬತ್ತಳಿಕೆಯಲ್ಲಿ ಅತ್ಯಂತ ಉದ್ಯೋಗ ನೀಡುತ್ತಿರುವ ರೈಲ್ವೆ ಸೇರಿದೆ. ದಲಿತರಿಗೆ ಸಿಗಬೇಕಾದ ಬಧುಕಿನ ಆಸರೆ ಮತ್ತು ಶೈಕ್ಷಣಿಕ ಅವಕಾಶಗಳನ್ನು ಕಥಿತ ಮಾಡುತ್ತಿದೆ.

ಈ ಸಂದರ್ಭದಲ್ಲಿ ಕೇಂದ್ರ ರಾಜ್ಯ ಸರ್ಕಾರಗಳಲ್ಲಿರುವ ಬ್ಯಾಕ್ ಲಾಂಗ್ ಹುದ್ದೆ ಗಳಲ್ಲಿ ಮೀಸಾಲತಿ ಹುದ್ದೆ ನಿರಂತರ ಹೆಚ್ಚಿಸುವಂತಾಗಬೇಕು. ಖಾಸಗೀ ಕ್ಷೇತ್ರದಲ್ಲಿಮಿಸಾಲಾತಿ ಜಾರಿಯಾಗಬೇಕು

ಕೇಂದ್ರ ಬಜೆಟ್ : ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಉಜ್ಜಿಹಾಕುವುದು (ಸ್ಕ್ರಾಪಿಂಗ್) ಮಾಡುತ್ತಿದೆ. ಮತ್ತು ಕೇಂದ್ರ ಸರ್ಕಾರ ಹಿಂದಿನ ಬಜೆಟ್ನಲ್ಲಿ ಎಂ.ಐ.ಎನ್.ಆರ್.ಜಿ.ಎ ಖರ್ಚಿನ ಬಾಬ್ತು ಕಢತಮಾಡಿದೆ. ಉದ್ಯೋಗ ಸೃಷ್ಟಿಸುವ ಅವಕಾಶಗಳ ಇಲ್ಲದಾಂತಾಗಿದೆ.

ಕೇಂದ್ರ ಬಜೆಟ್ 2020–21 ದಲಿತ ವಿರೋಧಿ ಮತ್ತು ಬಡವರ ವಿರೋಧಿ ಸೊಷ್ಟವಾಗಿದೆ.ಮೋಧಿ ಬಿಜೆಪಿ ಸರ್ಕಾರದ ನೀತಿಯಾಗಿದೆ.ಕೇಂದ್ರ ಸೆಕ್ಟರ್ ಸ್ಕೀಮ್ 2019–20ರಲ್ಲಿ ಶೇ.11% ಇಳಿದಿದೆ. ಮತ್ತು ಕೇಂದ್ರ ಸಹಭಾಗಿತ್ವದ ಸ್ಕೀಮ್ ಶೇ.4.5% ಆಹಾರ ಸಹಾಯಕ, ಕೃಷಿ ಮತ್ತು ಇತರೆ ಅವಲಂಬಿತ ಚಟುವಟಿಕೆಗಳಿಗೆ ಬಹುಆಘಾತ ಉಂಟಾಗಿದೆ.

ಎಂ.ಐ.ಎನ್.ಆರ್.ಇ.ಜಿ.ಎ ಸಹಾಯಕ ಕಡಿತ (ರೂ. 71,000 ಕೋಟಿಯಿಂದ 61,500 ಕೋಟಿ) ಪಾಗ್ ಸ್ಕೀಮ್, ಪಿಎಂಜೆವೈ, ಆಯುಷ್ಮಾನ್ ಭಾರತ್, ಸ್ವಚ್ಚ ಭಾರತ್ ಮತ್ತು ಪಿ.ಎಂ ಕಿಶಾನ್, ಹೆಚ್ಚಿನ ಕಡತ ಮಾಡಿದೆ.

ದಲಿತ ಶೋಷಣಾ ಮುಕ್ತಿ ಮಂಚ್ (DSMM)

ಕೇಂದ್ರ ಸಮಿತಿ ಸಭೆಯ ತೀರ್ಮಾನಗಳು

ಮಿಸಲಾತಿ ಉಳಿಸಿ ಸಂವಿಧಾನ ಸಂರಕ್ಷಿಸಿ ದೇಶಾದ್ಯಂತ ಪ್ರಚಾರದೋಲನಕ್ಕೆ ಕರೆ

ಕೇಂದ್ರ ಸಮಿತಿಯು ಸಭೆಯು ಮಾರ್ಚ್ 2–3, 2020 ರಂದು ಎರಡು ದಿವಸಗಳ ಕಾಲ ನವದೆಹಲಿಯಲ್ಲಿ ಜರುಗಿತು. ಕೇಂದ್ರ ಸಮಿತಿ ಅಧ್ಯಕ್ಷರಾದ ಕೆ. ರಾಧಕೃಷ್ಣರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಪ್ರಧಾನ ಕಾರ್ಯದರ್ಶಿಗಳಾದ ರಾಮಚಂದ್ರ ಡೋಮ್ ಸಭೆ ಚರ್ಚೆ ವಿಷಯಗಳನ್ನು ಮಂಡಿಸಿದರು. ಕರ್ನಾಟಕದ ವರದಿ ಅಖಿಲಯನ್ನು ಅಖಿಲ ಭಾರತ ಡಿಎಸ್‌ಎಂಎಂ ಉಪಧ್ಯಾಕ್ಷರಾದ ಗೋಪಾಲಕೃಷ್ಣ ಹರಹಳ್ಳಿ (ರಾಜ್ಯ ಸಂಚಾಲಕರು), ಕೇಂದ್ರ ಸಮಿತಿ ಸದಸ್ಯರಾದ ನಾಗರಾಜ್. ಎನ್. (ಡಿಎಚ್‌ಎಸ್ ರಾಜ್ಯ ಸಹ ಸಂಚಾಲಕರು) ಇಬ್ಬರು ಭಾಗವಹಿಸಿದ್ದರು. ಅಖಿಲ ಭಾರತ ಕೇಂದ್ರ ಸಮಿತಿಯಿಂದ ಪಧಾಧಿಕಾರಿಗಳು ಸೇರಿದಂತೆ 13 ರಾಜ್ಯಗಳಿಂದ 22 ಸದಸ್ಯರು ಭಾಗವಹಿಸಿದ್ದರು.

ವಿವಿಧ ರಾಜ್ಯಗಳ ಹಾಜರಿದ ನಾಯಕರು ಕೇಂದ್ರ ಸಮಿತಿಯ ನಂತರ ತಮ್ಮ ರಾಜ್ಯಗಳಲ್ಲಿ ನಡೆದರು. ಹೋರಾಟ ಮತ್ತು ಚಟುವಟಿಕೆ ಸಂಘಟನಾ ಸ್ಥಿತಿಗತಿಯನ್ನು ವರದಿ ಮಾಡಿದರು ಈ ದಿನಗಳಲ್ಲಿ ರಾಜ್ಯದಲ್ಲಿ ನಡೆದರು. ಜಾತಿ ತಾರತಮ್ಯ, ಅಸ್ಪೃಶ್ಯತೆ, ದಲಿತರ ಮತ್ತು ಮಹಿಳೆಯರ ಮೇಲಿನ ನಡೆದಿರುವ ದೌರ್ಜನ್ಯ ಪ್ರಕರಣ ಮತ್ತು ಅಪರಾಧ ವಿರುದ್ಧ ನಡೆದಿರುವ ಘಟನೆಗಳನ್ನು ವಿವರವಾಗಿ ಸಭೆಗೆ ಮಂಡಿಸಿದರು. ಹೆಚ್ಚುತ್ತಿರುವ ದಲಿತರ ದೌರ್ಜನ್ಯಗಳ ವಿರುದ್ಧ ವಿವಿಧ ರಾಜ್ಯಗಳಲ್ಲಿ ಅನೇಕ ಘಟಕಗಳು ದಲಿತರ ಮದ್ಯೆ ಸ್ವತಂತ್ರ್ಯವಾಗಿ ತೀವ್ರ ಪರವಾದ ಪ್ರಚಾರದೋಲನ ಇದೆ ದಲಿತ ಸಂಘಟನೆಗಳ ಜೊತೆ ಸೇರಿ ನಡೆಸುತ್ತಾರೆ. ಕೇಂದ್ರ ಸಮಿತಿ ವರದಿಯನ್ನು ಉಪಾಧ್ಯಾಕ್ಷರಾದ ರಾಘವಲು ಡಿಎಸ್‌ಎಂಎಂ ಕೆಲಸದ ವರದಿಯನ್ನು ಮಂಡಿಸಿದರು. ಬಿಟ್ಟ ವಿಷಯಗಳನ್ನು ಸುಭಾಷಿಣಿ ಆಲಿ ತಿಳಿಸಿ ವರದಿಯನ್ನು ಪೂರ್ಣಗೊಳಿಸಿದರು.


ಸಭೆಯ ಚರ್ಚೆಗಳ ನಂತರ ವರದಿಯನ್ನು ಅಂಗಿಕರಿಸಿದೆ. ಜೊತೆ ಹಲವು ಬೇಡಿಕೆ ತೆಗೆದುಕೊಂಡಿತು. ಮುಂದಿನ ದಿನಗಳಲ್ಲಿ ಕೆಳ ಹಂತದ ಪ್ರಚಾರ ಪ್ರಕ್ಷೋಬೆ ನಡೆಸಿ ರಾಜ್ಯಪಾಲರ ಮೂಲಕ ರಾಷ್ಟ್ರಪತಿ ಮನವಿ ನೀಡಬೇಕೆಂದು ತಿಳಿಸಿದೆ.

ಮುಂದಿನ ಹೋರಾಟಕ್ಕೆ ಕರೆ

1. ಡಿಎಸ್‌ಎಂಎಂ (ರಾಜ್ಯದಲ್ಲಿ ಆಊಖ) ರಾಜ್ಯದಲ್ಲಿ ಸಿಎನ್‌ಎ, ಎನ್‌ಆರ್‌ಸಿ, ಎನ್‌ಎರ್‌ಪಿ ವಿರುದ್ಧ ತೀವ್ರವಾಗಿ ಪ್ರಚಾರ ನಡೆಸಬೇಕು ಅದಕ್ಕಾಗಿ ಡಿಎಚ್‌ಎಸ್ ರಾಜ್ಯ ಸಮಿತಿ ಕರಪತ್ರ ಮುದ್ರಿಸಿ ನಾಗರೀಕ ಕಾಯಿದೆ ಮೇಲಿನ ದಾಳಿ, ಮೀಸಲಾತಿ ವಿರುದ್ಧ ದಾಳಿ ಬಗ್ಗೆ ಪ್ರಚಾರ ನಡೆಸುವುದು.
2. ಏಪ್ರೀಲ್ 11 ಜ್ಯೋತಿ ಬಾಪುಲೆ ಜನ್ಮ ದಿನದಿಂದ ಏಪ್ರೀಲ್ 14 ಡಾ॥ ಬಿ.ಆರ್. ಅಂಬೇಡ್ಕರ್ ಜನ್ಮದಿನದಂದು ವೈವಿದ್ಯಮಯ ಚಟುವಟಿಕೆ, ಮೂಲಕ ಕೆಳಮಟ್ಟದಲ್ಲಿ ದಲಿತರ ನಡುವೆ ಪ್ರಚಾರ ನಡೆಸಬೇಕು. 'ಸಂವಿಧಾನ ಸಂರಕ್ಷಿಸಿ, ಮಿಸಲಾತಿ ಉಳಿಸಿ'. ವಿಷಯವಾಗಿ ರಾಜ್ಯ ಮಟ್ಟದ ವಿಚಾರ ಸಂಕಿರಣ ನಡೆವುದು ಖಅ/ಖಖಿ ಔಃಅ ಸಂಘಟನೆ ಕೊಡಿಕೊಂಡು ಇತ್ತೀಚಗೆ ಮಿಸಲಾತಿ ಬಗ್ಗೆ ಸುಪ್ರಿಂ ಕೊರ್ಟ್ ನೀಡಿರುವ ತೀರ್ಪಿನ ಬಗ್ಗೆ ಜಾಗೃತಿ ಮೂಡಿಸಲು ನಿರ್ಧರಿಸಿದೆ.
3. ದಲಿತರ ಸಾಮಾಜಿಕ ಸಮಸ್ಯೆಗಳ ಬಗ್ಗೆ ಸಮೀಕ್ಷೆ ನಡೆಸುವುದು ಮಾದರಿ ರಾಜ್ಯಕ್ಕೆ ಕಳುಹಿಸಲಾಗುವುದು.
4. ಡಿಎಸ್‌ಎಂಎಂ ಕಾರ್ಯಕರ್ತರಿಗೆ ತರಬೇತಿಗಳನ್ನು ಸಂಘಟಿಸಿವುದು. ಮುಂದಿನ ದಿನಗಳಲ್ಲಿ ಹಿಂದಿ ಮತ್ತು ಇಂಗ್ಲೀಷ್ ತರಗತಿಗಳನ್ನು ಪ್ರತೇಕವಾಗಿ ನಡೆಸಲಾಗುವುದು
5. ಡಿಎಸ್‌ಎಂಎಂ 'ಪರಿಹಾರ ನಿಧಿ' ದೆಹಲಿ ಹಿಂಸಾಚಾರದಲ್ಲಿ ನೊಂದ ಜನರಿಗೆ ನೀಡಲು ಕೇಂದ್ರ ಸಮಿತಿಗೆ ನೀಡಿಬೇಕು.

ಎಲ್ಲಾ ಘಟಕಗಳ ಈ ಬೇಡಿಕೆಗಳನ್ನು ಜಾರಿಮಾಡಲು ಸಮಿತಿಗಳಲ್ಲಿ ಚರ್ಚೆ ಮುನ್ನಡೆಯಲು ಕರೆ ನೀಡಿದೆ.

ರಾಷ್ಟ್ರೀಯ ಶಿಕ್ಷಣ ನೀತಿ 2019



ಅತಿಥಿ ಅಂಕಣ

ಪ್ರೊ. ವಿ.ಎನ್. ಲಕ್ಷ್ಮೀನಾರಾಯಣ

ವಿಶ್ವ ಬ್ಯಾಂಕ್-ಯೂನಿಸೆಫ್ ಸಹಾಯದಿಂದ ನಡೆಯುತ್ತಿರುವ ಅಂಗನವಾಡಿಗಳ ಕಾರ್ಯಕ್ಷೇತ್ರದಲ್ಲಿ ಮೂಗು ತೂರಿಸಿ ಶಿಶು ಶಿಕ್ಷಣ ನೀತಿಯ ಪರಿಷ್ಕರಣೆಯ ಹೆಸರಿನಲ್ಲಿ ಸರ್ಕಾರೀ ಸಂಸ್ಥೆಗಳಿಗೂ ಕೇಸರೀಕರಣವನ್ನು ಚಾಚುವ ಹುನ್ನಾರ ಈಗಾಗಲೇ ಕಾರ್ಯಗತವಾಗುತ್ತಿದೆ. ಪಿಪಿಪಿ ತಂತ್ರವನ್ನು ಬಳಸಿ ಖಾಸಗೀಕರಣಕ್ಕೆ ಒಳಪಡಿಸಿ 2030ರ ಹೊತ್ತಿಗೆ ಸರ್ಕಾರೀ ಶಿಶುವಿಹಾರ ಮತ್ತು ಪ್ರಾಥಮಿಕ ಶಿಕ್ಷಣವನ್ನು ಸ್ಥಗಿತಗೊಳಿಸುವ ಇಲ್ಲವೆ ವಿದ್ಯಾಭಾರತಿಯ ನಿಯಂತ್ರಣಕ್ಕೆ ಒಳಪಡಿಸುವ ಎಲ್ಲ ಲಕ್ಷಣಗಳೂ ಕಾಣಿಸುತ್ತಿವೆ.

ಸಾಂಪ್ರದಾಯಿಕ ಅರ್ಥದಲ್ಲಿ ಶಿಕ್ಷಣಕ್ಕೆ ಎರಡು ಉದ್ದೇಶಗಳಿವೆ. ಮೊದಲನೆಯದು: ಹಿಂದಿನ ತಲೆಮಾರಿನ ಹಿರಿಯರ ಅನುಭವ, ತಿಳುವಳಿಕೆ, ಜ್ಞಾನ, ಕೌಶಲ ಮತ್ತು ಮಾಹಿತಿಗಳನ್ನು ಸಾಮಾಜಿಕವಾಗಿ ಸೂಕ್ತವಾದ ವಿಧಾನಗಳಲ್ಲಿ ಕಿರಿಯರಿಗೆ ದಾಟಿಸುವುದು. ಎರಡು: ಆಳುವ ವರ್ಗದ ಹಿತಾಸಕ್ತಿಗಳು, ನ್ಯಾಯ-ನೆಮ್ಮದಿಗಳ ಲೋಕದೃಷ್ಟಿಗೆ ಜನರು ಕಿರಿಯ ವಯಸ್ಸಿನಿಂದಲೇ ಹೊಂದಿಕೊಳ್ಳುವಂತೆ ಮಾಡುವುದು.

ಸ್ವಾತಂತ್ರ್ಯಾನಂತರದ ಮೊದಲ ನಾಲ್ಕು ದಶಕಗಳವರೆಗೂ ಶಿಕ್ಷಣನ್ನು ಒದಗಿಸುವುದು ಸರ್ಕಾರದ ಜವಾಬ್ದಾರಿಯಾಗಿತ್ತು. ಉಚಿತವಾಗಿ ಅಥವಾ ನಿಗದಿತ ದರದಲ್ಲಿ ಪ್ರಾಥಮಿಕ ಶಿಕ್ಷಣ, ಪ್ರೌಢಶಿಕ್ಷಣ ಮತ್ತು ಉನ್ನತ ಶಿಕ್ಷಣವನ್ನು ಒದಗಿಸುವ ಸರ್ಕಾರೀ ಶಾಲಾ-ಕಾಲೇಜುಗಳ ಜೊತೆಗೆ ಖಾಸಗೀ ಅನುದಾನಿತ ವಿದ್ಯಾಸಂಸ್ಥೆಗಳು ಸಾಮಾಜಿಕ ಸೇವೆಯ ಹೆಸರಿನಲ್ಲಿ ತಮ್ಮದೇ ಆದ ಶುಲ್ಕಗಳನ್ನು ಪಡೆದು ಶಿಕ್ಷಣವನ್ನು ಒದಗಿಸುತ್ತಿದ್ದವು. ಸ್ವಾಯತ್ತತೆಯನ್ನು ಹೊಂದಿದ ವಿಶ್ವವಿದ್ಯಾನಿಲಯಗಳು ಸರ್ಕಾರೀ ಮತ್ತು ಖಾಸಗಿ ವಿದ್ಯಾಸಂಸ್ಥೆಗಳಿಗೆ ಮಾನ್ಯತೆಯನ್ನು ಕೊಡುವ ಅಧಿಕಾರವನ್ನು ಹೊಂದಿದ್ದವು. ಶಿಕ್ಷಣ ಆಗ ವಾಣಿಜ್ಯದಿಂದ ಹೊರತಾದ, ಅಂದರೆ ಲಾಭಕ್ಕಾಗಿ ಮಾಡಬಾರದ ಸೇವೆಯಾಗಿತ್ತು.

ಜಾಗತೀಕರಣಕ್ಕೊಳಪಟ್ಟ ಭಾರತವು 1995 ರಲ್ಲಿ 'ಗ್ಯಾಟ್ಸ್ ಒಪ್ಪಂದ'ಕ್ಕೆ ಸಹಿ ಹಾಕಿದಮೇಲೆ ಸರಕುಗಳ ಸಂಬಂಧದ 'ಗ್ಯಾಟ್ ಒಪ್ಪಂದ'ದಂತೆ ಉನ್ನತ ಶಿಕ್ಷಣವೂ ಸಹ ಲಾಭಮಾಡಿಕೊಳ್ಳಬಹುದಾದ ವಾಣಿಜ್ಯಸೇವೆಯಾಯಿತು. 'ಟ್ರಿಲಿಯನ್ ಡಾಲರ್ ಉದ್ಯಮ' ಎಂಬ ಹೆಗ್ಗಳಿಕೆಯ ವಿದ್ಯೋದ್ಯಮವಾಯಿತು. ಸೆಮಿಸ್ಟರ್ ಪದ್ಧತಿ, ಪಠ್ಯಕ್ರಮದಲ್ಲಿ ಕಂಪ್ಯೂಟರ್ ಶಿಕ್ಷಣದ ಪ್ರವೇಶ, ಶಿಕ್ಷಕರ ಸ್ವಯಂ ಮೌಲ್ಯಾಂಕನ, ಶಿಕ್ಷಣ ಸಂಸ್ಥೆಗಳ ಗುಣಮಟ್ಟದ ನ್ಯಾಕ್ ಮೌಲ್ಯಾಂಕನಗಳು ವಿದ್ಯೋದ್ಯಮಕ್ಕೆ ಹೈಟೆಕ್ ಸ್ಪರ್ಶವನ್ನು ಕೊಟ್ಟವು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವು ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರದ ನಿಯಂತ್ರಣದಲ್ಲೇ ಉಳಿದಿದ್ದರೂ ನಗರ ಪ್ರದೇಶಗಳಲ್ಲಿ ವಿದ್ಯೋದ್ಯಮದ ಪ್ರಭಾವದಲ್ಲಿ ಸಾಕಷ್ಟು ವಾಣಿಜ್ಯೀಕರಣಗೊಂಡು ಅದರ ಒಂದು ಭಾಗವು ಅನಧಿಕೃತವಾಗಿ ಹಣಮಾಡಲೆಂದೇ ಹುಟ್ಟಿಕೊಂಡ ಖಾಸಗೀ ಸಂಸ್ಥೆಗಳ ಅಧೀನಕ್ಕೊಳಪಟ್ಟಿತು. ಶಿಕ್ಷಣಸಂಸ್ಥೆಗಳು ಖಾಸಗೀ ಶಾಲೆ ಮತ್ತು ಸರ್ಕಾರೀ ಶಾಲೆಗಳೆಂಬ ವಿಭಜನೆಗೊಳಪಟ್ಟು ಎರಡರ ನಡುವೆ ಅಸಮಾನ ಸ್ಪರ್ಧೆ ಏರ್ಪಟ್ಟಿತು. ಸರ್ಕಾರೀ ಶಾಲೆ ಬಡವರ ಶಾಲೆಯೆಂದೂ, ಖಾಸಗಿ ಶಾಲೆಯು ಉಳ್ಳವರ ಶಾಲೆಯೆಂದೂ ವರ್ಗದ ಪರಿಭಾಷೆಯಲ್ಲಿ ಶಿಕ್ಷಣದ ಗುಣಮಟ್ಟವನ್ನು ಗುರುತಿಸುವಂತಾಯಿತು.

ಕುಡಿಯುವ ನೀರು, ಸಿದ್ದ ಆಹಾರ, ವೈದ್ಯ-ಔಷಧೋಪಚಾರ, ಆತಿಥ್ಯ ಮತ್ತು ಶಿಕ್ಷಣಗಳನ್ನು ಮಾರಬಾರದ, ವಿಕ್ರಯಿಸಲಾಗದ ವಸ್ತು ಮತ್ತು ಸೇವೆಗಳೆಂಬ ನೈತಿಕ ಕಟ್ಟುಪಾಡಿನ ಸನಾತನ ಹಿಂದೂ ಸಂಸ್ಕೃತಿಯನ್ನು ಭಾರತಕ್ಕೆ ಲಗತ್ತಾದ ರಾಷ್ಟ್ರೀಯ ಸಂಸ್ಕೃತಿಯೆಂದು ಪ್ರತಿಪಾದಿಸುವ ಸಂಘಪರಿವಾರವು ಅಧಿಕಾರಕ್ಕೆ ಬರುವ ಹೊತ್ತಿಗಾಗಲೇ ಉನ್ನತ ಶಿಕ್ಷಣವು ಜಾಗತಿಕ ಹಣಕಾಸು ಬಂಡವಾಳದ ಕೈಯಲ್ಲಿನ ಕಾರ್ಪೊರೇಟ್ ಉದ್ಯಮವಾಗಿ ಗಟ್ಟಿಗೊಂಡಿತ್ತು. ಕುಡಿಯುವ ನೀರು, ಸಿದ್ದ ಆಹಾರ, ವೈದ್ಯ-ಔಷಧೋಪಚಾರ, ಆತಿಥ್ಯ ಮತ್ತು ಶಿಕ್ಷಣಗಳು ಅತ್ಯಧಿಕ ಲಾಭವನ್ನು ತಂದುಕೊಡುವ ವಾಣಿಜ್ಯವಸ್ತು-ಸೇವೆಗಳ ಉದ್ಯಮಗಳಾಗಿ ಭಾರತದ ಉದ್ದಗಲಗಳಲ್ಲಿ ನೆಲೆಗೊಂಡಿದ್ದವು. ಜಾಗತೀಕರಣವು ಭಾರತದ ಆರ್ಥಿಕತೆ ಮತ್ತು ಜನಜೀವನದಲ್ಲಿ ತಂದ ಬದಲಾವಣೆಗಳು ಹಿಂತಿರುಗಿಸಲಾಗದ ಬದಲಾವಣೆಗಳೆಂದು ಆಗಿನ ಅರ್ಥಮಂತ್ರಿ-ಪ್ರಧಾನಿ ಮತ್ತೆ ಮತ್ತೆ ಹೇಳುತ್ತಿದ್ದುದು ಹಿಂದುತ್ವದ ರಾಜಕೀಯದ ಬಲದಿಂದ ಅಧಿಕಾರಕ್ಕೆ ಬಂದ, ತನ್ನದೇ ಆದ ಆರ್ಥಿಕ ನೀತಿಗಳಿಲ್ಲದ, ಸಂಘಪರಿವಾರದ ಅನುಭವಕ್ಕೂ ಬಹುಬೇಗನೆ ಬಂದಿತ್ತು. ಇಂಥ ಸನ್ನಿವೇಶದಲ್ಲಿ ತನ್ನ ಆದರ್ಶ ಸನಾತನ ಸಂಸ್ಕೃತಿಯ ಲೋಕದೃಷ್ಟಿಯನ್ನು ಭಾರತದ ಜನಜೀವನದಲ್ಲಿ ನೆಲೆಗೊಳಿಸಲು ಸಂಘಪರಿವಾರಕ್ಕಿದ್ದ ಒಂದೇ ದಾರಿಯೆಂದರೆ ಜಾಗತಿಕ ಹಣಕಾಸು ಬಂಡವಾಳದ ಜೊತೆ, ಅಂದರೆ ಭಾರತದಲ್ಲಿನ ಜಾಗತಿಕ ಕಾರ್ಪೊರೇಟ್ ಉದ್ಯಮಗಳೊಂದಿಗೆ ಕೈಜೋಡಿಸಿ ಅವುಗಳ ವಾಣಿಜ್ಯ ಕಾರ್ಯಸೂಚಿಯೊಂದಿಗೆ ತನ್ನ ಹಿಂದುತ್ವದ ಕಾರ್ಯಸೂಚಿಯನ್ನು ಬೆಸೆಯುವುದು. 2019ರ ರಾಷ್ಟ್ರೀಯ ಶಿಕ್ಷಣ ನೀತಿ ಇಂಥ ಬೆಸೆಯುವಿಕೆಯನ್ನು ಸಾಧ್ಯಮಾಡುವ ಆಶಯವುಳ್ಳ ರಾಷ್ಟ್ರೀಯ ಶಿಕ್ಷಣ ನೀತಿಯ ಕರಡು.

ಸಂಘಪರಿವಾರದ ಕಾರ್ಯಸೂಚಿಯನ್ನು ನಿರಾವಲಂಬವಾಗಿ ಶಿಕ್ಷಣದಲ್ಲಿ ನೆಲೆಗೊಳಿಸಲು 2016 ರ ಟಿ.ಎಸ್ .ಆರ್ ಸುಬ್ರಮಣ್ಯನ್ ರಾಷ್ಟ್ರೀಯ ಶಿಕ್ಷಣ ನೀತಿಯ ಕರಡಿನ ಮೂಲಕ ಪ್ರಯತ್ನಿಸಲಾಗಿತ್ತು. ಆದರೆ ಬಹುಶಃ ಅದು ಕಾರ್ಯಸಾಧು ಅಲ್ಲವೆಂದು ಕಂಡುಬಂದದ್ದರಿಂದ ಜಾರಿಮಾಡದೆ, ಆ 2016ರ ಕರಡನ್ನೂ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ವರದಿಯನ್ನು 2019ರ ಕಸ್ತೂರಿರಂಗನ್ ರಾಷ್ಟ್ರೀಯ ಶಿಕ್ಷಣ ನೀತಿಯ ಕರಡಿನಲ್ಲಿ ಸೇರಿಸಿ ಸಾರ್ವಜನಿಕ ಚರ್ಚೆಗಾಗಿ ಮಂಡಿಸಲಾಯಿತು. ಅದಕ್ಕೆ 2 ಲಕ್ಷಕ್ಕೂ ಹೆಚ್ಚಿನ ಸಲಹೆಗಳು ಬಂದವೆಂದು ಕಸ್ತೂರಿ ರಂಗನ್ ಹೇಳುತ್ತಾರೆ. ಅವುಗಳಲ್ಲಿ ಶೇ.80 ಭಾಗ ಸಲಹೆಗಳು ಕರಡನ್ನು ಅನುಮೋದಿಸುತ್ತವೆ ಎಂದು, ಅವರು ಹೆಮ್ಮೆಪಡುತ್ತಾರೆ.

ಕೆಲವು ಪೂರಕ ಅಂಕಿ ಅಂಶಗಳು:

* ಭಾರತದಲ್ಲಿ 2017ರಲ್ಲಿ ಸ್ಮಾರ್ಟ್ ಫೋನ್ ಬಳಸುತ್ತಿದ್ದವರ ಸಂಖ್ಯೆ 40.1ಕೋಟಿ. ಇದು 2022 ರ ಹೊತ್ತಿಗೆ 82.9 ಕೋಟಿ ಆಗುವ ಸಾಧ್ಯತೆ ಇದೆ ಎಂದು ಒಂದು ಅಂದಾಜು.
* ಕಳೆದ ಬಜೆಟಿನಲ್ಲಿ ಶೇಕಡಾ 100 ರಷ್ಟು ನೇರ ವಿದೇಶಿ ಬಂಡವಾಳ ಹೂಡಿಕೆಗೆ ಅವಕಾಶ ಕಲ್ಪಿಸಲಾಗಿದೆ.
* ಭಾರತದ ಶಿಕ್ಷಣ ವಲಯದಲ್ಲಿ 2018 ರಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಹೂಡಿದ ಅಂದಾಜು ಹಣ 91.7 ಶತಕೋಟಿಡಾಲರ್ ಆಗಿದ್ದು ಅದು 2019ರಲ್ಲಿ 101.1 ಶತಕೋಟಿ ಡಾಲರ್ ಆಗಿರುವ ಅಂದಾಜಿದೆ.
* ಏಪ್ರಿಲ್ 2000 ದಿಂದ ಮಾರ್ಚ್ 2019 ರ ವರೆಗೆ ಭಾರತದ ಶಿಕ್ಷಣ ವಲಯಕ್ಕೆ ಹರಿದು ಬಂದ ಒಟ್ಟು ವಿದೇಶೀ ಬಂಡವಾಳ 2.47 ಶತಕೋಟಿ ಡಾಲರ್ ಆಗಿದೆ.
* ಭಾರತದ ಶಿಕ್ಷಣದ ಮಾರುಕಟ್ಟೆಯಲ್ಲಿ ಯಾವ ಯಾವ ಅಂಶಗಳ ಪಾಲು ಎಷ್ಟೆಷ್ಟೆಂಬುದು ಟೆಕ್ನೋಪ್ಯಾಕ್ ವಿಸಿಸರ್ಕಲ್ ವಿಶ್ಲೇಷಣೆ ಜಾಲತಾಣದಲ್ಲಿ ಪ್ರಕಟಿಸಿರುವ ಶೇಕಡಾವಾರು ಹಂಚಿಕೆಯಲ್ಲಿ ಹೀಗಿದೆ:ಸ್ಕೂಲ್ ಹಂತದ ಮಾರುಕಟ್ಟೆ ಶೇಕಡಾ 52, ಪಠ್ಯಪುಸ್ತಕ, ಇ ಕಲಿಕೆ ಮತ್ತು ಸಂಬಂಧಿತ ಸೇವೆಗಳ ಮಾರುಕಟ್ಟೆ ಶೇಕಡಾ 28, ಉನ್ನತ ಶಿಕ್ಷಣದ ಮಾರುಕಟ್ಟೆ ಶೇಕಡಾ 15 ಮತ್ತು ತಯಾರಿಕೆ ಮತ್ತು ಸೇವಾಕ್ಷೇತ್ರದಲ್ಲಿನ ವೃತ್ತಿಪರ ಶಿಕ್ಷಣದ ಮಾರುಕಟ್ಟೆ ಶೇಕಡಾ 5.
* ಭಾರತದಲ್ಲಿ ಶಿಕ್ಷಣ ಅಗ್ಗದ ಬೆಲೆಯಲ್ಲಿ ಸಿಗುವುದರಿಂದ ವಿದೇಶೀ ಹೂಡಿಕೆದಾರರು ಶಿಕ್ಷಣ ಉದ್ಯಮದಲ್ಲಿ ಹಣ ಹೂಡಲು ಮುಂದಾಗುತ್ತಾರೆ.
* ಭಾರತದ ಕಾರ್ಪೊರೇಟ್ ಸಂಸ್ಥೆಗಳು 10 ವರ್ಷಗಳಷ್ಟು ಹಿಂದಿನಿಂದಲೇ ಶಿಕ್ಷಣದಲ್ಲಿ ಹಣ ಹೂಡುತ್ತಿದ್ದಾರೆ. ಟಾಟಾ ಇಂಟರ್ ಆಕ್ಟೀವ್ ಸಿಸ್ಟಮ್ಸ್, ಯಶ್ ಬಿರ್ಲಾ ಗ್ರೂಪ್,ಝೀ, ಎಚ್ಚಿಎಫ್ಟಿ, ಎಡುಕಾಂಪ್, ಎವರಾನ್, ಕೋರ್ ಪ್ರಾಜೆಕ್ಟ್ ಅಂಡ್ ಟೆಕ್ನಾಲಜೀಸ್ ಮುಂತಾದ ವಾಣಿಜ್ಯ ಸಂಸ್ಥೆಗಳಲ್ಲದೆ, ಪ್ರಧಾನಿಯ ತವರು ಪ್ರಾಂತ್ಯ ಗುಜರಾತಿನಲ್ಲಿ ಅದಾನಿ ಗ್ರೂಪ್ (ಪೋರ್ಟ್ ಮ್ಯಾನೇಜ್ಮೆಂಟ್ ಇನಸ್ಟಿಟ್ಯೂಟ್), ನಿರ್ಮಾ (ಎನ್.ಐ.ಟಿ, ಎನ್.ಐ.ಎಮ್, ಎನ್.ಐ.ಡಿ.ಎಸ್, ಡಿಪ್ಲೊಮೊ ಸ್ಟಡೀಸ್) ಧೀರೂಭಾಯಿ ಅಂಬಾನಿ ಇನ್ಸಿಟ್ಯೂಟ್ ಆಫ್ ಇನ್ಫರ್ಮೇಶನ್ ಅಂಡ್ ಕಮ್ಯುನಿಕೇಶನ್, ರಮಾಭಾಯಿ ಪಟೇಲ್ ಫೌಂಡೇಶನ್ ಮೊದಲಾದವರನ್ನು ಇಲ್ಲಿ ಹೆಸರಿಸಬಹುದು. ದೇಶದ ಟಾಪ್ ಟೆನ್ ಪಟ್ಟಿಯಲ್ಲಿರುವ 5-6 ಉದ್ಯಮಗಳು ಬೆಂಗಳೂರು ಒಂದರಲ್ಲೇ ಇವೆ.
* ಸಂಘಪರಿವಾರವು ಭಾರತಾದ್ಯಂತ ವಿದ್ಯಾಭಾರತಿ ಹೆಸರಿನಲ್ಲಿ ಈಗಾಗಲೇ ಒಟ್ಟು 12,754 ಶಾಲಾ-ಕಾಲೇಜುಗಳನ್ನು ನಡೆಸುತ್ತಿದೆ. ಅವುಗಳಲ್ಲಿ ಒಟ್ಟು 32,92,896 ಮಂದಿ ವಿದ್ಯಾರ್ಥಿ-ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ
* ಕ್ಲೌಡ್ ತಂತ್ರಜ್ಞಾನ, ಪಠ್ಯ ಮತ್ತು ಸಲಕರಣೆಗಳ ಡಿಜಿಟಲೀಕರಣ, ಇ-ಲರ್ನಿಂಗ್, ಎಮ್-ಲರ್ನಿಂಗ್. ಆನ್-ಲೈನ್-ಲರ್ನಿಂಗ್ ಮುಂತಾದ ಪರಿಕಲ್ಪನೆಗಳ ಹಿಂದಿರುವ ತಾಂತ್ರಿಕತೆ ಮತ್ತು ವ್ಯಾಪಾರದಿಂದ ಕೋಟಿಗಟ್ಟಲೆ ಹಣ ಕಾರ್ಪೊರೇಟ್ ಸಂಸ್ಥೆಗಳಿಗೆ ಸಿಗುತ್ತದೆ.


ಪಠ್ಯಪುಸ್ತಕ ರಚನೆಯ ನೀತಿ ನಿರೂಪಣೆ, ಭಾಷಾ ಬೋಧನೆ, ಸಂಸ್ಕೃತಿ, ನೈತಿಕ ಶಿಕ್ಷಣ, ಯೋಗ ಮುಂತಾದ ವಿಷಯಗಳ ನಿರ್ವಹಣೆಯಲ್ಲಿ ಶಿಕ್ಷಣವನ್ನು ಕೇಸರೀಕರಣ ಗೊಳಿಸಲು ಸಂಘ ಪರಿವಾರಕ್ಕೆ ಅಗಾಧ ಅವಕಾಶಗಳು ಸೃಷ್ಟಿಯಾಗುತ್ತವೆ.

* ವಿಶ್ವ ಬ್ಯಾಂಕ್-ಯೂನಿಸೆಫ್ ಸಹಾಯದಿಂದ ನಡೆಯುತ್ತಿರುವ ಅಂಗನವಾಡಿಗಳ ಕಾರ್ಯಕ್ಷೇತ್ರದಲ್ಲಿ ಮೂಗು ತೂರಿಸಿ ಶಿಶು ಶಿಕ್ಷಣ ನೀತಿಯ ಪರಿಷ್ಕರಣೆಯ ಹೆಸರಿನಲ್ಲಿ ಸರ್ಕಾರೀ ಸಂಸ್ಥೆಗಳಿಗೂ ಕೇಸರೀಕರಣವನ್ನು ಚಾಚುವ ಹುನ್ನಾರ ಈಗಾಗಲೇ ಕಾರ್ಯಗತವಾಗುತ್ತಿದೆ. ಪಿಪಿಪಿ ತಂತ್ರವನ್ನು ಬಳಸಿ ಖಾಸಗೀಕರಣಕ್ಕೆ ಒಳಪಡಿಸಿ 2030ರ ಹೊತ್ತಿಗೆ ಸರ್ಕಾರೀ ಶಿಶುವಿಹಾರ ಮತ್ತು ಪ್ರಾಥಮಿಕ ಶಿಕ್ಷಣವನ್ನು ಸ್ಥಗಿತಗೊಳಿಸುವ ಇಲ್ಲವೆ ವಿದ್ಯಾಭಾರತಿಯ ನಿಯಂತ್ರಣಕ್ಕೆ ಒಳಪಡಿಸುವ ಎಲ್ಲ ಲಕ್ಷಣಗಳೂ ಕಾಣಿಸುತ್ತಿವೆ.

ಹೇಳಿದಷ್ಟೂ ಉಂಟು ಎನ್ನುವಷ್ಟು ಮಾಹಿತಿಗಳು 'ರಾಷ್ಟ್ರೀಯ ಶಿಕ್ಷಣ ನೀತಿಯ' ಯಲ್ಲಿರುವ ಸುಳಿಗಳ ಬಗ್ಗೆ ಜಾಲತಾಣದಲ್ಲಿ ಸಿಗುತ್ತವೆ. ಆದ್ದರಿಂದ ಈ ಲೇಖನವನ್ನು ಒಂದು ಸಣ್ಣ ಕತೆಯೊಂದಿಗೆ ಮುಗಿಸಬಹುದು.

ಒಂದು ಕಾಡಿನಲ್ಲಿ ಒಂದು ಹುಲಿಗೆ ಒಬ್ಬ ಗರ್ಭಿಣಿ ಹೆಂಗಸು ಸಿಗುತ್ತಾಳೆ, ಹುಲಿ ಅವಳನ್ನು ಕೊಲ್ಲದೆ ಗುಹೆಗೆ ಕರೆತಂದು ಆರೈಕೆ ಮಾಡಿ ಮಗು ಹುಟ್ಟುವವರೆಗೆ ಸಲಹುತ್ತದೆ. ಅವಳ ಮಗುವಿಗೆ ತೊಟ್ಟಿಲು ಕಟ್ಟಿ ತೂಗಲು ತನ್ನ ಮರಿಯನ್ನೇ ನೇಮಿಸುತ್ತದೆ. ಹೆಂಗಸಿಗೆ ಹುಲಿ ಮತ್ತು ಹುಲಿ ಮರಿಯ 'ಮಾನವೀಯತೆಯ' ಬಗ್ಗೆ ಆಶ್ಚರ್ಯ, ಕೃತಜ್ಞತೆ ಎರಡೂ. ಒಂದು ದಿನ ಹುಲಿ ಹೊರಗೆ ಹೋಗಿದ್ದಾಗ ಹೆಂಗಸು ವಿಶ್ರಮಿಸುತ್ತಿರುತ್ತಾಳೆ. ತೊಟ್ಟಿಲಲ್ಲಿದ್ದ ಮಗು ಅಳುತ್ತದೆ. ಹುಲಿಮರಿಯು ತೊಟ್ಟಿಲನ್ನು ತೂಗುತ್ತಾ 'ಅಳಬೇಡ ಮಗು ಅಳಬೇಡ, ನೀನು ಇನ್ನೂ ಸ್ವಲ್ಪ ದೊಡ್ಡವನಾದಮೇಲೆ ನಮ್ಮಮ್ಮ ನಿಮ್ಮಮ್ಮನನ್ನು ತಿನ್ನುತ್ತಾಳೆ, ನಾನು ನಿನ್ನನ್ನು ತಿನ್ನುತ್ತೇನೆ, ಈಗ ಮಲಗು ಮಗು ಮಲಗು' ಎಂದದ್ದು ತಾಯಿಗೆ ಕೇಳಿಸುತ್ತದೆ. ●

ದಿಲ್ಲಿ ಹಿಂಸಾಚಾರ: ಬಯಲಿಗೆ ಬಂತು 'ನ್ಯೂ ಇಂಡಿಯಾ'ದ ವಾಸ್ತವತೆ





ಫೆಬ್ರುವರಿ 24ರಿಂದ ಹಿಂದೂ ಜನಜಂಗುಳಿಗೆ ಅಲ್ಪಸಂಖ್ಯಾತ ಸಮುದಾಯ ಮತ್ತು ಅವರ ಆಸ್ತಿಗಳ ಮೇಲೆ ಏನು ಬೇಕಾದರೂ ದಾಂಧಲೆ ನಡೆಸಲು ಪರವಾನಿಗೆ ಕೊಟ್ಟಿದ್ದಂತೆ ಕಾಣುತ್ತದೆ. ಒಬ್ಬನೇ ಒಬ್ಬ ಪೋಲೀಸನ ಮೇಲೂ ಕಾನೂನುಬಾಹಿರ ಕೃತ್ಯ ನಡೆಸಿದ ಆರೋಪ ಹೊರಿಸಿಲ್ಲ. ಈಗ ನಡೆಯುತ್ತಿರುವುದು ಕೃತಕವಾಗಿ ಸೃಷ್ಟಿಸಿದ ಈ ಹಿಂಸಾಚಾರದ ಹಿಂದಿನ ಕೈಗಳನ್ನು ಮರೆಮಾಚುವ ಪ್ರಯತ್ನವಷ್ಟೇ.

ಈ ಹಿಂಸಾಚಾರದ ಹಿನ್ನೆಲೆಯಲ್ಲಿನ ಬೆಳವಣಿಗೆಗಳು, ಹೇಗೆ ಉನ್ನತ ನ್ಯಾಯಾಂಗ ಕ್ರಿಯೆಗಿಳಿಯದಂತೆ ಅಡ್ಡಪಡಿಸಲಾಗುತ್ತಿದೆ, ಅಥವ ಒತ್ತಡಕ್ಕೆ ಒಳಪಡಿಸಲಾಗುತ್ತಿದೆ ಎಂಬುದನ್ನೂ ತೋರಿಸುತ್ತದೆ. ದಿಲ್ಲಿ ಹಿಂಸಾಚಾರ 'ನ್ಯೂ ಇಂಡಿಯಾ'ದ ವಾಸ್ತವತೆಯನ್ನು, ಅಂದರೆ, ಒಂದು ಕೋಮುವಾದಗ್ರಸ್ತ ಪೋಲಿಸ್,ರಾಜಿ ಮಾಡಿಕೊಂಡ ಸಂಸ್ಥೆಗಳು ಮತ್ತು ಕಾರ್ಯಾಂಗದ ಲಜ್ಜಾಹೀನ ಮುಸ್ಲಿಂ-ವಿರೋಧಿ ನಿಲುವು, ಇವುಗಳನ್ನು ಬಯಲಿಗೆ ತಂದಿದೆ.



ಪ್ರಕಾಶ ಕಾರಟ್

ದಿಲ್ಲಿಯ ಕೋಮುವಾದಿ ಹಿಂಸಾಚಾರದ ನಂತರ ಈಗ ಈಶಾನ್ಯ ದಿಲ್ಲಿಯಲ್ಲಿ ಹಿಂಸಾಚಾರ ಭುಗಿಲೆದ್ದಾಗ ಎದ್ದು ಬಂದ ಹಲವಾರು ಪ್ರಶ್ನೆಗಳಿಗೆ ಸ್ಪಷ್ಟೀಕರಣ ಸಿಗುತ್ತಿದೆ. ಇದುವರೆಗೆ, ಈ ಹಿಂಸಾಚಾರದಲ್ಲಿ ಕೊಲ್ಲಲ್ಪಟ್ಟ 53 ಮಂದಿಯ ಹೆಣಗಳು ಸಿಕ್ಕಿವೆ, 500ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಬೆಂಕಿ ಹಚ್ಚುವ, ಪ್ರಕರಣಗಳು ವ್ಯಾಪಕ ಪ್ರಮಾಣದಲ್ಲಿ ನಡೆದಿವೆ, ಮನೆಗಳು, ಅಂಗಡಿಗಳು ಮತ್ತು ಶಾಲೆಗಳಿಗೆ ಕೂಡ ಅಪಾರ ಹಾನಿಗಳುಂಟಾಗಿವೆ.

ಗಲಭೆಗಳ ನಂತರದ ಸನ್ನಿವೇಶವನ್ನು ನಿಭಾಯಿಸುತ್ತಿರುವ ರೀತಿ ದಿಲ್ಲಿಯಲ್ಲಿ ನಡೆದದ್ದು ಕೋಮುವಾದಿ ಹಿಂಸಾಚಾರವನ್ನು ಪ್ರಚೋದಿಸುವ ಮತ್ತು ಸತತವಾಗಿ ನಡೆಯುತ್ತಿದ್ದ ಸಿಎಎ-ವಿರೋಧಿ ಪ್ರತಿಭಟನೆಗಳನ್ನು ಛಿದ್ರಗೊಳಿಸುವ ಹಾಗೂ ಅದನ್ನು ಹಿಂದೂ-ಮುಸ್ಲಿಂ ತಿಕ್ಕಾಟವಾಗಿ ದಿಕ್ಕು ತಪಿಸುವ ಒಂದು ಪೂರ್ವಕಲ್ಪಿತ ಯೋಜನೆ ಎಂಬುದನ್ನು ದೃಢಪಡಿಸಿದೆ.

ಗಲಭೆಗಳ ಸಮಯದಲ್ಲಿ ದಿಲ್ಲಿ ಪೋಲೀಸ್ ವರ್ತಿಸಿದ ರೀತಿ, ಪೋಲೀಸರೇ ಮುಸ್ಲಿಮರ ಮೇಲೆ ಗುರಿಯಿಡುವಲ್ಲಿ ಹಿಂದೂ ಜನಜಂಗುಳಿಯೊಡನೆ ಸಕ್ರಿಯವಾಗಿ ಕೈಜೋಡಿಸಿದ್ದು, ಅಥವ ಹಲ್ಲೆಗಳು ನಡೆಯುತ್ತಿದ್ದಾಗ ದೂರ ನಿಂತುಕೊಂಡು ಯಾವುದೇ ರೀತಿಯಲ್ಲಿ ಸ್ಪಂದಿಸದೇ ಇದ್ದ ವರ್ತನೆ ಈಗ, ಜನಗಳಿಗೆ ಉಂಟು ಮಾಡಿದ ಸಾವು-ನೋವುಗಳು, ಸುಲಿಗೆಗಳು, ಧ್ವಂಸ ಕಾರ್ಯಗಳನ್ನು ನಿಭಾಯಿಸುವಲ್ಲಿಯೂ ಮುಂದುವರೆದಿದೆ.


ಸಂಸತ್ತು , ವಿರಾಮದ ನಂತರ ಮಾರ್ಚ್ 2ರಂದು ಮತ್ತೆ ಸೇರಿತು. ಆದರೆ ಸರಕಾರ ಯಾವುದೇ ಸದನದಲ್ಲಿ ದಿಲ್ಲಿಯಲ್ಲಿ ನಡೆದ ಗಲಭೆಗಳು ಮತ್ತು ಪರಿಸ್ಥಿತಿಗಳ ಬಗ್ಗೆ ಚರ್ಚೆಗೆ ಅವಕಾಶ ನೀಡಲು ನಿರಾಕರಿಸಿತು. ದಿಲ್ಲಿಯಲ್ಲೇ ಕೂತಿದ್ದ ಸಂಸತ್ತು, ಪೂರ್ಣ ಒಂದು ವಾರದ ಕಾಲ ರಾಜಧಾನಿಯಲ್ಲಿನ ಗಂಭೀರ ಪರಿಸ್ಥಿತಿಯತ್ತ ಗಮನ ಹರಿಸಿ, ಮುಂದೇನು ಮಾಡಬೇಕು ಎಂದು ಚರ್ಚಿಸಲು ನಿರಾಕರಿಸಿತು. ಹೋಳಿಯ ನಂತರವೇ ಒಂದು ಚರ್ಚೆ ನಡೆಯುವುದಾಗಿ ಸರಕಾರ ಪ್ರಕಟಿಸಿತು. ಈ ಮೂಲಕ ಮೋದಿ ಸರಕಾರ ಮುಸ್ಲಿಮರಿಗೆ ಕಳಿಸಿದ ಸಂದೇಶ ಸ್ಪಷ್ಟವಾಗಿತ್ತು-"ಸಿಎಎ ಗೆ ನಿಮ್ಮ ವಿರೋಧಕ್ಕೆ ಪಾಟ ಕಲಿಸಲಾಗಿದೆ, ನಿಮ್ಮ ವಿರುದ್ಧ ಎಸಗಿದ ಅಪರಾಧಗಳಿಗೆ ನಿಮಗೆ ಯಾವುದೇ ನ್ಯಾಯ ಸಿಗುವುದಿಲ್ಲ"!

ಅಂತಿಮವಾಗಿ, ಲೋಕಸಭೆ ಮಾರ್ಚ್ 11ರಂದು ಈ ವಿಷಯವನ್ನು ಚರ್ಚಿಸಿದಾಗ, ಈ ಹಿಂಸಾಚಾರದ ಹಿಂದೆ ಒಂದು ಪಿತೂರಿ ಮತ್ತು ಪೂರ್ವಯೋಜನೆ ಇತ್ತು ಎಂದು ಗೃಹಮಂತ್ರಿ ಅಮಿತ್ ಷಾ ಹೇಳಿಕೊಂಡರು. ಇನ್ನೂ ಮುಂದೆ ಹೋಗಿ ಇದರ ಹಿಂದೆ ಪ್ರತಿಪಕ್ಷಗಳು ಮತ್ತು ಸಿಎಎ-ವಿರೋಧಿ ಪ್ರತಿಭಟನಾಕಾರರು ಇದ್ದರು ಎಂದು ದಾವೆ ಇಟ್ಟರು.

ದಿಲ್ಲಿಯ ಹಿಂಸಾಚಾರದಲ್ಲಿ ಸರಕಾರದ ಪಾತ್ರ ಮತ್ತು ಶಾಮೀಲು ಬಯಲಿಗೆ ಬರದಂತೆ ತಪ್ಪಿಸಬೇಕು ಎಂಬುದು ಅವರ ಬಯಕೆಯಾಗಿತ್ತು. ಪೋಲೀಸ್ ನೇರವಾಗಿ ಗೃಹಮಂತ್ರಾಲಯದ ಅಡಿಯಲ್ಲಿ ಇರುವುದರಿಂದಾಗಿ, ಒಂದು ನಾಚಿಕೆಗೇಡೀ ಉದಾಹರಣೆಯನ್ನು ಹಾಕಿ ಕೊಟ್ಟಿದೆ. ಗೃಹಮಂತ್ರಿ ಅಮಿತ್ ಷಾ ಹಿಂಸಾಚಾರವನ್ನು ದೃಢವಾಗಿ ಮೆಟ್ಟಿ ಹಾಕಬೇಕೆಂದು ಯಾವುದೇ ನಿರ್ದೇಶನವನ್ನು ಕೊಡಲಿಲ್ಲ. ಹಿಂದಿರುಗಿ ನೋಡಿದಾಗ, ಫೆಬ್ರುವರಿ 24ರಿಂದ ಹಿಂದೂ ಜನಜಂಗುಳಿಗೆ ಅಲ್ಪಸಂಖ್ಯಾತ ಸಮುದಾಯ ಮತ್ತು ಅವರ ಆಸ್ತಿಗಳ ಮೇಲೆ ಏನು ಬೇಕಾದರೂ ದಾಂಧಲೆ ನಡೆಸಲು ಪರವಾನಿಗೆ ಕೊಟ್ಟಿದ್ದಂತೆ ಕಾಣುತ್ತದೆ. ಇದಕ್ಕೆ ಮೊದಲು ಕೆಲವು ಸೀಮಿತ ಪ್ರದೇಶಗಳಲ್ಲಿ ಮುಸ್ಲಿಮರಿಂದ ಪ್ರತ್ಯುತ್ತರದ ರೀತಿಯ ಹಲ್ಲೆಗಳು ನಡೆದಿದ್ದವು. ಆದರೆ ನಂತರ ಅನಾವರಣಗೊಂಡದ್ದು ಮುಸ್ಲಿಮರ ವಿರುದ್ಧ ಗುರಿಯಿಟ್ಟ ಒಂದು ಹತ್ಯಾಕಾಂಡವೇ, ಅದರಲ್ಲಿ ಪೋಲೀಸ್ ಶಾಮೀಲೂ ಇತ್ತು.

ಪೋಲೀಸರು ಗಲಭೆಕೋರರಿಗೆ ನೆರವಾಗುವ, ಅವರನ್ನು ಪ್ರಚೋದಿಸುವುದನ್ನು ತೋರಿಸುವ ಎಷ್ಟೊಂದು ವೀಡಿಯೋಗಳು ಇದ್ದರೂ, ಇದುವರೆಗೆ ಒಬ್ಬನೇ ಒಬ್ಬ ಪೋಲೀಸನನ್ನು ಹೊಣೆಗಾರನಾಗಿ ಮಾಡಿಲ್ಲ. ಒಂದು ವೀಡಿಯೋ ಅಂತೂ ಪೋಲಿಸರು ಹೇಗೆ ಅದಾಗಲೇ ತೀವ್ರವಾಗಿ ಗಾಯಗೊಂಡಿದ್ದ ಐವರು ಯುವಕರಿಗೆ ಚಿತ್ರಹಿಂಸೆ ಕೊಟ್ಟು ಅವರು ರಾಷ್ಟ್ರಗೀತೆ ಹಾಡುವಂತೆ ಮಾಡಿದರು ಎಂಬುದನ್ನು ಮೈನಡುಗುವಂತೆ ತೋರಿಸಿದೆ. ಈ ಯುವಕರಲ್ಲಿ ಒಬ್ಬ, ಫೈಝಾನ್ ನನ್ನು ಕೊನೆಗಾಲ ಸಮೀಪಿಸಿದೆ ಎನ್ನುವ ವೇಳೆಗಷ್ಟೇ ಪೋಲೀಸ್ ಕಸ್ಟಡಿಯಿಂದ ಬಿಡುಗಡೆ ಮಾಡಲಾಯಿತು. ತೀವ್ರವಾಗಿ ಗಾಯಗೊಂಡಿದ್ದ ಆತ, ಅದರಿಂದಾಗಿಯೇ ಮನೆಯಲ್ಲಿ ಸಾವಪ್ಪಿದ. ಆದರೂ ಚಿತ್ರಹಿಂಸೆ ಅಥವ ಕೊಲೆಯ ಯಾವ ಕೇಸನ್ನೂ ಹಾಕಿಲ್ಲ, ಆತ ಪೋಲೀಸ್ ಕಸ್ಟಡಿಯಲ್ಲಿ ಇರಲೇ ಇಲ್ಲ ಎಂದು ಪೋಲೀಸರು ಈಗ ಹೇಳುತ್ತಿದ್ದಾರೆ.

ಒಬ್ಬನೇ ಒಬ್ಬ ಪೋಲೀಸನ ಮೇಲೂ ಕಾನೂನುಬಾಹಿರ ಕೃತ್ಯ ನಡೆಸಿದ ಆರೋಪ ಹೊರಿಸದೇ ಇರುವುದರಿಂದ, ಈಶಾನ್ಯ ದಿಲ್ಲಿಯ ಹಿಂಸಾಚಾರದ ತನಿಖೆಗಾಗಿ ನೇಮಿಸಿರುವ ಎರಡು ವಿಶೇಷ ತನಿಖಾ ದಳ(ಎಸ್‌ಐಟಿ)ಗಳ ಬಗ್ಗೆ ಹಿಂಸಾಚಾರಕ್ಕೆ ಗುರಿಯಾದವರು ಯಾರೂ ಯಾವುದೇ ವಿಶ್ವಾಸವನ್ನು ಹೊಂದಿಲ್ಲ.



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಈ ಹಿಂಸಾಚಾರ ಭುಗಿಲೇಳುವುದಕ್ಕೆ ಪೂರ್ವಭಾವಿಯಾಗಿ ವಿಧಾನಸಭಾ ಚುಣಾವಣೆಗಳ ವೇಳೆಯಲ್ಲಿ ಬಿಜೆಪಿ ಮುಖಂಡರು ಒಂದು ದುಷ್ಟ ದ್ವೇಷ ಪ್ರಚಾರ ನಡೆಸಿದ್ದರು. ಪ್ರಚೋದನಾಕಾರಿ ಭಾಷಣಗಳು, ಶಾಹೀನ್ ಬಾಗ್ ಮತ್ತಿತರ ಕಡೆಗಳಲ್ಲಿ ಸಿಎಎ-ವಿರೋಧಿ ಪ್ರತಿಭಟನಾಕಾರ ವಿರುದ್ಧ ಹಿಂಸಾಚಾರಕ್ಕೆ ಕುಮ್ಮಕ್ಕು ನೀಡುವ ಮಾತುಗಳು ಕೇಳಬಂದವು. ಆದರೆ, ಪೋಲೀಸರು ಯಾವುದೇ ಕ್ರಮಗಳನ್ನು ಕೈಗೊಳ್ಳಲಿಲ್ಲ.

ಆದರೂ ಇದರ ಚುನಾವಣಾ ಲಾಭ ದಕ್ಕಿಸಿಕೊಳ್ಳುವುದು ಸಾಧ್ಯವಾಗದ್ದರಿಂದ ಬಿಜೆಪಿ-ಆರೆಸ್ಸೆಸ್ ಹಿಂದುತ್ವ ಪಡೆಗಳು ಕೋಮು ಘರ್ಷಣೆಗಳನ್ನು ಬಡಿದೆಬ್ಬಿಸಲು ಜನಜಂಗುಳಿಯನ್ನು ಹರಿಯ ಬಿಟ್ಟರು. ಇದೊಂದು ಪೂರ್ವಯೋಜಿತ ಹಲ್ಲೆ ಎಂಬುದು ಆಯಕಟ್ಟಿನ ಸ್ಥಳಗಳಲ್ಲಿ ಅಗಾಧ ಪ್ರಮಾಣದಲ್ಲಿ ಕಲ್ಲುಗಳನ್ನು ಸಂಗ್ರಹಿಸಿಟ್ಟುದ್ದರಿಂದ, ಮತ್ತು ಬಂದೂಕಧಾರೀ ಸಮಾಜ-ವಿರೋಧಿ ಗುಂಪುಗಳನ್ನು ಅಣಿನೆರೆಸಿರುವುದರಿಮದ ಸ್ಪಷ್ಟವಾಗಿ ಕಾಣುತ್ತದೆ. ಹೊರಗಿನಿಂದ ಗ್ಯಾಂಗ್‌ಗಳನ್ನೂ ಕರೆ ತರಲಾಗಿತ್ತು. ದಿಲ್ಲಿ ವಿಧಾನ ಸಭೆಗೆ ಚುನಾಯಿತರಾದ 8 ಶಾಸಕರಲ್ಲಿ ಐವರು ಹಿಂಸಾಚಾರ ಭುಗಿಲೆದ್ದ ಈಶಾನ್ಯ ದಿಲ್ಲಿಗೇ ಸೇರಿದವರು ಎಂಬುದು ಕೇವಲ ಕಾಕತಾಳೀಯವಲ್ಲ.

ಈಗ ನಡೆಯುತ್ತಿರುವುದು ಇಂತಹ ಕೃತಕವಾಗಿ ಸೃಷ್ಟಿಸಿದ ಹಿಂಸಾಚಾರದ ಹಿಂದಿನ ಕೈಗಳನ್ನು ಮರೆಮಾಚುವ ಪ್ರಯತ್ನವಷ್ಟೇ. ದ್ವೇಷ ಭಾಷಣಗಳನ್ನು ಮಾಡಿದ, ಹಿಂಸಾ ಪ್ರಚೋದಕ ಘೋಷಣೆಗಳನ್ನು ಎತ್ತಿದ ಬಿಜೆಪಿ ಮುಖಂಡರ ವಿರುದ್ಧ ಕ್ರಮ ಕೈಗೊಳ್ಳಲು ದಿಲ್ಲಿ ಪೋಲೀಸ್ ಸತತವಾಗಿ ನಿರಾಕರಿಸಿಕೊಂಡು ಬರುತ್ತಿದ್ದಾರೆ. ಇವುಗಳಲ್ಲಿ ಕೊನೆಯದೆಂದರೆ, ಕಪಿಲ್ ಮಿಶ್ರ ಎಲ್ಲ ಪ್ರತಿಭಟನಾಕಾರರನ್ನು ಒದ್ದೋಡಿಸಲಾಗುವುದು ಎಂದು ಹೇಳುತ್ತಿದ್ದಾಗ, ಒಬ್ಬ ಪೋಲೀಸ್ ಡೆಪ್ಯುಟಿ ಕಮಿಶನರ್ ನೋಡುತ್ತ ನಿಂತಿದ್ದರು. 'ಗದ್ದಾರೋಂಕೋ' ಅಂದರೆ ದೇಶದ್ರೋಹಿಗಳನ್ನು ಗುಂಡಿಟ್ಟು ಕೊಲ್ಲಿ ಎಂಬ ಘೋಷಣೆ ಯಾವುದೇ ಸಮುದಾಯವನ್ನು ಗುರಿಯಿಟ್ಟು ಹೇಳಿದ್ದಲ್ಲ, ಆದ್ದರಿಂದ ಅದು ದ್ವೇಷಭಾಷಣವಾಗುವುದಿಲ್ಲ ಎಂದು ದಿಲ್ಲಿ ಪೋಲೀಸರು ಹೇಳಿರುವುದು ದಾಖಲಾಗಿದೆ.

ಲೋಕಸಭೆಯಲ್ಲಿ ಅಮಿತ್ ಷಾ ಹೇಳಿಕೆಯ ಪ್ರಕಾರ, ಇದುವರೆಗೆ ಪೋಲೀಸರು 700 ಎಫ್‌ಐಆರ್‌ಗಳನ್ನು ಹಾಕಿದ್ದಾರೆ, 2647 ಜನರನ್ನು ಬಂಧಿಸಿದ್ದಾರೆ. ಆದರೆ ಬಂಧಿಸಲ್ಪಟ್ಟವರ ವಿವರಗಳು ಗೊತ್ತಿಲ್ಲ. ಅಪರಾಧ ಸಂಹಿತೆಯ ಸೆಕ್ಷನ್ 41 ಸಿ ಪ್ರಕಾರ ಬಂಧಿಸಲ್ಪಟ್ಟವರ ಪಟ್ಟಿಗಳನ್ನು ಸಂಬಂಧಿತ ಪೋಲಿಸ್ ಠಾಣೆಗಳಲ್ಲಿ ಪ್ರದರ್ಶಿಸಬೇಕು. ಮತ್ತು ಅದರ ಕ್ರೋಡೀಕೃತ ಪಟ್ಟಿಯನ್ನು ರಾಜ್ಯ ಪೋಲಿಸ್ ಕಂಟ್ರೋಲ್ ರೂಮ್‌ನಲ್ಲಿ ಹಾಕಬೇಕು. ಆದರೆ ಇದನ್ನು ಮಾಡಿಲ್ಲ. ಕೊಲೆಯಾದವರಲ್ಲಿ 70ಶೇ. ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿದ್ದರೂ, ವರದಿಗಳ ಪ್ರಕಾರ ಎಫ್‌ಐಆರ್ ಹಾಕಿದಲ್ಲಿ ಬಂಧಿರಾದವರು ಹೆಚ್ಚಾಗಿ ಮುಸ್ಲಿಮರೇ.

ಈ ಹಿಂಸಾಚಾರದ ಹಿನ್ನೆಲೆಯಲ್ಲಿನ ಬೆಳವಣಿಗೆಗಳು, ಹೇಗೆ ಉನ್ನತ ನ್ಯಾಯಾಂಗ ಕ್ರಿಯೆಗಿಳಿಯದಂತೆ ಅಡ್ಡಪಡಿಸಲಾಗುತ್ತಿದೆ, ಅಥವ ಒತ್ತಡಕ್ಕೆ ಒಳಪಡಿಸಲಾಗುತ್ತಿದೆ ಎಂಬುದನ್ನೂ ತೋರಿಸುತ್ತದೆ. ಗಲಭೆಗಳಲ್ಲಿ ಗಾಯಗೊಂಡವರಿಗೆ ನೆರವು ಒದಗಿಸಲು ನಿರ್ಣಾಯಕ ಕ್ರಮ ಕೈಗೊಂಡ ದಿಲ್ಲಿ ಹೈಕೋರ್ಟಿನ ನ್ಯಾಯಮೂರ್ತಿ ಎಸ್.ಮುರಳೀಧರ ಅವರನ್ನು ಇದ್ದಕ್ಕಿದ್ದಂತೆ ವರ್ಗ ಮಾಡಲಾಯಿತು. ಅವರು ಎತ್ತಿಕೊಂಡ ದ್ವೇಷಭಾಷಣದ ಪ್ರಶ್ನೆಯನ್ನು ನ್ಯಾಯಾಂಗ ಪ್ರಕ್ರಿಯೆಯನ್ನು ವಿಳಂಬಗೊಳಿಸುವ ಮೂಲಕ ಮುಂದೂಡುವ ಪ್ರಯತ್ನ ನಡೆದಿದೆ. ಸುಪ್ರಿಂ ಕೋರ್ಟ್, ನಾಗರಿಕರ ಜೀವ ಮತ್ತು ಸ್ವಾತಂತ್ರ್ಯವನ್ನು ರಕ್ಷಿಸುವಲ್ಲಿ ನಿರ್ಣಾಯಕವಾಗಿ ಮಧ್ಯಪ್ರವೇಶಿಸುವ ಬದಲು, ಮತ್ತೊಮ್ಮೆ, ಕಾರ್ಯಾಂಗದ ಆಗ್ರಹಗಳಿಗಷ್ಟೇ ಸ್ಪಂದನೆ ತೋರಿದೆ.

ಹಿಂಸಾಚಾರವನ್ನು ಎದುರಿಸುವಲ್ಲಿ ಎಎಪಿ ಸರಕಾರ ತನ್ನ ಕರ್ತವ್ಯ ನಿಭಾಯಿಸಲಿಲ್ಲ ಎಂದು ಆಪಾದಿಸುವುದು ನ್ಯಾಯಯುತವಲ್ಲ. ಏಕೆಂದರೆ ಪೋಲೀಸ್ ಮತ್ತು ಕಾನೂನು ವ್ಯವಸ್ಥೆ ಅದರ ಅಧಿಕಾರ ವ್ಯಾಪ್ತಿಯಲ್ಲಿ ಇಲ್ಲ. ಅರವಿಂದ ಕೇಜ್ರಿವಾಲ್ ವಿಫಲತೆ ಇರುವುದು ಬೇರೆಡೆಯಲ್ಲಿ. ಕೋಮುವಾದಿ ದ್ವೇಷಕೋರರನ್ನು ಬಲವಾಗಿ ವಿರೋಧಿಸಿ ರಾಜಕೀಯ ಮುಖಂಡತ್ವ ನೀಡಲೊಲ್ಲದೆ ದೂರ ನಿಂತದ್ದು ಅವರ ವಿಫಲತೆ.

ದಿಲ್ಲಿ ಹಿಂಸಾಚಾರ 'ನ್ಯೂ ಇಂಡಿಯಾ'ದ ವಾಸ್ತವತೆಯನ್ನು, ಅಂದರೆ, ಒಂದು ಕೋಮುವಾದಗ್ರಸ್ತ ಪೋಲಿಸ್, ರಾಜಿ ಮಾಡಿಕೊಂಡ ಸಂಸ್ಥೆಗಳು ಮತ್ತು ಕಾರ್ಯಾಂಗದ ಲಜ್ಜಾಹೀನ ಮುಸ್ಲಿಂ-ವಿರೋಧಿ ನಿಲುವು, ಇವುಗಳನ್ನು ಬಯಲಿಗೆ ತಂದಿದೆ.

ಇಂತಹ ಸನ್ನಿವೇಶದಲ್ಲಿ, ಕೋಮುವಾದಿ ಹಿಂಸಾಚಾರಕ್ಕೆ ಹೊಣೆಗಾರರಾದವರಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳುವುದು ಪ್ರಾಥಮಿಕ ಪ್ರಯತ್ನವಾಗಬೇಕು. ಹೀಗಾಗನೇಕಾದರೆ ಒಂದು ನ್ಯಾಯಾಲಯದ ಉಸ್ತುವಾರಿಯಲ್ಲಿನ ತನಿಖೆ ನಡೆಯುವುದು ಅಗತ್ಯವಾಗುತ್ತದೆ. ಒಂದು ನ್ಯಾಯಾಂಗ ತನಿಖೆಯಿಂದ ಫಲ ದೊರೆಯದು. ಅದು ಬಹಳ ಸಮಯ ತೆಗೆದುಕೊಳ್ಳುತ್ತದೆ, ಮತ್ತು ಅದಕ್ಕೆ ಕಾರ್ಯಾಂಗದ ಅಧಿಕಾರ ಇರುವುದಿಲ್ಲ. ಪಾರದರ್ಶಕವಾಗಿ ನಡೆಸುವ ಒಂದು ನ್ಯಾಯಾಲಯದ ಉಸ್ತುವಾರಿಯಲ್ಲಿನ ತನಿಖೆ ನ್ಯಾಯ ವ್ಯವಸ್ಥೆಯಲ್ಲಿ ವಿಶ್ವಾಸವನ್ನು ಸ್ವಲ್ಪ ಮಟ್ಟಿಗೆ ಮತ್ತೆ ನೆಲೆಗೊಳಿಸಬಹುದು.




ಮಂಗಳೂರು



ಬೆಂಗಳೂರು

ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆಯ ಹೋರಾಟದ ಪರಂಪರೆಯನ್ನು ನೆನಪಿಸಿದ ದುಡಿಯುವ ಮಹಿಳೆಯರ 'ಜೈಲ್ ಭರೋ'



ಈ ವರ್ಷದ ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ದೇಶಾದ್ಯಂತ ಸಾವಿರಾರು ದುಡಿಯುವ ಮಹಿಳೆಯರು "ಜೈಲ್ ಭರೋ' ಚಳುವಳಿಯಲ್ಲಿ ಭಾಗವಹಿಸಿ ಈ ದಿನಾಚರಣೆಯ ಹೋರಾಟದ ಮೂಲಸತ್ವವನ್ನು ಮತ್ತೆ ಮುನ್ನೆಲೆಗೆ ತಂದಿದ್ದಾರೆ. ಉತ್ತರ ಭಾರತದಲ್ಲಿ ಭಾರೀ ಮಳೆಯ ಹೊರತಾಗಿಯೂ 20 ರಾಜ್ಯಗಳ 300 ಜಿಲ್ಲೆಗಳಲ್ಲಿ, 385 ಸ್ಥಳಗಳಲ್ಲಿ ಸುಮಾರು 1.5ಲಕ್ಷ ದುಡಿಯುವ ಮಹಿಳೆಯರು ತಮ್ಮ ಏಳು ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸುತ್ತ ಈ ಚಳುವಳಿಯಲ್ಲಿ ಭಾಗವಹಿಸಿದರು ಎಂದು ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿ (ಸಿಐಟಿಯು) ಹೇಳಿದೆ.

ತ್ರಿಪುರಾ, ಗುಜರಾತ್, ಕರ್ನಾಟಕ ಮುಂತಾದ ರಾಜ್ಯಗಳಲ್ಲಿ ದುಡಿಯುವ ಮಹಿಳೆಯರು ಪೋಲೀಸ್ ತಡೆಗಳನ್ನು ಬೇಧಿಸಿ ಮುನ್ನುಗ್ಗಿದರು.

1. ಮಹಿಳೆಯರ ದುಡಿಮೆಗೆ ಮಾನ್ಯತೆ ನೀಡಿ; ಮಹಿಳೆಯರ ಸಂಬಳರಹಿತ ದುಡಿಮೆಯನ್ನು ಜಿಡಿಪಿಯಲ್ಲಿ ಸೇರಿಸಿ
2. ಎಲ್ಲ ವಲಯಗಳಲ್ಲಿ ಮಹಿಳೆಯರಿಗೆ ಕನಿಷ್ಟ ವೇತನ ಮತ್ತು ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಖಾತ್ರಿ ಪಡಿಸಿ.
3. ಸ್ಕೀಂ ಕಾರ್ಮಿಕರಿಗೆ ಸಂಬಂಧಪಟ್ಟ 45ನೇ ಐಎಲ್‌ಸಿಯ ಶಿಫಾರಸುಗಳ ಜಾರಿ.
4. ಎಲ್ಲ ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ತಡೆ ಕಾಯ್ದೆಯ ಕಟ್ಟುನಿಟ್ಟಾದ ಜಾರಿ
5. ಮಹಿಳೆಯರ ವಿರುದ್ಧ ಹಿಂಸಾಚಾರವನ್ನು ತಡೆಯಲು ಪರಿಣಾಮಕಾರೀ ಕ್ರಮ , ಮತ್ತು ನ್ಯಾಯಮೂರ್ತಿ ವರ್ಮಾ ಸಮಿತಿಯ ಶಿಫಾರಸುಗಳ ಜಾರಿ.
6. ಎಲ್ಲ ಶಾಸನಸಭೆಗಳಲ್ಲಿ ಮಹಿಳೆಯರಿಗೆ 33ಶೇ. ಮೀಸಲಾತಿ ಒದಗಿಸಲು ಕಾನೂನನ್ನು ಕೂಡಲೇ ತರಬೇಕು.
7. ತಾರತಮ್ಯಪೂರ್ಣ, ವಿಭಜನಕಾರೀ ಮತ್ತು ಸಂವಿಧಾನ-ವಿರೋಧಿ ಸಿಎಎ ಹಾಗೂ ಎನ್‌ಪಿಆರ್/ಎನ್‌ಆರ್‌ಸಿ ಪ್ರಕ್ರಿಯೆಯನ್ನು ಈ ಕೂಡಲೇ ಹಿಂತೆಗೆದುಕೊಳ್ಳಿ

ಈ ಏಳು ಬೇಡಿಕೆಗಳ ಮೇಲೆ ಈ ಚಳುವಳಿ ನಡೆದಿದೆ.

ಚೆನ್ನೈನಲ್ಲಿ ನಡೆದ ಸಿಐಟಿಯುನ 16ನೇ


ಅಸ್ಸಾಂ


ತಮಿಳುನಾಡು


ಪಂಜಾಬ್


ಆಂಧ್ರಪ್ರದೇಶ




ಗುಜರಾತ


ಉತ್ತರಾಖಂಡ



ಹರ್ಯಾಣ

ಸಮ್ಮೇಳನ ಮಹಿಳೆಯರ ಶೋಷಣೆ ಮತ್ತು ತಾರತಮ್ಯದ ವರ್ಗ ಕಥನವನ್ನು ಮತ್ತೆ ಮುಖ್ಯಧಾರೆಗೆ ತರಲು ಈ ಚಳುವಳಿಗೆ ಕರೆ ನೀಡಿತ್ತು. ಈ ಮೂಲಕ ದುಡಿಯುವ ವರ್ಗದ ಮತ್ತು ನಾಗರಿಕ ಸಮಾಜದ ಭಾಗವಾಗಿ ಮಹಿಳೆಯರ ಸಮಾನ ಹಕ್ಕುಗಳಿಗಾಗಿ ಸಮರಧೀರ ಹೋರಾಟವಾಗಿ ಆರಂಭವಾದ ಈ ಅಂತರ್‍ರಾಷ್ಟ್ರೀಯ ಮಹಿಳಾ ದಿನಾಚರಣೆಯ ಹೋರಾಟದ ಪರಂಪರೆಯನ್ನು ಮತ್ತೆ ನೆನಪಿಸಿಕೊಳ್ಳಲಾಗಿದೆ.

ಈ ಬಾರಿ ಮಾರ್ಚ್ 8 ಭಾನುವಾರವಾದ್ದರಿಂದ ಮಾರ್ಚ್ 6 ರಂದು ಈ ಜೈಲ್ ಭರೋ ಚಳುವಳಿಯನ್ನು ನಡೆಸಲಾಯಿತು. ಸಾರ್ವಜನಿಕ ಉದ್ದಿಮೆಗಳು, ಜವಳಿ ಮತ್ತು ಗಾರ್ಮೆಂಟ್, ತೋಟಗಳ, ಬೀಡಿ, ಕಟ್ಟಡ ನಿರ್ಮಾಣ, ಇಟ್ಟಿಗೆಗೂಡು, ಅಂಗನವಾಡಿ, ಆಶಾ, ಮಧ್ಯಾಹ್ನದ ಊಟ ಮತ್ತು ಇತರ ಸ್ಕೀಮ್ ಕಾರ್ಮಿಕರು, ಮನೆಕೆಲಸ ಮಾಡುವವರು, ಸಫಾಯಿ ಕರ್ಮಚಾರಿಗಳು, ರಸ್ತೆ ಸಾರಿಗೆ, ವಿದ್ಯುತ್, ನೀರು ಪೂರೈಕೆ, ಮುನಿಸಿಪ್ ಕೆಲಸಗಾರರು, ಸ್ವ-ಉದ್ಯೋಗಿಗಳು, ಮನೆಯಿಂದ ಕೆಲಸ ಮಾಡುವವರು, ರಸ್ತೆಗಳಲ್ಲಿ ಮಾರಾಟ ಮಾಡುವವರು ಹೀಗೆ ವಿವಿಧ ವಿಭಾಗಗಳ ದುಡಿಯುವ ಮಹಿಳೆಯರು ಈ ಐತಿಹಾಸಿಕ ಚಳುವಳಿಯಲ್ಲಿ ಭಾಗವಹಿಸಿದರು.

ಇದಕ್ಕೆ ಪೂರ್ವಭಾವಿಯಾಗಿ ಸಿಐಟಿಯು ಸಮ್ಮೇಳನದ ಕರೆಯಂತೆ ವ್ಯಾಪಕವಾದ ಪ್ರಚಾರಾಂದೋಲನ ಕಾರ್ಯ ನಡೆಯಿತು.




ಮಹಾರಾಷ್ಟ್ರ


ಕರ್ನಾಟಕ-ಕಾರವಾರ

ನೆನಪುಗಳ ಮೆರವಣಿಗೆ...

ಆರ್. ರಾಮಕೃಷ್ಣ

ಅದು ಬಹುಶಃ 1985 ರ ಕೊನೆ ಇರಬಹುದು, ಅಥವಾ 1986 ರ ಆರಂಭವೂ ಇರಬಹುದು. ಎಂದಿನಂತೆ ನಾನು ಅಂದು ಶಾಖೆಗೆ ಹೋದೆ. ಅಂದು ಶಾಖೆಯಲ್ಲಿ ಆಟಗಳಿಗಿಂತ ಪಾಠವೇ ಹೆಚ್ಚಾಗಿತ್ತು. ಸಂಘದ ಮುಖಂಡರಲ್ಲಿ ಏನೋ ಒಂದು ಹೊಸ ಹುರುಪು, ಸಂಭ್ರಮ ಇದ್ದಂತೆ ನನಗೆ ಕಂಡಿತು. ಅದೇ ಪ್ರಪ್ರಥಮ ಬಾರಿಗೆ 'ಬಾಬರಿ ಮಸೀದಿ ಮತ್ತು ರಾಮಮಂದಿರ'ದ ವಿಷಯ ಅಂದು ನನ್ನ ಕಿವಿಯ ಮೇಲೆ ಬಿತ್ತು. ಅಲ್ಲಿಯವರೆಗೆ ಪತ್ರಿಕೆಗಳಲ್ಲಿ ಎಲ್ಲಿಯೂ ಈ ವಿಷಯ ನನ್ನ ಗಮನಕ್ಕೆ ಬಂದಿರಲಿಲ್ಲ.

ಅಯೋಧ್ಯೆಯಲ್ಲಿ 'ರಾಮಜನ್ಮಭೂಮಿ ಆಂದೋಲನ' ತೀವ್ರ ಸ್ವರೂಪ ಪಡೆಯುತ್ತಿದೆ ಎಂದೂ, ಇಡೀ ದೇಶ ಈಗ ಸಂಘದ ಕಡೆಗೆ ನೋಡುತ್ತಿದೆ ಎಂದು ನಮಗೆ ತಿಳಿಸಲಾಯಿತು. ಈ ವಿಷಯ ಕೇಳಿ ನನಗೆ ತೀವ್ರವಾದ ನಿರಾಶೆಯಾಯಿತು. ಹಸಿವು, ಬಡತನ, ನಿರುದ್ಯೋಗ, ಅಸ್ಪೃಶ್ಯತೆ ಮುಂತಾದ ನೂರಾರು ಸಮಸ್ಯೆಗಳು ದೇಶವನ್ನು ರಣಹದ್ದುಗಳಂತೆ ಕಿತ್ತು ತಿನ್ನುತ್ತಿರುವಾಗ ಅವುಗಳ ಪರಿಹಾರಕ್ಕಾಗಿ ಯಾವ ಕೆಲಸವನ್ನೂ ಮಾಡದ ಸಂಘವು ದೇವರಿಗೆ ದೇವಸ್ಥಾನ ಕಟ್ಟುವ ಚಳುವಳಿ ಹೆಸರಿನಲ್ಲಿ ಮತ್ತೊಂದು ಸಮಸ್ಯೆಯನ್ನು ಸೃಷ್ಟಿಸಬೇಕೆ ? ಜನರ ಒಗ್ಗಟ್ಟನ್ನು ಮುರಿದು ದ್ವೇಷ ಸೃಷ್ಟಿಸುವ, ಜನರ ಮನಸ್ಸನ್ನು ಒಡೆಯುವ ರಾಮಮಂದಿರದ ಆಂದೋಲನ ಇಡೀ ದೇಶವನ್ನು ಹೇಗೆ ಒಂದುಗೂಡಿಸಬಲ್ಲದು? ಎನಿಸಿತು. ಈ ವಿಷಯ ಕೇಳಿದ ಮೇಲೆ ನನ್ನ ಮನಸ್ಸಿನಲ್ಲಿ ಸ್ವಲ್ಪ ಮಸುಕಾಗಿದ್ದ 'ಆರೆಸ್ಸೆಸ್ ದೇಶಪ್ರೇಮಿಯೇ? ಅಥವಾ ಕೋಮುವಾದಿಯೇ?' ಎಂಬ ತರಂಗ ಪತ್ರಿಕೆಯ ಸಂವಾದದ ವಿಚಾರಗಳು ಮತ್ತೆ ಮನಸ್ಸಿನಲ್ಲಿ ಮೇಲೆದ್ದು ಬಂದವು.

ಈಗ ಸಂಘದ ವಿಚಾರಗಳು, ನನ್ನ ಬಾಲ್ಯದ ನೆನಪುಗಳನ್ನು ನಾನು ತಾಳೆಹಾಕತೊಡಗಿದೆ. ಬಿಡಿ ಬಿಡಿ ನೆನಪುಗಳಾಗಿ ನನ್ನ ಮನಸ್ಸಿನ ಮೂಲೆಯಲ್ಲಿದ್ದ ವಿಷಯಗಳಿಗೆ ಒಂದು ಸೂತ್ರ, ಅವುಗಳ ನಡುವೆಯೇ ಇದ್ದ ವೈರುಧ್ಯಗಳು ಎದ್ದು ಕಾಣತೊಡಗಿದವು.

'ಆಸೀಫಾ' ಎಂಬ ತಾಯಿ ಹೃದಯದ ಅಕ್ಕ

ನಮ್ಮ ಮನೆಯ ಹತ್ತಿರ ಕಾಳಪ್ಪ ಬ್ಲಾಕ್ ಕಡೆ ಒಂದು ಮುಸ್ಲಿಂ ಕುಟುಂಬ ಇತ್ತು. ಆ ಕುಟುಂಬಕ್ಕೂ ನಮ್ಮ ಕುಟುಂಬಕೂ ತುಂಬಾ ಸ್ನೇಹ, ಅದು ದೊಡ್ಡ ಕುಟುಂಬ ಆಸೀಫಾ ಎಂಬುವರು ಹಿರಿ ಮಗಳು, ದೊಡ್ಡ ಕುಟುಂಬ ಹಲವಾರು ಜನ ತಂಗಿಯರು, ತಮ್ಮಂದಿರು, ಬಡತನದ ಬೇಗೆ, ಅಕ್ಕ ಪಕ್ಕದ ಬ್ಯಾಂಕ್ ಕಾಲೋನಿ ಹತ್ತಿರದ ಬಟ್ಟೆ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಕುಟುಂಬವನ್ನು ಸಾಕುವ ಹೊಣೆಯನ್ನು ಹೊತ್ತ ಹಿರಿಯಕ್ಕ 'ಆಸೀಫಾ' ತಾನು ಮದುವೆಯಾದರೆ ಎಲ್ಲಿ ತನ್ನ ಕುಟುಂಬ ಕಷ್ಟಕ್ಕೆ ಸಿಲುಕುತ್ತದೋ ಎಂದು ಮದುವೆಯನ್ನೇ ನಿರಾಕರಿಸಿ ದುಡಿಮೆ ಮಾಡುತ್ತಾ ಕುಟುಂಬಕ್ಕಾಗಿ ಜೀವ ತೇಯುತ್ತಿದ್ದರು. ಇಂತಹ ತಾಯಿ ಹೃದಯದ ಆಸೀಫಾ ನಮ್ಮ ಮನೆಗೆ ಬಂದರೆ ನನ್ನ ತಾಯಿ, ನನ್ನ ತಂದೆ ಎಲ್ಲರೂ ತುಂಬು ಗೌರವದಿಂದ ನೋಡಿಕೊಳ್ಳುತ್ತಿದ್ದರು, ಅಪಾರವಾದ ಪ್ರೀತಿ ತೋರುತ್ತಿದ್ದರು. ಕಾಫಿ, ತಿಂಡಿ ಇಲ್ಲದೇ ಅವರನ್ನು ಹಾಗೇ ಕಳಿಸುತ್ತಿರಲಿಲ್ಲ. ಅವರು ಬಂದು ಹೋದ ಮೇಲೆ ಸಹ ಮನೆಯಲ್ಲಿ ಆಸೀಫಾರ ತ್ಯಾಗಮಯ ಬದುಕಿನ ಬಗ್ಗೆ ಮಾತು, ಗುಣಗಾನ ಇರುತ್ತಿತ್ತು. ನನಗೂ ಆಸೀಫಾ ಅಂದರೆ ಮನಸ್ಸಿನಲ್ಲಿ ಒಂದು ಬಗೆಯ ತುಂಬು ಗೌರವ, ಸಹಾನುಭೂತಿ.

ಆಸೀಫಾರ ತಮ್ಮ ಮತ್ತು ನನ್ನ ಅಣ್ಣ ಸ್ನೇಹಿತರಾಗಿದ್ದರು. ಮುಸ್ಲಿಮನಾದ ಆ ಹುಡುಗ 'ಭಕ್ತ ಸಿರಿಯಾಳ' ಸಿನಿಮಾವನ್ನು ನನ್ನ ಅಣ್ಣನಿಗಿಂತ ಹೆಚ್ಚು ಸಾರಿ ನೋಡಿದ್ದನಂತೆ. ಅದೇ ಅವನಿಗೆ ಹೆಮ್ಮೆ. ತಾಯಿ ಹೃದಯದ ಅಕ್ಕ 'ಆಸೀಫಾ', ಅವರ ಕುಟುಂಬ, ನಾನು ಹಿಂದಿನಿಂದ ಕಲ್ಲು ಹೊಡೆದ 'ಪಾಕಂ ಪಾಕಂ' ಮುಸ್ಲಿಂ ತಾತ, ನಾನು ದಾರಿ ತಪ್ಪಿಸಿ ಬೇರೆ ದಿಕ್ಕಿಗೆ ಕಳುಹಿಸಿದ ಮುಸ್ಲಿಂ " ಮಹಿಳೆಯರ ಧರ್ಮಕ್ಕೆ ಸೇರಿದವರೇ ಆಗಿದ್ದರು. ಆದರೂ ನಾನೇಕೆ ಆಸೀಫಾ ಅವರನ್ನು ದ್ವೇಷಿಸಲಾರೆ, ನನಗೇಕೆ ಅವರ ಮೇಲೆ ಅಷ್ಟೊಂದು ಗೌರವ. ಹೀಗೆ ಮನಸ್ಸು ಯೋಚಿಸುತ್ತಿತ್ತು. ಜೊತೆಗೆ ಇನ್ನೂ ಒಂದಷ್ಟು ಹಳೇ ನೆನಪುಗಳು...

ಸ್ನೇಹ–ಪ್ರೀತಿಗಳ ರಕ್ಷಣಾ ಕೋಟೆ

ದಾಸರ ಹಳ್ಳಿ–ಶ್ರೀನಗರಗಳು ಒಂದು ಲೆಕ್ಕದಲ್ಲಿ ಒಂದು ಸಣ್ಣ ಭಾರತವೇ ಆಗಿತ್ತು. ಇಲ್ಲಿ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಧರ್ಮಗಳ ಜನಗಳು ಯಾವುದೇ ಕೋಮು ಗಲಭೆಗಳಿಲ್ಲದೇ ಪರಸ್ಪರ ಕಷ್ಟಸುಖಗಳಿಗೆ ಆಗುತ್ತಾ ಸೌಹಾರ್ದತೆಯಿಂದ ಬದುಕುತ್ತಿದ್ದರು. ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ಒಪ್ಪಿಕೊಂಡವರೇ ಆದರೂ ಜನರು ದೊಡ್ಡ ಜಾತಿ ಗಲಭೆಯಲ್ಲಿ ತೊಡಗಿದ್ದು ಯಾರಿಗೂ ನೆನಪಿಲ್ಲ. ಕ್ರಿಶ್ಚಿಯನ್ನರಾದ ಸಗಾಯಿ, ರೂಬಿ ಕುಟುಂಬ, ಮುಸ್ಲಿಮರಾದ ಬೂಬಮ್ಮ, ಆಸೀಫಾರ ಕುಟುಂಬ, ವಾಚು ರಿಪೇರಿ ಅಂಗಡಿ ನಡೆಸುವ ಷರೀಫರ ಕುಟುಂಬ, ನಾನಾ ಜಾತಿ ನಾನಾ ವೃತ್ತಿಗಳ ಜನರೊಡನೆ ಇದ್ದುದರಲ್ಲೇ ಒಂದಾಗಿ ಬಾಳುತ್ತಿದ್ದ ಊರಾಗಿತ್ತು ದಾಸರಹಳ್ಳಿ–ಶ್ರೀನಗರ.

ನಾನಾವಾಗ ಹತ್ತೋ ಹನ್ನೊಂದೋ ವರ್ಷದವನಿದ್ದೆ ಅನಿಸುತ್ತದೆ. ಇಸವಿ ಸರಿಯಾಗಿ ನೆನಪಿಲ್ಲ. ಒಂದು ದಿನ ನಾವೆಲ್ಲಾ । ಶಾಲೆಗೆ ಹೋಗದೇ ಮನೆಯಲ್ಲೇ ಉಳಿಯಬೇಕಾಯಿತು. ಹೊರಗೆ ಎಲ್ಲಾ ಕಡೆ ಹಿಂದೂ ಮುಸ್ಲಿಂ ಗಲಾಟೆ ನಡೆಯುತ್ತಿದೆ ಎಂಬ

ಮಾತುಗಳು ಕೇಳಿಬಂದವು. ಎಲ್ಲೋ ಯಾವುಯಾವುದೋ ಕಟ್ಟಡಕ್ಕೆ, ಮನೆಗಳಿಗೆ ಬೆಂಕಿ ಬಿದ್ದಿದೆ ಎಂದು ಜನ ಮಾತನಾಡಿಕೊಳ್ಳುತ್ತಿದ್ದರು. ಹೀಗಿರುವಾಗ ಒಂದಷ್ಟು ಜನ ಎತ್ತಲೋ ಓಡುತ್ತಿದ್ದರು. ನಮ್ಮ ಮನೆಯಿಂದ ಫರ್ಲಾಂಗ್ ದೂರದಲ್ಲಿ ಒಂದು ಗುಡ್ಡ, ಗುಡ್ಡದ ಬುಡಕ್ಕೆ 'ಗುಟ್ಟೆ ಸ್ಕೂಲ್' ಅನ್ನುವ ಸರಕಾರಿ ಶಾಲೆ, ಅದರ ಹಿಂದೆ ಮುಳ್ಳುಕಂಟಿಗಳು, ಬಂಡೆಗಲ್ಲುಗಳು. ಪಾಳುಬಿದ್ದ ಹೊಲ. ಎಲ್ಲರೂ ಗುಡ್ಡದ ಕಡೆ ಧಾವಿಸುತ್ತಿದ್ದರು. ನಾವು ಹುಡುಗರೂ ಅವರ ಹಿಂದೆ ಓಡಿದೆವು. ಗುಡ್ಡದ ನೆತ್ತಿಯ ಮೇಲೆ ನಿಂತು ನೋಡಿದರೆ ಮೈಸೂರು ರಸ್ತೆಯ ಅಂಚೆಪಾಳ್ಯ, ಕಸ್ತೂರಬಾ ನಗರ, ಗೋರಿಪಾಳ್ಯ, ಬಾಪೂಜಿನಗರ ಮುಂತಾದ ಪ್ರದೇಶಗಳ ಹಲವು ಭಾಗಗಳೆಲ್ಲಾ ಚೆನ್ನಾಗಿ ಕಾಣುತ್ತಿದ್ದವು. ಆ ಕಡೆ ಆಗಲೇ ಹಲವು ಕಟ್ಟಡಗಳಿಂದ ಹೊಗೆ ಮೇಲೇಳುತ್ತಿತ್ತು. ನೋಡ ನೋಡುತ್ತಿದ್ದಂತೆ ಯಾವುದೋ ಒಂದು ದೊಡ್ಡ ಕಟ್ಟಡದಿಂದ ಹೊಗೆ ಬರುತ್ತಿದ್ದುದು ತುಂಬಾ ಹೆಚ್ಚಾಗಿ, ಕಪ್ಪು ಹೊಗೆ ಆಕಾಶವನ್ನು ತುಂಬಿಕೊಂಡಿತು. ಯಾರೋ ಒಬ್ಬರು 'ಸಾಬರ ಪ್ಲಾಸ್ಟಿಕ್ ಫ್ಯಾಕ್ಟರಿಗೆ ಬೆಂಕಿ ಇಟ್ಟಿದ್ದಾರೆ' ಎಂದರು.

ದ್ವೇಷದ ಬೆಂಕಿ ನಮ್ಮ ಊರಿನತ್ತಲೂ ಕೆನ್ನಾಲಿಗೆ ಚಾಚುತ್ತಿತ್ತು. ಜನರಲ್ಲಿ ಆತಂಕ ಹೆಚ್ಚುತ್ತಿತ್ತು. ಆಸೀಫಾ ಅವರ ಕುಟುಂಬ ಈಗ ಏನು ಮಾಡುವುದು, ?? 'ಏನು ಮಾಡಬೇಕು ?' ಎಂಬ ಆಯ್ಕೆಯನ್ನು ಜನರು ಅವರಿಗೆ ಬಿಡಲೇ ಇಲ್ಲ. ನಮ್ಮ ಮನೆಯ ಹಿಂದೆ ಚೆಲುವಣ್ಣ ಎಂಬುವವರ ಮನೆ, ಅವರ ಕುಟುಂಬ ಆಸೀಫಾರ ಕುಟುಂಬದ ರಕ್ಷಣೆಯ ಹೊಣೆ ಹೊತ್ತುಕೊಂಡಿತು. ಆ 'ಇಡೀ ಮುಸ್ಲಿಂ ಕುಟುಂಬವನ್ನು ಅವರ ಸಾಮಾನು ಸರಂಜಾಮುಗಳ ಸಹಿತ ಚೆಲುವಣನ ಮನೆಯವರು ಹಲವಾರು ದಿನಗಳ ಕಾಲ ತಮ್ಮ ಮನೆಯಲ್ಲಿ ಇಟ್ಟುಕೊಂಡು ಅಪಾಯದಿಂದ ಕಾಪಾಡಿದರು. ಚೆಲುವಣ್ಣನವರ ಕುಟುಂಬದ ಈ ಕೆಲಸದ ಬಗೆಗೆ ನಮ್ಮ ಮನೆಯಲ್ಲೂ, ಜನರಲ್ಲೂ ಮೆಚ್ಚುಗೆಯೋ ಮೆಚ್ಚುಗೆ.

ನಾನು ಇನ್ನೂ ಸಣ್ಣ ವಯಸ್ಸಿನವನಾಗಿದ್ದಾಗಿನ ಕಥೆಯೊಂದನ್ನು ನನ್ನ ಅಮ್ಮ ಈಗಲೂ ಹೇಳುತ್ತಾರೆ. ಸಣ್ಣ ವಯಸ್ಸಿನಲ್ಲಿ ನನಗೆ ಕಿವಿ ಸೋರುತ್ತಿತ್ತಂತೆ. ಪರಿಚಯದ ಮುಸ್ಲಿಂ ಮಹಿಳೆಯರು ಈ ಬಗ್ಗೆ ಮರುಗಿದರು. ಅವರು ಬಳೆಪೇಟೆಯಲ್ಲಿನ ದರ್ಗಾ ಒಂದಕ್ಕೆ ಕರೆದುಕೊಂಡು ಹೋದರಂತೆ. ನನ್ನಮ್ಮ ಕಿವಿ ತೊಂದರೆಯ ಪರಿಹಾರಕ್ಕೆ ಆ ದರ್ಗಾದಲ್ಲಿ ಸಕ್ಕರೆ ಓದಿಸಿದರಂತ, (ಅದು ಬಹುಶಃ ಹಜರತ್ ತವಕ್ಕಲ್ ಮಸ್ತಾನ್ ಷಾ ದರ್ಗಾ) ಕಿವಿ ಸೋರುವುದು ನಿಂತಿತಂತೆ. (ನನಗೆ ಇತ್ತೀಚೆಗೆ ಬಲಗಿವಿಯಲ್ಲಿ ಮತ್ತೆ ಸೋಂಕು ಕಾಣಿಸಿಕೊಂಡಿದೆ ಎಂಬುದನ್ನು ಒಮ್ಮೆ ಹೇಳಿದಾಗ ನನ್ನ ಅಮ್ಮ ಈಗಲೂ ಆ ದರ್ಗಾಕ್ಕೆ ಹೋಗಿ 'ಸಕ್ಕರೆ ಓದಿಸೋಣ ಬಾ' ಅಂತ ಕರೆದರು.) . ಆ ಮುಗ್ಧ ಜನರು ಕಟ್ಟಿಕೊಂಡ ಸ್ನೇಹ ಸೌಹಾರ್ದತೆಯ ಬದುಕು. ಮತಧರ್ಮಗಳ ಬೇಲಿದಾಟಿದ ಪ್ರೀತಿ, ವಿಶ್ವಾಸಗಳ ಮೇಲೆ ನಿಂತ ಚೆಂದದ ಬದುಕು, ಪರಸ್ಪರ ಕಷ್ಟ ಸುಖಗಳಿಗೆ ಒದಗುವ ಸ್ನೇಹ, ಪ್ರಾಮಾಣಿಕ ಕಾಳಜಿ, ಪಾಠ ಕಲಿಯಲು ತಯಾರಿದ್ದರೆ – ಜನರ ಬದುಕೇ ಒಂದು ದೊಡ್ಡ ವಿಶ್ವವಿದ್ಯಾಲಯ, ಇಂಥ ಸೌಹಾರ್ದದ ಬದುಕಿಗೆ ಕೊಳ್ಳಿ ಇಡುವಂತಹ ಬೆಳವಣಿಗೆಗಳು ದೇಶದಲ್ಲಿ ಆಗುತ್ತಿವೆ ಎನ್ನುವುದು ನನಗೆ ಖಚಿತವಾಯಿತು. 'ಬಾಬರಿ ಮಸೀದಿ–ರಾಮಜನ್ಮ ಭೂಮಿ'ಯ ವಿಷಯವನ್ನು ಕೇಳಿದ ಆ ದಿನವೇ ನಾನು ಸ್ವಂತ ಆಸಕ್ತಿಯಿಂದ ಆರೆಸ್ಸೆಸ್ ಕಾರ್ಯಕರ್ತನಾಗಿ ಶಾಖೆಗೆ ಹೋದ ಕಟ್ಟಕಡೆಯ ದಿನವಾಯಿತು. ಮತ್ತೆ ನಾನು ಸುಮಾರು ನಾಲ್ಕು ವರ್ಷಗಳ ನಂತರ 1990 ರಲ್ಲಿ ನಾನು ವಿವಿಧ ಆರೆಸ್ಸೆಸ್ ಶಾಖೆಗಳಿಗೆ ಕಾಲಿಟ್ಟೆನಾದರೂ ಅದರ ಕಾರಣಗಳು ಮತ್ತು ಆ ಸಂದರ್ಭ ಬೇರೆಯದೇ ಆಗಿತ್ತು. ●

ಗ್ರಾಮ ಪಂಚಾಯತ್ ನೌಕರರಿಂದ ಅನಿರ್ದಿಷ್ಟ ಧರಣಿ



ಕರ್ನಾಟಕ ರಾಜ್ಯ ಗ್ರಾಮ ಪಂಚಾಯರ ನೌಕರ ಸಂಘ ರಿ.ಸಿ.ಐ.ಟಿ.ಯು. ಸಂಯೋಜಿತ ಜಿಲ್ಲಾ ಸಮಿತಿ ಕಲಬುರಗಿ. ತಾಲೂಕ ಸಮಿತಿ ಚಿತ್ತಾಪೂರ/ಶಹಾಬಾದ ಕರನಾಟಕ ಪ್ರಾಂತ ರೈತ ಸಂಘ ಮತ್ತು ಹೊನಗುಂಟಾ ಗ್ರಾಮಸ್ಥರಿಂದ ಚಿತ್ತಾಪೂರ ತಾಲೂಕಿನ ಗ್ರಾಮ ಪಂಚಾಯತ ಹೊನಗುಂಟಾ ದ ಕ್ಲರ್ಕ ಕಂ ಡಾಟ ಎಂಟ್ರಿ ಆಪರೇಟರ್ ರವರನ್ನು ಸೇವೆಯಲ್ಲಿ ಮುಂದು ವರೆಸುವವರೆಗೂ ಧರಣೆ ಸ್ಥಳಕ್ಕೆ ಆಗಮಿಸಿದ ತಾಲೂಕು ಪಂಚಾಯತ ಅಧಿಕಾರಿಗಳು ಸ್ಪಂದಿಸದೆ ಹೊರಟ್ಟು ಹೋದರು ಧರಣಿಯನ್ನು ಉದ್ದೇಶಿಸಿ ಕರ್ನಾಟಕ ಗ್ರಾಮ ಪಂಚಾಯತ ನೌಕರ ಸಂಘ ಜಿಲ್ಲಾ ಖಜಾಂಚಿ ಶಿವಾನಂದ ಕವಲಗಾ ಬಿ ಮಾತನಾಡಿ ನೌಕರರ ಮೇಲೆ ಆಗುತ್ತಿರುವ ಅನ್ಯಾಯವನ್ನು ಸಹಿಸೋದಿಲ್ಲ ವಿನಾಕಾರಣ ಸಿಂಬಂದಿಗಳನ್ನು ವರ್ಗಮಾಡಿ ಕಿರುಕುಳ ನೀಡುತ್ತಿರುವದನ್ನು ಸಹಿಸೋದಿಲ್ಲ ಈಸಮಸ್ಯೆ ಬಗೆಹರಿಯುವರಗೂ ಹೋರಟ ಕೈ ಬಿಡೊದಿಲ್ಲ ಎಂದರು. ಕರ್ನಾಟಕ ಪ್ರಾಂತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಶೋಕ ಮ್ಯಾಗೇರಿ ಮಾತನಾಡಿ ನೀವು ವರ್ಗವಣೆ ಮಾಡಿದಿರಿ ಸಿಂಬಂದಿಗಳನ್ನು ವರ್ಗವಣೆ ಮಾಡಲು ಪಂಚಯತ್ ರಾಜ ಯಾವ ಕಾಯ್ದೆಯಲ್ಲಿದೆ ವಿನಕಾರಣ ಪ್ರಕಾಶ ಅವರನ್ನು ವರ್ಗಮಾಡಿ ಕಿರುಕುಳು ನೀಡುತ್ತಿರುವುದು ಸರಿಯಲ್ಲಾ ದಲಿತ ಸಂರ್ಘಷ ಸಮಿತಿ ಶಹಾಬಾದ ತಾಲೂಕು ಅಧ್ಯಕ್ಷ ಶಿವರುದ್ರ ಗಿರೋನುರು ಮಾತನಾಡಿ ನಮ್ಮ ಸಂಘದಿಂದ ಸಂಪೂರ್ಣ ಬೇಂಬಲ ವಿದೆ ಅನ್ಯಾಯವನ್ನು ನಾವು ಸಹಿಸುವದಲ್ಲ ಅವರ ಹೊರಾಟಕ್ಕೆ ನಮ್ಮ ಸಂಘದ ಬೇಂಬಲ ಇರುತ್ತದೆ ಎಂದರು ಕರ್ನಾಟಕ ರಕ್ಷಣ ವೇದಿಕೆ ಗ್ರಾಮ ಘಟಕದ ಅಧ್ಯಕ್ಷ ವಿಶ್ವರಾಜ ಪಿರೋಜಾ ಬಾದ ಬೆಂಬಲ ನೀಡಿದ್ದಾರೆ. ಅನಿರ್ಧಿಷ್ಟ ಧರಣಿ ಮುಂದುವರೆಸಲಾಗಿದೆ.

ವರದಿ: ಶಿವಾನಂದ ಕವಲಗಾ ಬಿ

ಶತಮಾನೋತ್ಸವ ಲೇಖನ ಮಾಲೆ-17

ಮಾರ್ಕ್ಸ್‌ವಾದ-ಲೆನಿನ್‌ವಾದ ಸಿದ್ಧಾಂತ ಮಾತ್ರವೇ ಮತ್ತು ಕಮ್ಯುನಿಸ್ಟ್ ಪಕ್ಷದಂತಹ ಶಕ್ತಿ ಮಾತ್ರವೇ ಒಂದು ಸಮಸಮಾಜದ ಸ್ಥಾಪನೆಯತ್ತ ಹೋರಾಟವನ್ನು ಮುಂದೊಯ್ಯಲು ಸಾಧ್ಯ ಎನ್ನುವುದನ್ನು ಕಮ್ಯುನಿಸ್ಟ್ ಪಥಪ್ರದರ್ಶಕರು ತಮ್ಮ ಪ್ರಯೋಗಗಳ ಮೂಲಕ ಕಂಡುಕೊಂಡರು. ಅಂತಹ ಒಂದು ಸಮಾಜ ನಿರ್ಮಾಣಕ್ಕಾಗಿ ಅವರು ಹಲವಾರು ವರ್ಗ ಹಾಗೂ ಸಾಮೂಹಿಕ ಸಂಘಟನೆಗಳನ್ನು ಸ್ಥಾಪಿಸಿದರು ಮತ್ತು ತಮ್ಮ ಹೋರಾಟದ ಭಾಗವಾಗಿ ಸಾಮಾಜಿಕ ದಬ್ಬಾಳಿಕೆಗಳ ಪ್ರಶ್ನೆಗಳನ್ನೂ ಕೈಗೆತ್ತಿಕೊಂಡರು. ಈ ಪ್ರಯತ್ನಗಳು ಕಮ್ಯುನಿಸ್ಟ್ ಪಕ್ಷಕ್ಕೆ ಒಂದು ಭದ್ರ ಬುನಾದಿಯನ್ನು ಹಾಕಿದವು ಮತ್ತು ಬ್ರಿಟಿಷ್ ಆಳರಸರು ಹಾಗೂ ಸ್ಥಳೀಯ ಭೂಮಾಲಕರು ಹರಿಬಿಡುತ್ತಿದ್ದ ದಾಳಿ ದಬ್ಬಾಳಿಕೆಗಳನ್ನು ಎದುರಿಸಲು ಸಹಾಯಕವಾದವು. ಕಮ್ಯುನಿಸ್ಟ್ ಚಳುವಳಿಯನ್ನು ಬಹಳ ಮುಖ್ಯವಾಗಿ 1930ರ ನಂತರ ತ್ವರಿತ ಗತಿಯಲ್ಲಿ ಕೊಂಡೊಯ್ಯಲು ದಾರಿ ಮಾಡಿಕೊಟ್ಟವು.

ಕನ್ನಡಕ್ಕೆ: ಟಿ.ಸುರೇಂದ್ರ ರಾವ್

ಕಮ್ಯುನಿಸ್ಟ್ ಪಥಪ್ರದರ್ಶಕರು – ಸಾಮಾಜಿಕ ಸುಧಾರಣಾ ಚಳುವಳಿಯ ಮುಂದಾಳುಗಳು



ಹಲವು ಕಮ್ಯುನಿಸ್ಟ್ ಪಥಪ್ರದರ್ಶಕರು ಸಾಮಾಜಿಕ ಸುಧಾರಣಾ ಚಳುವಳಿಯ ಮುಂದಾಳುಗಳೂ ಆಗಿದ್ದರು. ತನ್ನ ಆರಂಭಿಕ ದಿನಗಳಿಂದಲೂ ಕಮ್ಯುನಿಸ್ಟ್ ಪಕ್ಷವು ಅಂಗೀಕರಿಸಿರುವ ಹಲವಾರು ದಾಖಲೆಗಳಲ್ಲಿ ನಾವು ಕಂಡಂತೆ, ಜಾತಿ ಮತ್ತು ಧರ್ಮಾಧಾರಿತ ತಾರತಮ್ಯಗಳನ್ನು ಹಾಗೂ ದಬ್ಬಾಳಿಕೆಗಳನ್ನು ಅದು ಖಂಡತುಂಡವಾಗಿ ವಿರೋಧಿಸಿದೆ. ಮಹಿಳೆಯರಿಗೆ ಸಮಾನ ಸ್ಥಾನಮಾನ ದೊರೆಯಬೇಕೆಂದೂ ಅದು ಪ್ರತಿಪಾದಿಸಿದೆ. ಅನೇಕ ಯುವಜನರು ಮತ್ತು ಸ್ವಾತಂತ್ರ್ಯ ಹೋರಾಟಗಾರರು ಈ ಚಿಂತನೆಗಳು ಮತ್ತು ಜನಸಮುದಾಯದ ನಡುವೆ ಕಮ್ಯುನಿಸ್ಟರು ಕ್ರಿಯಾಶೀಲವಾಗಿ ಮಾಡಿದ ಕೆಲಸಗಳಿಂದಾಗಿ ಕೂಡ ಪಕ್ಷದತ್ತ ಆಕರ್ಷಿತರಾದರು. ಇವು ತುಳಿತಕ್ಕೊಳಗಾದ ವಿಭಾಗದವರ ನಡುವೆ ಕಮ್ಯುನಿಸ್ಟ್ ನೆಲೆಯನ್ನು ಇನ್ನೂ ಗಟ್ಟಿಗೊಳಿಸಿತು.

ಕಾರ್ಮಿಕರು ಮತ್ತು ಕೃಷಿ ಕೂಲಿಕಾರರ ಹಕ್ಕುಗಳಿಗಾಗಿ ಹೋರಾಟಗಳನ್ನು ನಡೆಸುವಾಗಲೆಲ್ಲಾ ಕಮ್ಯುನಿಸ್ಟರು ಈ ವರ್ಗಗಳಲ್ಲಿರುವ ದಲಿತರ ಪ್ರಶ್ನೆಗಳನ್ನು ಪ್ರಜ್ಞಾಪೂರ್ವಕವಾಗಿ ಎತ್ತುತ್ತಿದ್ದರು. ಅದಕ್ಕೆ ಉದಾಹರಣೆಯಾಗಿ, 1928ರ ಬೊಂಬಾಯಿ ಕಾರ್ಮಿಕ ವರ್ಗದ ಮುಷ್ಕರದ ಅವಧಿಯಲ್ಲಿ, ಬಟ್ಟೆ ನೇಯುವ ವಿಭಾಗದಲ್ಲಿ ದಲಿತರು ಕೆಲಸ ಮಾಡುವ ಅವಕಾಶ ನೀಡಬೇಕೆಂದು ಕಮ್ಯುನಿಸ್ಟರು ಬೇಡಿಕೆಯನ್ನು ಮುಂದಿಟ್ಟರು; ಆ ವಿಭಾಗದಲ್ಲಿ ದಾರಗಳನ್ನು ಶಟಲ್‌ಗಳಲ್ಲಿ ಸುತ್ತುವಾಗ ಕಾರ್ಮಿಕರು ಬಾಯಿಯ ಎಂಜಲಿನಿಂದ ಒದ್ದೆ ಮಾಡಬೇಕಾಗುತ್ತಿತ್ತು. ಈ ಬೇಡಿಕೆಯನ್ನು ಮುಂದಿಟ್ಟಿದ್ದರಿಂದಾಗಿ ಬಹಳಷ್ಟು ದಲಿತರು ಕಮ್ಯುನಿಸ್ಟ್ ಪಕ್ಷದತ್ತ ಆಕರ್ಷಿತರಾದರು. ಕಮ್ಯುನಿಸ್ಟರ ಇಂತಹ ಚಟುವಟಿಕೆಗಳ ಪರಿಚಯದಿಂದಾಗಿ **ಆರ್.ಬಿ.ಮೋರೆ** ಕಮ್ಯುನಿಸ್ಟ್ ಚಳುವಳಿಯತ್ತ ಆಕರ್ಷಿತರಾದರು. ಮೋರೆಯವರು ಡಾ.ಬಿ.ಆರ್. ಅಂಬೇಡ್ಕರ್ ಅವರ ನಿಕಟವರ್ತಿಗಳಾಗಿದ್ದರು. ಮಹಾಡ್ ದಲಿತ ಸಮ್ಮೇಳನ ಹಾಗೂ ಸತ್ಯಾಗ್ರಹ ಮತ್ತು ಅಂಬೇಡ್ಕರ್ ನೇತೃತ್ವದಲ್ಲಿ ದಲಿತರು ಚಾವುಡಾರ್ ಕೆರೆಯ ನೀರು ಕುಡಿಯುವ ಕಾರ್ಯಕ್ರಮ ಆಯೋಜಿಸುವಲ್ಲಿ ಪ್ರಮುಖ ಕಾರಣಕರ್ತರಾಗಿದ್ದರು.

ನಿಜ ಹೇಳಬೇಕೆಂದರೆ, ಅಂಬೇಡ್ಕರ್ ಅವರ ಚಳುವಳಿಯ ಮುಂಚೂಣಿಯಲ್ಲಿದ್ದು ಮತ್ತು ಮಾರ್ಕ್ಸ್‌ವಾದ-ಲೆನಿನ್‌ವಾದದ ಅರಿವನ್ನು ಪ್ರಜ್ಞಾಪೂರ್ವಕವಾಗಿ ಪಡೆದುಕೊಂಡ ನಂತರ ಪಕ್ಷವನ್ನು ಸೇರಿದ ಮೊಟ್ಟ ಮೊದಲ ದಲಿತ ಸಮುದಾಯದ ವ್ಯಕ್ತಿ ಮೋರೆ. ಕಾರ್ಮಿಕ ವರ್ಗದ ಹೋರಾಟಗಳ ಸಮಯದಲ್ಲಿ ಸಾಮಾಜಿಕ ಪ್ರಶ್ನೆಗಳನ್ನು ಕಮ್ಯುನಿಸ್ಟರು ಎತ್ತುತ್ತಿದ್ದುದನ್ನು ಮೋರೆಯವರು ಅರಿತಿದ್ದರು. ದಲಿತರು ಮತ್ತು ದಲಿತೇತರ ಕಾರ್ಮಿಕರು, ಮುಸ್ಲಿಮರು ಮತ್ತು ಹಿಂದೂಗಳು ತಮ್ಮೆಲ್ಲಾ ಕಟ್ಟುಪಾಡುಗಳನ್ನು ಮರೆತು ತಮ್ಮ ಹಕ್ಕುಗಳಿಗಾಗಿ ಒಂದುಗೂಡಿ ಹೋರಾಡುತ್ತಿರುವುದನ್ನು ಕಂಡು ಅದರಿಂದ ಅವರು ಪ್ರಭಾವಿತರಾದರು. ಅಂತಹ ಹೋರಾಟಗಳು ದಲಿತರ ಮೇಲೆ ಪ್ರಭಾವ ಬೀರಿ ಕಮ್ಯುನಿಸ್ಟ್ ಪಕ್ಷವನ್ನು ಸೇರುವಂತೆ ಮಾಡಿದವು.

ಭಾರತದ ಕಮ್ಯುನಿಸ್ಟ್ ಚಳುವಳಿಯನ್ನು ಕಟ್ಟಿದ ಮೊದಲ ತಲೆಮಾರುಗಳಲ್ಲಿ ಮೋರೆಯವರು ಒಬ್ಬರು. ಅವರು 1930ರಲ್ಲಿ ಕಮ್ಯುನಿಸ್ಟ್ ಪಕ್ಷದ ಸದಸ್ಯರಾದರು. ಮುನಿಸಿಪಲ್ ಕಾರ್ಮಿಕರಿಂದ ಹಿಡಿದು ಉಪಾಧ್ಯಾಯರನ್ನು ಮತ್ತು ಸಾಂಸ್ಕೃತಿಕ ತಂಡವನ್ನು ಕೂಡ ಸಂಘಟಿಸುವ ಮೂಲಕ ಕಾರ್ಮಿಕ ವರ್ಗದ ಹಲವಾರು ವಿಭಾಗಗಳನ್ನು ಸಂಘಟಿಸುವಲ್ಲಿ ಅವರು ಕಾರಣೀಭೂತರಾಗಿದ್ದಾರೆ. ಈ ಸಂಘಟನೆಗಳ ಮೂಲಕ ಕಮ್ಯುನಿಸ್ಟ್ ಪಕ್ಷಕ್ಕೆ ಅನೇಕ ದಲಿತ ಕಾರ್ಯಕರ್ತರನ್ನು ತರುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಕೊಂಕಣ್ ಪ್ರದೇಶದಲ್ಲಿನ ಕೃಷಿ ಕೂಲಿಗಾರರನ್ನು ಮತ್ತು ರೈತರನ್ನು ಕೂಡ ಅವರು ಸಂಘಟಿಸಿದ್ದರು ಮತ್ತು ದಮನಕಾರಿ ಭೂಮಾಲಕ ವ್ಯವಸ್ಥೆಯ ವಿರುದ್ಧ ಅವರನ್ನು ಅಣಿನೆರೆಸಿದ್ದರು.

ಮೋರೆಯವರು ತಮ್ಮ ಇಡೀ ಕುಟುಂಬವನ್ನು ಪಕ್ಷದ ಚಟುವಟಿಕೆಗಳಲ್ಲಿ ತೊಡಗಿಸಿದ್ದರು. 1943ರಲ್ಲಿ ಬೊಂಬಾಯಿಯಲ್ಲಿ ನಡೆದ ಕಮ್ಯುನಿಸ್ಟ್ ಪಕ್ಷದ ಮೊದಲ ಅಖಿಲ ಭಾರತ ಮಹಾಧಿವೇಶನದಲ್ಲಿ ಅವರ ಕುಟುಂಬವನ್ನು "ಕೆಂಪು ಕುಟುಂಬ" ಎಂದು ಸನ್ಮಾನಿಸಲಾಯಿತು.

ಮತ್ತೊಬ್ಬ ಯುವ ಕಮ್ಯುನಿಸ್ಟ್ ನಾಯಕ **ಬಿ.ಟಿ.ರಣದಿವೆ**ಯವರು ಸಾಮಾಜಿಕ ಸುಧಾರಣಾ ಚಳುವಳಿಯಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು. ಅವರು ತಮ್ಮ ಶಾಲಾ ದಿನಗಳಿಂದಲೂ(1910ರ ಉತ್ತರಾರ್ಧದಲ್ಲಿ) ಸುಧಾರಣಾವಾದಿ ಚಿಂತನೆಗಳಿಂದ ಪ್ರಭಾವಿತರಾಗಿದ್ದರು ಮತ್ತು ದಲಿತರು ಹಾಗೂ ಮಹಿಳೆಯರ ಹಕ್ಕುಗಳ ಪರವಾಗಿ ನಿಂತಿದ್ದರು. ದಲಿತ ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದರು ಮತ್ತು ತನ್ನ ಪೋಷಕರು ಹಾಗೂ ಸಂಬಂಧಿಕರಿಂದ ಸಿಗುತ್ತಿದ್ದ ಅಲ್ಪಸ್ವಲ್ಪ ಹಣದಿಂದ ಅವರಿಗೆ ಪುಸ್ತಕ ತೆಗೆಸಿ ಕೊಡುತ್ತಿದ್ದರು. ರಣದಿವೆಯವರ ಈ ಕ್ರಿಯೆಗಳಿಂದಾಗಿ ತಾಳ್ಮೆಗೆಟ್ಟ ಮೇಲ್ಜಾತಿ ಪೋಷಕರು ಮತ್ತು ವಿದ್ಯಾರ್ಥಿಗಳು ಅವರ ಮೇಲೆ ಕಲ್ಲೆಸೆಯುತ್ತಿದ್ದರು. ಆದರೆ ಅವರು ಇದರಿಂದ ವಿಚಲಿತರಾಗಲಿಲ್ಲ. ತಮ್ಮ ಜಾತಿ ವಿರೋಧಿ ತಿಳುವಳಿಕೆ ಹಾಗೂ ಸಾಮಾಜಿಕ ಸುಧಾರಣಾ ಧೋರಣೆಗೆ ವಿರುದ್ಧವಾಗಿದ್ದ ಗಾಂಧಿ ಮತ್ತವರ ವರ್ಣಾಶ್ರಮ ಧರ್ಮದ ಪ್ರೇಮದಿಂದಾಗಿ ರಣದಿವೆಯವರು ತೀವ್ರ ಅತೃಪ್ತರಾಗಿದ್ದರು. ಕಾಂಗ್ರೆಸ್ಸಿಗೆ ಪರ್ಯಾಯವಾದ ಸುಧಾರಣವಾದಿಗಳ ಹುಡುಕಾಟದಲ್ಲಿದ್ದ ಅವರು ಕಮ್ಯುನಿಸಂ ಮತ್ತು ಕಾರ್ಮಿಕ ವರ್ಗದ ಚಳುವಳಿಯತ್ತ ಆಕರ್ಷಿತರಾದರು.

ರಣದಿವೆಯವರು ಮೋರೆಯವರೊಂದಿಗೆ ಕೆಲಸ ಮಾಡಿ ಕಾರ್ಮಿಕ ಸಂಘಗಳಲ್ಲಿ ಅಪ್ರಜ್ಞಾಪೂರ್ವಕವಾಗಿ ರೂಢಿಯಲ್ಲಿದ್ದ ಜಾತಿ ತಾರತಮ್ಯಗಳನ್ನು ಹೋಗಲಾಡಿಸಲು ಶ್ರಮಿಸಿದರು. ಕಾರ್ಮಿಕ ಸಂಘಗಳ ಕಛೇರಿಗಳಲ್ಲಿ ನೀರು ಕುಡಿಯಲು ಮೇಲ್ಜಾತಿಯವರಿಗೊಂದು ಮಣ್ಣಿನ ಲೋಟ ದಲಿತರಿಗೊಂದು ಮಣ್ಣಿನ ಲೋಟ ಇಡುತ್ತಿದ್ದ ರೂಢಿಯನ್ನು ನಿಲ್ಲಿಸಿದರು. ಜಾತಿಯ ಮಲಿನತೆಯಿಂದಾಗಿ ನೀರು ಕುಡಿಯಲು ಇಷ್ಟಪಡದವರು ಹೊರಗಡೆ ಹೋಗಿ ಬೇರೆಲ್ಲಿಯಾದರೋ ನೀರು ಕುಡಿಯಬಹುದೆಂದು ಹೇಳಿದರು. ಕಮ್ಯುನಿಸ್ಟ್ ನೇತೃತ್ವದ ಸಂಘಗಳು ಜಾತಿ ತಾರತಮ್ಯದ ವಿಷಯದಲ್ಲಿ ಕಟ್ಟುನಿಟ್ಟಿನ ನಿಲುವು ಹೊಂದಿರಬೇಕು ಎಂಬುದನ್ನು ತೋರಿಸಿದರು.

ತಮ್ಮ ಶಾಲಾ ದಿನಗಳಿಂದಲೇ ಸ್ವಾತಂತ್ರ್ಯ ಚಳುವಳಿಯಲ್ಲಿ ಕ್ರಿಯಾಶೀಲವಾಗಿದ್ದ **ಪಿ.ರಾಮಮೂರ್ತಿ**ಯವರು ಬನಾರಸಿನಲ್ಲಿ ಭಗತ್ ಸಿಂಗ್ ಮತ್ತು ಅವರ ಒಡನಾಡಿಗಳು ಸ್ಥಾಪನೆ ಮಾಡಿದ್ದ ನೌಜವಾನ್ ಭಾರತ್ ಸಭಾದ ಸಂಪರ್ಕಕ್ಕೆ ಬಂದರು. ನೌಜವಾನ್ ಸಭಾದವರು ಜಾತಿ ಪದ್ಧತಿಯ ವಿರುದ್ಧ ಆರಂಭಿಸಿದ್ದ ಜಾತ್ ಪಾತ್ ಥೋಡಕ್ ಸಮಾಜ್(ಜಾತಿ-ಗೀತಿ ಮುರಿಯುವ ಸಮಾಜ) ಸಂಘಟನೆಯನ್ನು ರಾಮಮೂರ್ತಿ ಸೇರಿಕೊಂಡರು ಮತ್ತು ಜಾತಿ ಪದ್ಧತಿಯ ವಿರುದ್ಧ ಹಾಗೂ ಅದರ ನಿರ್ಮೂಲನೆಗಾಗಿನ ಚಟುವಟಿಕೆಗಳಲ್ಲಿ ಮುಳುಗಿ ಹೋದರು.

ದಲಿತರಿಗೆ ದೇವಸ್ಥಾನಗಳಲ್ಲಿ ಪ್ರವೇಶ ನಿರಾಕರಣೆಯನ್ನು ರಾಮಮೂರ್ತಿ ವಿರೋಧಿಸುತ್ತಿದ್ದರು. ಅವರು ಚಮ್ಮಾರರಿಗೆ ಭಕ್ತಿಗೀತೆಗಳನ್ನು ಮತ್ತು ಕೆಲವು ಸಾಮಾನ್ಯ ಮಂತ್ರಗಳನ್ನು ಕಲಿಸಿದರು. ಸ್ಥಳೀಯ ವೈಷ್ಣವ ದೇವಸ್ಥಾನದ ಟ್ರಸ್ಟಿಗಳ ಸ್ಥಾನಕ್ಕೆ ಚುನಾವಣೆ ನಡೆಯುತ್ತಿದೆ ಎಂದು ಗೊತ್ತಾದಾಗ 200 ದಲಿತರನ್ನು ಸಿದ್ಧಮಾಡಿ ಅವರ ತೋಳುಗಳ ಮೇಲೆ ವೈಷ್ಣವ ಸಂಕೇತಗಳಾದ ಶಂಖ ಮತ್ತು ಚಕ್ರ ಚಿತ್ರಗಳನ್ನು ಬರೆಸಿ ಆ ದೇವಸ್ಥಾನದ ಮತದಾರರಾಗಿ ನೋಂದಾಯಿಸಬೇಕೆಂದು ಒತ್ತಾಯಿಸಿದರು. ಇದರಿಂದ ಕೋಪಗೊಂಡ ಬ್ರಾಹ್ಮಣರು ಸಿವಿಲ್ ಕೋರ್ಟಿಗೆ ಮನವಿ ಮಾಡಿದರು. ದಲಿತರ ಈ ಪ್ರಕರಣದಲ್ಲಿ ವಾದ ಮಂಡಿಸಲು ರಾಮಮೂರ್ತಿಯವರೇ ಸಹಾಯ ಮಾಡಿದರು. ಆ ವಿವಾದ ಹೈಕೋರ್ಟಿನವರೆಗೂ ಹೋಯಿತು. ರಾಮಮೂರ್ತಿಯವರಿಂದ ತರಬೇತಿ ಪಡೆದಿದ್ದ ದಲಿತರು ನ್ಯಾಯಾಧೀಶರಿಗೆ ಮನದಟ್ಟು ಮಾಡಿಸುವಲ್ಲಿ ಯಶಸ್ವಿಯಾದರು ಮತ್ತು ಅವರ ಪರವಾದ ತೀರ್ಪು ಪಡೆದರು. ದಲಿತರ ದೇವಸ್ಥಾನ ಪ್ರವೇಶ ಕುರಿತ ಬ್ರಾಹ್ಮಣರ ಆಶಯಕ್ಕೆ ವಿರುದ್ಧವಾಗಿ ನ್ಯಾಯಾಲಯದ ತೀರ್ಪು ಪಡೆದಿರುವುದು ಒಂದು ಅಪರೂಪದ ಸಂಗತಿಯಾಯಿತು. 'ಮನಸ್ಸು ಪರಿವರ್ತನೆಯ' ಪ್ರತಿಪಾದನೆ ಮಾಡುತ್ತಿದ್ದ ಗಾಂಧಿಯವರು ಈ ಬೆಳವಣಿಗೆಯನ್ನು ಮಾನ್ಯ ಮಾಡಲೇಬೇಕಾದ ಬಲವಂತಕ್ಕೆ ಒಳಗಾದರು.

ಅದಾಗಲೇ ಸಮಾಜವಾದಿ ಚಿಂತನೆಗಳ ಪರಿಚಯ ಮಾಡಿಕೊಂಡಿದ್ದ ರಾಮಮೂರ್ತಿ ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದ ಸ್ಥಾಪನಾ ಸಮ್ಮೇಳನದಲ್ಲಿ ಭಾಗವಹಿಸಿದರು. ತಮ್ಮ ಸಾಮಾಜಿಕ ಸುಧಾರಣಾ ಚಟುವಟಿಕೆಗಳ ಜತೆಯಲ್ಲೇ, ಕಾರ್ಮಿಕರನ್ನು ಸಂಘಟಿಸಿ ರಾಜ್ಯದಲ್ಲಿ ಒಂದು ಕಾರ್ಮಿಕ ಚಳುವಳಿಯನ್ನು ಕಟ್ಟಿ ಬೆಳೆಸುವ ನಿಟ್ಟಿನಲ್ಲಿ ರಾಮಮೂರ್ತಿ ಪ್ರಮುಖ ಪಾತ್ರ ವಹಿಸಿದರು.

ರಾಮಮೂರ್ತಿಯವರ ಜತೆಯಲ್ಲೇ ಪಿ.ಜೀವನಂದನ್ ಮತ್ತು ಬಿ.ಶ್ರೀನಿವಾಸ ರಾವ್ ಅವರುಗಳೂ ಸಾಮಾಜಿಕ ಸುಧಾರಣಾ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಪೆರಿಯಾರ್ ರಾಮಸ್ವಾಮಿಯವರ ಸ್ವಾಭಿಮಾನಿ ಚಳುವಳಿಯಲ್ಲಿ ಜೀವನಂದನ್ ಅವರು ಸಕ್ರಿಯ ಕಾರ್ಯಕರ್ತರಾಗಿ ದುಡಿದರು ಮತ್ತು ಆ ನಂತರ ಕಮ್ಯುನಿಸ್ಟ್ ಚಳುವಳಿಯ ಪ್ರಭಾವಿ ಮುಖಂಡರಾದರು. ಭೂಮಾಲಕರ ದಬ್ಬಾಳಿಕೆ ಹಾಗೂ ಶೋಷಣೆಯ ವಿರುದ್ಧದ ಕೃಷಿ ಕೂಲಿಗಾರರ ಹೋರಾಟ ಮತ್ತು ಜಾತಿ ದಬ್ಬಾಳಿಕೆಯ ವಿರುದ್ಧದ ಹೋರಾಟದ ಮುಂದಾಳತ್ವವನ್ನು ಶ್ರೀನಿವಾಸ ರಾವ್ ವಹಿಸಿದ್ದರು.

ಕೇರಳದ ಜನನಾಯಕರಾಗಿದ್ದ ಎ.ಕೆ. ಗೋಪಾಲನ್ ಅವರೂ ಇದೇ ಹಾದಿ ತುಳಿದರು. ಆಗ ರೂಢಿಯಲ್ಲಿದ್ದ ತಾರತಮ್ಯದ ಸಂಪ್ರದಾಯಗಳನ್ನು ಅವರು ಒಪ್ಪುತ್ತಿರಲಿಲ್ಲ ಮತ್ತು ಅವುಗಳ ವಿರುದ್ಧ ಹೋರಾಟಗಳನ್ನು ಆರಂಭಿಸಿದರು. ಅಂತಹ ಹೋರಾಟಗಳಲ್ಲಿ ಗುರುವಾಯೂರು ದೇವಸ್ಥಾನ ಸತ್ಯಾಗ್ರಹ ಜನಪ್ರಿಯವಾದದ್ದು, ಅವರು ದಲಿತರಿಗೆ ದೇವಸ್ಥಾನ ಪ್ರವೇಶ ನೀಡಬೇಕೆಂದು ಒತ್ತಾಯಿಸಿದರು. ಮೇಲ್ಜಾತಿಯ ಹಿಂದೂಗಳು ಅವರನ್ನು ತೀವ್ರವಾಗಿ ಹೊಡೆದರು ಮತ್ತು ಬಂಧನ ಮಾಡಿಸಿ ಮನಸಾರೆ ಚಿತ್ರಹಿಂಸೆ ನೀಡಿದರು. ಇವೆಲ್ಲಾ ಕಷ್ಟಗಳನ್ನು ಎದುರಿಸಿದರೂ, ಎ.ಕೆ.ಜಿ. ತಮ್ಮ ಚಳುವಳಿಯನ್ನು ಮುಂದುವರಿಸಿದರು ಮತ್ತು ಅದು ರಾಷ್ಟ್ರ ಮಟ್ಟದ ಗಮನ ಸೆಳೆಯಿತು. ಕಮ್ಯುನಿಸ್ಟ್ ಪಕ್ಷದ ಸ್ಥಾಪಕ ಸದಸ್ಯರಾಗಿದ್ದ ಪಿ.ಕೃಷ್ಣ ಪಿಳ್ಳೈಯವರೂ ಈ ಗುರುವಾಯೂರು ಚಳುವಳಿಯ ಪ್ರಮುಖ ಮುಖಂಡರಾಗಿದ್ದರು. ಇ.ಎಂ.ಎಸ್.ನಂಬೂದಿರಿಪಾಡ್ ಮತ್ತು ಪಿ.ಕೃಷ್ಣ ಪಿಳ್ಳೈಯವರು ಎ.ಕೆ.ಜಿ.ಯವರಿಗೆ ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷ ಮತ್ತು ಆ ನಂತರ ಕಮ್ಯುನಿಸ್ಟ್ ಪಕ್ಷ ಸೇರುವಲ್ಲಿ ಸಹಾಯ ಮಾಡಿದರು.

ಇ.ಎಂ.ಎಸ್.ನಂಬೂದಿರಿಪಾಡ್ ಅವರು ತಮ್ಮ ವಿದ್ಯಾರ್ಥಿ ದೆಸೆಯಲ್ಲೇ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಳ್ಳುತ್ತಿರುವಾಗಲೇ ನಂಬೂದಿರಿ

ಪುಟ 15 ಕ್ಕೆ

ಈಗ ಮಧ್ಯಪ್ರದೇಶದಲ್ಲಿ ಬಿಜೆಪಿಯ ಭಂಡ ಕುದುರೆ ವ್ಯಾಪಾರ

ಬಿಜೆಪಿ ಬ್ಲಾಕ್‌ಮೇಲ್, ಆಮಿಷಗಳ ಬಗ್ಗೆ ಎಚ್ಚರದಿಂದಿರಬೇಕು: ಸಿಪಿಐ(ಎಂ) ಪೊಲಿಟ್‌ಬ್ಯುರೊ

ಬಿಜೆಪಿ ಮತ್ತೊಮ್ಮೆ ಮಧ್ಯಪ್ರದೇಶದ ಕಾಂಗ್ರೆಸ್ ರಾಜ್ಯ ಸರಕಾರವನ್ನು ಉರುಳಿಸುವ ಪ್ರಯತ್ನದಲ್ಲಿ ಒರಟು ಕುದುರೆ ವ್ಯಾಪಾರದಲ್ಲಿ ತೊಡಗಿ ಪ್ರಜಾಪ್ರಭುತ್ವದ ಬಗ್ಗೆ ತನ್ನ ತಿರಸ್ಕಾರವನ್ನು ಪ್ರದರ್ಶಿಸಿದೆ. ಜನಾದೇಶವನ್ನು ಸಂಪೂರ್ಣವಾಗಿ ತಿರುವುಮುರುವುಗೊಳಿಸುವ ಪ್ರಯತ್ನ, ಪ್ರಜಾಪ್ರಭುತ್ವದ ಬಗ್ಗೆ, ಜನತೆಯ ಇಚ್ಛೆ ಮತ್ತು ಕಾನೂನಿನ ಆಳ್ವಿಕೆಯ ಬಗ್ಗೆ ಬಿಜೆಪಿಯ ನಿಲುವನ್ನು ಮತ್ತೊಮ್ಮೆ ಪ್ರದರ್ಶಿಸುತ್ತದೆ ಎಂದು ಇದನ್ನು ಖಂಡಿಸುತ್ತ ಪೊಲಿಟ್‌ಬ್ಯುರೊ ಹೇಳಿದೆ.

ಹಲವು ಬಿಜೆಪಿಯೇತರ ರಾಜ್ಯ ಸರಕಾರಗಳು ಸಿಎಎ/ಎನ್‌ಪಿಆರ್/ಎನ್‌ಆರ್‌ಸಿ ಪ್ರಕ್ರಿಯೆಗೆ ವಿರೋಧವನ್ನು ಘೋಷಿಸಿರುವುದರಿಂದ, ಬಿಜೆಪಿ ಅತ್ಯಂತ ಕೆಟ್ಟ ಸ್ವರೂಪದ ಕುದುರೆ ವ್ಯಾಪಾರದಲ್ಲಿ ತೊಡಗಿ, ಈ ರಾಜ್ಯಸರಕಾರಗಳನ್ನು ಪತನಗೊಳಿಸುವ ಪ್ರಯತ್ನದ ಮೇಲೆ ಗುರಿಯಿಟ್ಟಿದೆ.

ಬಿಜೆಪಿಯ ಈ ಪ್ರಜಾಪ್ರಭುತ್ವ- ವಿರೋಧಿ ವಿಧಾನಗಳನ್ನು ಬಲವಾಗಿ ಖಂಡಿಸುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ, ನಿರ್ದಿಷ್ಟವಾಗಿ ಎಲ್ಲ ಬಿಜೆಪಿಯೇತರ ರಾಜ್ಯ ಸರಕಾರಗಳ ಗಮನವನ್ನು ಈ ಕುದುರೆ ವ್ಯಾಪಾರದತ್ತ ಸೆಳೆದಿದೆ, ಈ ರಾಜ್ಯ ಸರಕಾರಗಳು ಬಿಜೆಪಿಯ ಅಪಾರ ಹಣಬಲ ಮತ್ತು ಕುದುರೆ ವ್ಯಾಪಾರದ ಜತೆ-ಜತೆಗೆ ಅದರ ಬ್ಲಾಕ್‌ಮೇಲ್, ಆಮಿಷಗಳ ಬಗ್ಗೆ ಎಚ್ಚರದಿಂದಿರಬೇಕು ಎಂದು ಹೇಳಿದೆ. ಜನಾದೇಶವನ್ನು ಉಲ್ಲಂಘಿಸಲು ಸಾಧ್ಯವಿಲ್ಲ, ಈ ರೀತಿ ಭಂಡ ಪ್ರಜಾಪ್ರಭುತ್ವ-ವಿರೋಧಿ ರೀತಿಯಲ್ಲಿ ಅದನ್ನು ತಿರುವುಮುರುವುಗೊಳಿಸಲು ಸಾಧ್ಯವಿಲ್ಲ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ ಯೆಚುರಿ ಮಧ್ಯಪ್ರದೇಶದ ಬೆಳವಣಿಗೆಗಳ ಬಗ್ಗೆ ಟಿಪ್ಪಣಿ ಮಾಡುತ್ತ "ಕಾಯಿಲೆಯೊಂದು ವ್ಯಾಪಕವಾಗಿ ಹರಡುವ ಭೀತಿಯಿರುವಾಗ, ಸಾಮಾಜಿಕ ವಿಷಮತೆ ಆಳಗೊಳ್ಳುತ್ತಿರುವಾಗ, ಜತೆಗೆ ಆರ್ಥಿಕ ವ್ಯವಸ್ಥೆ ಕುಸಿಯುತ್ತಿರುವಾಗ ಈ ಸರಕಾರ ರಾಜ್ಯ ಸರಕಾರಗಳನ್ನು ಉರುಳಿಸುವ ಮತ್ತು ಸುಳ್ಳುಗಳನ್ನು ಪಸರಿಸುವುದರ ಮೇಲೆ ಗಮನ ಕೇಂದ್ರೀಕರಿಸಿದೆ. ಮುಂದೆ ಇದಕ್ಕೆ ಅದು ಉತ್ತರ ಕೊಡಬೇಕಾಗುತ್ತದೆ" ಎಂದು ಹೇಳಿದ್ದಾರೆ.

ಸಂಸತ್ತಿನಲ್ಲಿ ದಿಲ್ಲಿ ಕೋಮುವಾದಿ ಹಿಂಸಾಚಾರವನ್ನು ಚರ್ಚಿಸದಿರುವುದು ಲಜ್ಜೆಗೆಟ್ಟ ವರ್ತನೆ-ಪೊಲಿಟ್‌ಬ್ಯುರೊ

ಈಶಾನ್ಯ ದಿಲ್ಲಿಯ ಭೀಕರ ಕೋಮುವಾದಿ ಹಿಂಸಾಚಾರವನ್ನು ಚರ್ಚಿಸಲು ಲೋಕಸಭೆ ಮತ್ತು ರಾಜ್ಯಸಭೆ ವಿಫಲವಾಗಿರುವ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ಕಾನೂನು ಮತ್ತು ವ್ಯವಸ್ಥೆ ಕೇಂದ್ರ ಸರಕಾರದ ಅಡಿಯಲ್ಲಿರುವಾಗ ಇಂತಹ ಒಂದು ಬೃಹದಾಕಾರದ ದುರಂತದ ಬಗ್ಗೆ ಚರ್ಚಿಸಲು ಸಾಧ್ಯವಾಗದಿರುವುದು ನಾಚಿಕೆಗೇಡಿನ ಸಂಗತಿ. ಈ ದುರಂತಕ್ಕೆ ಇದುವರೆಗೆ ಅಧಿಕೃತವಾಗಿಯೇ 53 ಜೀವಗಳು ಬಲಿ ತೆತ್ತಿವೆ, ಈ ಸಂಖ್ಯೆ ಹೆಚ್ಚುತ್ತಲೇ ಇದೆ. ಕಾಣೆಯಾಗಿರುವವರ ಸಂಖ್ಯೆಯೂ ದೊಡ್ಡದಾಗಿದ್ದು, ಅವರ ಗತಿಯೇನು ಎಂಬುದೂ ಸ್ಪಷ್ಟವಾಗಿಲ್ಲ.

ಈ ಹಿಂಸಾಚಾರವನ್ನು ಬ್ರಿಟಿಶ್ ಪಾರ್ಲಿಮೆಂಟಿನ ಕೆಳಸದನ, ಹೌಸ್ ಆಫ್ ಕಾಮನ್ಸ್ ಮೂರು ದಿನಗಳ ಹಿಂದೆ ಚರ್ಚಿಸಿರುವಾಗಲಂತೂ ನಮ್ಮ ಸಂಸತ್ತು ಇದನ್ನು ಚರ್ಚಿಸಲು ಸಾಧ್ಯವಾಗದಿರುವುದು ನಿಜಕ್ಕೂ ನಾಚಿಕೆಗೇಡಿನ ಸಂಗತಿ. ಎಂದು ಪೊಲಿಟ್‌ಬ್ಯುರೊ ಖೇದ ವ್ಯಕ್ತಪಡಿಸಿದೆ.

ಒಂದು ಹೆಮ್ಮೆಯ ಸಂಸದೀಯ ಪ್ರಜಾಪ್ರಭುತ್ವವಾಗಿ ಕಳೆದ 70 ವರ್ಷಗಳಲ್ಲಿ ನಮ್ಮ ಸಾರ್ವಭೌಮ ಸಂಸತ್ತಿನ ಸ್ಥಾನಮಾನ ಎಂದೂ ಇಷ್ಟೊಂದು ಅಸಹಾಯಕತೆಯ ಮಟ್ಟಕ್ಕೆ ಇಳಿದಿರಲಿಲ್ಲ. ಹೋಳಿ ಹಬ್ಬವನ್ನು ನೆಪವಾಗಿ ಬಳಸಿಕೊಂಡು ಶಾಸಕಾಂಗಕ್ಕೆ ಜವಾಬುದಾರಿಯಾಗಿರುವ ಕರ್ತವ್ಯನ್ನು ನಿರಾಕರಿಸಲಾಗಿದೆ.

ವಿಷಯ ಇಂತಹ ಸ್ಥಿತಿಗೆ ಬರುವ ವರೆಗೆ ಬಿಡಲು ಎರಡು ಸದನಗಳ ಅಧ್ಯಕ್ಷರುಗಳ ಮೇಲೆ ಹೊಣೆ ವರ್ಗಾಯಿಸಿರುವುದು ಕೂಡ ಲಜ್ಜೆಗೆಟ್ಟ ಸಂಗತಿ. ಒಂದು ಕಾರ್ಯರತ ಪ್ರಜಾಪ್ರಭುತ್ವದ ಜನತೆಗೆ ಇಂತಹ ವರ್ತನೆಯನ್ನು ಒಪ್ಪುವುದಿಲ್ಲ ಎಂದು ತಮ್ಮ ಪಕ್ಷ ನಂಬಿರುವುದಾಗಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಯಸ್ ಬ್ಯಾಂಕ್ ಕುಸಿತದ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ

ಕಾರ್ಪೊರೇಟ್ ಬಂಟತನದ ಅತ್ಯಂತ ಕೆಟ್ಟ ಪ್ರಕರಣ

ಯಸ್ ಬ್ಯಾಂಕ್ ಕುಸಿದಿರುವುದು ಖಾಸಗಿ ಬ್ಯಾಂಕುಗಳ ಕಾರ್ಯನಿರ್ವಹಣೆ ಮತ್ತು ಅವುಗಳ ನಿಯಂತ್ರಣ ಮಾಡಬೇಕಾದ ರಿಝರ್ವ್ ಬ್ಯಾಂಕ್ ಆಫ್ ಇಂಡಿಯಾ(ಆರ್‌ಬಿಐ) ಸೂಕ್ತ ಸಮಯದಲ್ಲಿ ಮಧ್ಯಪ್ರವೇಶಿಸದಿರುವ ಬಗ್ಗೆ ಹಲವು ಕಳವಳಕಾರಿ ಪ್ರಶ್ನೆಗಳನ್ನು ಎತ್ತಿದೆ. ಈ ಯಸ್ ಬ್ಯಾಂಕ್ ಪ್ರಕರಣ ಬಂಟ ಬಂಡವಾಳಶಾಹಿಯ ಅತ್ಯಂತ ಕೆಟ್ಟ ಉದಾಹರಣೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ವರ್ಣಿಸಿದೆ.

ಈ ಬ್ಯಾಂಕಿನ ಸಾಲ ಖಾತೆ ಮಾರ್ಚ್ 2014ರಲ್ಲಿ ರೂ.55,633 ಕೋಟಿ ಇದ್ದದ್ದು, ಮಾರ್ಚ್ 2019ರಲ್ಲಿ ರೂ.2,41,999ಗೆ ಭಾರೀ ಪ್ರಮಾಣದಲ್ಲಿ ಏರಿದೆ ಎಂದು ದಾಖಲೆಗಳು ತೋರಿಸುತ್ತಿವೆ. ಬ್ಯಾಂಕಿನ ತಲೆಯ ಮೇಲೆ ಆಳುವ ವ್ಯವಸ್ಥೆಯ ಪ್ರೀತಿಪಾತ್ರ ಕಾರ್ಪೊರೇಟ್‌ಗಳಿಗೆ ಕೊಟ್ಟ ಅಪಾರ ಸಾಲಗಳ ಹೊರೆ ಬಿದ್ದಿದೆ. ಅನಿಲ್ ಅಂಬಾನಿಯಂತಹ ಕೆಲವು ಕಾರ್ಪೊರೇಟ್ ಸಾಲಗಾರರಿಗೆ, ಅವರ ಹಣಕಾಸು ಆರೋಗ್ಯ ಅತ್ಯಂತ ಅಭದ್ರವಾಗಿದೆ ಎಂಬುದರ ಎಲ್ಲ ದಾಖಲೆಗಳೂ ಇದ್ದರೂ, ಮೋದಿ ಸರಕಾರದ ಭಾರೀ ಬೆಂಬಲ ಇತ್ತು ಎಂಬ ಸಂಗತಿಯತ್ತ ಪೊಲಿಟ್‌ಬ್ಯುರೊ ಗಮನ ಸೆಳೆದಿದೆ.

ಬ್ಯಾಂಕಿನ ಆಡಳಿತ ಮಂಡಳಿ ಮತ್ತು ಪ್ರಾಯೋಜಕರು ಕೆಲ ಸಮಯದಿಂದ ನಡೆಸುತ್ತಿದ್ದ ಕಿತಾಪತಿಗಳು ಚೆನ್ನಾಗಿ ಗೊತ್ತಿದ್ದರೂ, ಆರ್‌ಬಿಐ ಸೂಕ್ತ ಸಮಯದಲ್ಲಿ ಕ್ರಮ ಕೈಗೊಳ್ಳಲಿಲ್ಲ, ಆಮೂಲಕ ಠೇವಣಿದಾರರ ಹಿತಗಳನ್ನು ಅಪಾಯಕ್ಕೀಡುಮಾಡಿದೆ. ಬಂಡ ಬಂಡವಾಳಶಾಹಿಯ ಮೇಲೆ ನಿಂತಿರುವ ಪ್ರಸಕ್ತ ಆಳ್ವಿಕೆ ಭಾರತೀಯ ಅರ್ಥವ್ಯವಸ್ಥೆಯ ಮೇಲೆ ಉಂಟು ಮಾಡಿರುವ ವಿಧ್ವಂಸಕಾರೀ ಪ್ರಭಾವವನ್ನು ಇನ್ನು ಮುಂದೆ ಮುಚ್ಚಿಡಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಕಟುವಾಗಿ ವಿಮರ್ಶಿಸುತ್ತ ಹೇಳಿದೆ.

ಈಗ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವನ್ನು ಯಸ್ ಬ್ಯಾಂಕಿನ 49ಶೇ. ಪಾಲನ್ನು ವಹಿಸಿಕೊಳ್ಳುವಂತೆ ಸರಕಾರ ಹೇಳಿರುವಾಗ, ಆ ಬ್ಯಾಂಕ್ ಈಗ ಅನಿವಾರ್ಯವಾಗಿಯೇ ಪ್ರಭುತ್ವದ ಒಡೆತನದ ಉದ್ದಿಮೆಯಾಗಿ ಬಿಡುತ್ತದೆ. ಅದು ಲಾಭಗಳ ಖಾಸಗೀಕರಣ, ನಷ್ಟಗಳ ರಾಷ್ಟ್ರೀಯಕರಣದ ಉದಾಹರಣೆಯಾಗಲು ಸಾಧ್ಯವಿಲ್ಲ. ಠೇವಣಿದಾರರ ಹಿತಗಳನ್ನು ಕಾಪಾಡುವುದು ಪರಮ ಸಂಗತಿಯಾಗುತ್ತದೆ. ಆರ್‌ಬಿಐ ಹಣ ವಾಪಾಸು ತೆಗೆಯಲು ವಿಧಿಸಿರುವ ರೂ.50,000 ಮಿತಿಯನ್ನು ತಕ್ಷಣವೇ ರದ್ದುಗೊಳಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬುರೊ ಆಗ್ರಹಿಸಿದೆ.

ಮಲೆಯಾಳಂ ಸುದ್ದಿ ವಾಹಿನಿಗಳ ಮೇಲೆ ನಿಷೇಧ

ಇಷ್ಟವಾಗದ ಸುದ್ದಿಗಳನ್ನು ದಮನ ಮಾಡುವ ಮೋದಿ ಸರಕಾರದ ಸರ್ವಾಧಿಕಾರಶಾಹೀ ಪ್ರಯತ್ನ

ಎರಡು ಮಲೆಯಾಳಂ ಸುದ್ದಿ ವಾಹಿನಿಗಳಾದ ಏಷ್ಯಾನೆಟ್ ನ್ಯೂಸ್ ಮತ್ತು ಮೀಡಿಯಾ ಒನ್ ಮೇಲೆ ಸುದ್ದಿ ಮತ್ತು ಪ್ರಸಾರ ಮಂತ್ರಾಲಯ 48 ಗಂಟೆಗಳ ನಿಷೇಧ ಹೇರಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಮೋದಿ ಸರಕಾರದ ಈ ತೀವ್ರ ಕ್ರಮ ಮಾಧ್ಯಮಗಳ ಮೇಲೆ ನಡೆಸಿರುವ ಒಂದು ನೇರ ಪ್ರಹಾರ ಎಂದು ಅದು ವರ್ಣಿಸಿಸೆ.

ಈ ನಿಷೇಧ ಆದೇಶಕ್ಕೆ ಕೊಟ್ಟಿರುವ ಕಾರಣಗಳೆಂದರೆ, ಈ ವಾಹಿನಿಗಳು ಕ್ರಿಯೆಗಿಳಿಯುವಲ್ಲಿ ಕೇಂದ್ರ ಸರಕಾರದ ವಿಳಂಬದ ಟೀಕೆ, ಆರೆಸ್ಸೆಸ್‌ನ ಪಾತ್ರವನ್ನು ಪ್ರಶ್ನಿಸಿರುವುದು ಮತ್ತು ದಿಲ್ಲಿ ಪೋಲೀಸರ ಮೇಲೆ ನಿಷ್ಕ್ರಿಯತೆಯ ಆರೋಪ.

ಆಳುವ ಪಕ್ಷಕ್ಕೆ ಇಷ್ಟವಾಗದ ಸುದ್ದಿಗಳನ್ನು ದಮನ ಮಾಡುವ ಒಂದು ಸರ್ವಾಧಿಕಾರಶಾಹೀ ಪ್ರಯತ್ನದಲ್ಲಿ ಸರಕಾರ ಈ ಕ್ರಮವನ್ನು ಕೈಗೊಂಡಿದೆ ಎಂಬುದನ್ನು ಇದು ವೇದ್ಯಗೊಳಿಸುತ್ತದೆ.

ಮಾಧ್ಯಮಗಳನ್ನು ದಮನ ಮಾಡುವ ಈ ಪ್ರಯತ್ನಗಳು ದಿಲ್ಲಿಯಲ್ಲಿ ಕೋಮುವಾದಿ ಹಿಂಸಾಚಾರವನ್ನು ಎದುರಿಸುವಲ್ಲಿ ಕೇಂದ್ರ ಸರಕಾರದ ವಿಫಲತೆಯನ್ನು ಮುಚ್ಚಿ ಹಾಕುವ **ಪುಟ 15 ಕ್ಕೆ**

ಕೋವಿಡ್-19 ವೈರಸ್ ಭಯದಿಂದ ಕೋಳಿ ಉತ್ಪನ್ನಗಳ ಬೆಲೆಗಳಲ್ಲಿ ಕುಸಿತ ಕೋಳಿಸಾಕಣೆ ರೈತರಿಗೆ ಪರಿಹಾರ ನೀಡಲು ಎಐಕೆಎಸ್ ಆಗ್ರಹ

ದೇಶಾದ್ಯಂತ ಕೋಳಿ ಸಾಕಣೆ ರೈತರು ಕೋಳಿ ಮಾಂಸ ಮತ್ತು ಮೊಟ್ಟೆಗಳ ಬೆಲೆಗಳಲ್ಲಿ ಭಾರೀ ಕುಸಿತ ಉಂಟಾಗಿರುವುದರಿಂದ ಅಭೂತಪೂರ್ವ ನಷ್ಟವನ್ನು ಎದುರಿಸುತ್ತಿದ್ದಾರೆ. ಕೊರೊನ ವೈರಸ್‌ನ ಭಯದಿಂದ ಈ ಉತ್ಪನ್ನಗಳ ಮಾರಾಟ ಕುಸಿದಿದೆ. ಒಂದು ಕೆ.ಜಿ. ಕೋಳಿ ಉತ್ಪನ್ನದ ವೆಚ್ಚ 80 ರಿಂದ 85 ರೂ. ಅಗಿದೆ, ಆದರೆ ಫಾರ್ಮಗಳಲ್ಲಿ ಜೀವಂತ ಕೋಳಿಗೆ ಸಿಗುವ ಬೆಲೆ 15ರಿಂದ 35 ರೂ. ಮಾತ್ರ. ಮೊಟ್ಟೆಯ ಬೆಲೆಯೂ 2.50ರೂ.ಗಿಳಿದಿದೆ, ಅದರ ಉತ್ಪಾದನಾ ವೆಚ್ಚ 4ರೂ. ಕೋಳಿಗಳ ಮಾರಾಟ ತೀವ್ರವಾಗಿ ಇಳಿದಿದೆ, ಇವುಗಳ ಸಾಗಣೆಯನ್ನೂ ಸ್ಥಳೀಯ ಅಧಿಕಾರಿಗಳು ನಿಷೇಧಿಸಿದ್ದಾರೆ. ಈ ಎಲ್ಲ ಅಂಶಗಳು ಕೋಳಿ ಉದ್ಯಮ ಅಪಾರ ನಷ್ಟಗಳಿಗೆ ತುತ್ತಾಗುವಂತೆ ಮಾಡಿವೆ.

ದೇಶಾದ್ಯಂತ 2.2 ಲಕ್ಷ ಬ್ರಾಯ್ಲರ್ ರೈತರಿದ್ದಾರೆ. ಅವರಲ್ಲಿ ಬಹುಪಾಲು ಕಾಂಟ್ರಾಕ್ಟ್ ರೈತರು. ಅವರಿಗೆ ಕೋಳಿ ಸಾಕಣೆಗೆಂದು ಸಿಗುವುದು ಪಡಿಗಾಸು ಮಾತ್ರ. ಈ ಉದ್ದಿಮೆಗೆ ಸಂಬಂಧಪಟ್ಟವರು ಲೆಕ್ಕ ಹಾಕಿರುವ ಪ್ರಕಾರ ಪ್ರತಿದಿನ 160 ಕೋಟಿ ರೂ. ಗಳಷ್ಟು ನಷ್ಟವಾಗುತ್ತಿದೆ. ಈ ಉದ್ದಿಮೆ ಜಿಡಿಪಿಗೆ 1.2 ಲಕ್ಷ ಕೋಟಿ ರೂ.ಗಳನ್ನು ನೀಡುತ್ತದೆ. ಮತ್ತು 2.75 ಕೋಟಿ ಉದ್ಯೋಗಾವಕಾಶಗಳನ್ನು ನಿರ್ಮಿಸಿದೆ.

ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ತೀವ್ರ ನಷ್ಟಗಳನ್ನು ಎದುರಿಸುತ್ತಿರುವ ರೈತರಿಗೆ ಪರಿಹಾರ ಒದಗಿಸಬೇಕು ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಆಗ್ರಹಿಸಿದೆ. ಭಾರೀ ನಷ್ಟವನ್ನು ಅನುಭವಿಸಿರುವ ರೈತರನ್ನು ಗುರುತಿಸಲು ಒಂದು ಸರ್ವೆಯನ್ನು ನಡೆಸಬೇಕಾಗಿದೆ ಎಂದೂ ಅದು ಹೇಳಿದೆ.

ನೌಕರರ ಭವಿಷ್ಯ ನಿಧಿಯ ಮೇಲಿನ ಬಡ್ಡಿ ಕಡಿತ: ಕಾರ್ಮಿಕ-ವಿರೋಧಿ,ಕಾರ್ಪೊರೇಟ್-ಪರ ಕ್ರಮ: ಸಿಐಟಿಯು ಖಂಡನೆ

ನೌಕರರ ಭವಿಷ್ಯ ನಿಧಿ ಸಂಘಟನೆ(ಇಪಿಎಫ್‌ಒ)ಯ ಕೇಂದ್ರೀಯ ಟ್ರಸ್ಟಿ ಮಂಡಳಿ(ಸಿಬಿಟಿ) ಭವಿಷ್ಯ ನಿಧಿಯ ಮೇಲಿನ ಬಡ್ಡಿ ದರವನ್ನು 8.65 ಶೇ.ದಿಂದ 8.5ಶೇ.ಕ್ಕೆ ಇಳಿಸಿರುವುದರ ಬಗ್ಗೆ ಸಿಐಟಿಯು ಗಂಭೀರ ಕಳವಳವನ್ನು ವ್ಯಕ್ತಪಡಿಸಿದೆ.

ಮಾರ್ಚ್ 5ರಂದು ನಡೆದ ಸಿಬಿಟಿ ಸಭೆಯಲ್ಲಿ ಕಾರ್ಮಿಕರ ಪ್ರತಿನಿಧಿಗಳು ಈ ವಿಷಯದಲ್ಲಿ ಬಲವಾದ ಅತೃಪ್ತಿ ಮತ್ತು ಅಸಮಾಧಾನವನ್ನು ವ್ಯಕ್ತಪಡಿಸಿದರು. ಇಪಿಎಫ್ ಹೂಡಿಕೆಗಳ ಮೇಲಿನ, ಮತ್ತು ಇತರ ಹೂಡಿಕೆಗಳ ಮೇಲಿನ ಆದಾಯಗಳು ಇಳಿಯುತ್ತಿವೆಯಾದ್ದರಿಂದ ಬಡ್ಡಿದರವನ್ನು ಇಳಿಸಬೇಕಾಗಿ ಬಂದಿದೆ ಎಂದು ಸರಕಾರ ಹೇಳಿತು. ಆದರೆ ಇಪಿಎಫ್ ಠೇವಣಿಗಳಲ್ಲಿ 65ಶೇ. ಸರಕಾರದ ಸೆಕ್ಯೂರಿಟಿಗಳಲ್ಲಿ ಹೂಡಿಕೆಯಾಗಿದೆ. ಸಾಮಾಜಿಕ ಭದ್ರತಾ ಉಳಿತಾಯಗಳೂ ಸೇರಿದಂತೆ ಸಣ್ಣ ಉಳಿತಾಯಗಳ ಮೇಲಿನ ಬಡ್ಡಿದರಗಳನ್ನು ಸತತವಾಗಿ ಇಳಿಸುವ ಸರಕಾರದ ಧೋರಣೆಯಿಂದಾಗಿ ಇಪಿಎಫ್‌ಒ ಹೂಡಿಕೆಗಳ ಮೇಲಿನ ಆದಾಯಗಳು ಇಳಿಯುವಂತಾಗಿದೆ.


ಅಂದರೆ ಕೇಂದ್ರದ ಬಿಜೆಪಿ ಸರಕಾರದ ಕಾರ್ಮಿಕ-ವಿರೋಧಿ ಧೋರಣೆಗಳಿಂದಾಗಿಯೇ ಹೀಗಾಗಿದೆ. ಕಾರ್ಮಿಕರ ಸಾಮಾಜಿಕ ಭದ್ರತಾ ಉಳಿತಾಯಗಳಲ್ಲಿ ಬಹುಪಾಲು ದೀರ್ಘಾವಧಿಯ ಅವರ್ತ ಠೇವಣಿಯ ರೂಪದಲ್ಲಿ ಸರಕಾರದ ಬಳಿ ಇರುತ್ತವೆ. ಆದ್ದರಿಂದ ಕಾರ್ಮಿಕರ ಸಾಮಾಜಿಕ ಭದ್ರತಾ ಉಳಿತಾಯಗಳ ಮೇಲಿನ ಬಡ್ಡಿದರ ಸಾಮಾನ್ಯ ವಾಣಿಜ್ಯ ಸಾಲ/ ಠೇವಣಿಗಳ ಮೇಲಿನ ದರಗಳಿಗಿಂತ ಭಿನ್ನವಾಗಿರಬೇಕು ಎಂದು ಕಾರ್ಮಿಕ ಸಂಘಗಳು ಬಹಳ ಕಾಲದಿಂದ ಆಗ್ರಹಿಸುತ್ತಿವೆ. ಇದು ನ್ಯಾಯಬದ್ಧ **ಪುಟ 15 ಕ್ಕೆ**

ಅಕಾಲ ಮಳೆಯಿಂದ ರೈತರಿಗೆ ಭಾರೀ ನಷ್ಟ, ಸಾಕಷ್ಟು ಪರಿಹಾರ ಒದಗಿಸಿ-ಎಐಕೆಎಸ್

ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಅಕಾಲ ಮಳೆ ಆಲಿಕಲ್ಲು ಬಿರುಗಾಳಿಯಿಂದಾಗಿ ರೈತರು ಭಾರೀ ನಷ್ಟವನ್ನು ಅನುಭವಿಸಿದ್ದಾರೆ. ಕಳೆದ ವಾರ ಹರ್ಯಾಣ, ಪಂಜಾಬ್, ದಿಲ್ಲಿ ಮತ್ತು ಉತ್ತರಪ್ರದೇಶದ ಕೆಲವು ಭಾಗಗಳಲ್ಲಿ ಭಾರೀ ಬೆಳೆ ನಷ್ಟ ಉಂಟಾಗಿದೆ.

ದೇಶಾದ್ಯಂತ ತೀವ್ರ ಕೃಷಿ ಬಿಕ್ಕಟ್ಟಿನಿಂದಾಗಿ ಈಗಾಗಲೇ ನರಳುತ್ತಿರುವ ಸಣ್ಣ ಮತ್ತು ಮಧ್ಯಮ ರೈತರಿಗೆ ನೈಸರ್ಗಿಕ ಆಪತ್ತುಗಳು ಅಸಹನೀಯವಾಗಿ ಬಿಡುತ್ತಿವೆ. ರಾಜ್ಯ ಸರಕಾರಗಳು ಮತ್ತು ಕೇಂದ್ರ ಸರಕಾರ ರೈತರಿಗಾಗಿರುವ ನಷ್ಟದ ಅಂದಾಜು ಮಾಡಿ ಸಮಯಬದ್ಧ ರೀತಿಯಲ್ಲಿ ಸಮಗ್ರ ಪರಿಹಾರವನ್ನು ಘೋಷಿಸಬೇಕು ಎಂದು ಅಖಿಲ ಭಾರತ ಕಿಸಾನ್ ಸಭಾ ಆಗ್ರಹಿಸಿದೆ.

ಯಸ್ ಬ್ಯಾಂಕ್ ಪುನಶ್ಚೇತನ ಕ್ರಮಗಳು ಫಲ ಕೊಟ್ಟಾವೆ?



ಈ ಬಿಕ್ಕಟ್ಟನ್ನು ಬರಿಯ ಭ್ರಷ್ಟಾಚಾರದಿಂದ ವಿವರಿಸುವುದು ಸಾಧ್ಯವಿಲ್ಲ. ಈ ಬಿಕ್ಕಟ್ಟಿಗೂ ಸರಕಾರದ ಆರ್ಥಿಕ ನೀತಿಗೂ ನೇರ ಸಂಬಂಧವಿದೆ. ಹಣಕಾಸು ಆರೋಗ್ಯ, ವ್ಯವಹಾರದ ಸಫಲತೆ ಮತ್ತಿತರ ಪರಿಸ್ಥಿತಿಗಳ ಯಾವುದೇ ಪರಿವೆಯಿಲ್ಲದೆ ಕಾರ್ಪೊರೇಟುಗಳಿಗೆ ಸಾಲ ಕೊಡುವುದಕ್ಕಾಗಿ ಬ್ಯಾಂಕುಗಳು ತಮ್ಮ ಎಂದಿನ ಎಚ್ಚರಿಕೆಯ ವಿಶ್ಲೇಷಣೆಯ ನಂತರವೇ ಸಾಲ ನೀಡುವ ಪರಿಪಾಠವನ್ನೂ ಗಾಳಿಗೆ ತೂರಲು ಉತ್ತೇಜನ ಕೊಡಲಾಗಿದೆ. ಇಂತಹ ಸರಕಾರ ಮತ್ತು ಬ್ಯಾಂಕುಗಳ ಧೋರಣೆ, ಭ್ರಷ್ಟರಾಗಿರುವ ದುಷ್ಟ ಬ್ಯಾಂಕರುಗಳು ಮತ್ತು ಸಾಲಗಾರರಿಗೆ ಹಣ ಲೂಟಿ ಹೊಡೆಯಲು ಅವಕಾಶ ಕಲ್ಪಿಸಿಕೊಟ್ಟಿದೆ. ಈಗ ಯಸ್ ಬ್ಯಾಂಕಿನಲ್ಲಿ ಸ್ಟೇಟ್ ಬ್ಯಾಂಕ್ ಹೂಡಿಕೆ ಮಾಡುತ್ತಿದೆ. ಆದರೆ ರಿಸರ್ವ್ ಬ್ಯಾಂಕ್ ಪುನರ್ರಚನಾ ಯೋಜನೆ ಅಂದುಕೊಂಡಂತೆ ಕೆಲಸ ಮಾಡದಿದ್ದರೆ, ಅದರ ದುಷ್ಪರಿಣಾಮಗಳನ್ನು ಸ್ಟೇಟ್ ಬ್ಯಾಂಕಿಗೆ ಸಂಬಂಧಿಸಿದ ಎಲ್ಲರೂ, ಅಂದರೆ ಠೇವಣಿದಾರರು, ಸರಕಾರ ಮತ್ತು ತೆರಿಗೆದಾರ ಜನತೆ) ಎದುರಿಸಬೇಕಾಗುತ್ತದೆ.

– ಪ್ರೊ. ಸಿ.ಪಿ. ಚಂದ್ರಶೇಖರ್ ಕನ್ನಡಕ್ಕೆ : ವಸಂತರಾಜ ಎನ್.ಕೆ

ದಿವಾಳಿಯ ಅಂಚಿನಲ್ಲಿದ್ದ ಯಸ್ ಬ್ಯಾಂಕನ್ನು ಬಚಾವು ಮಾಡಲು ರಿಸರ್ವ್ ಬ್ಯಾಂಕ್ ಘೋಷಿಸಿರುವ ಪುನಶ್ಚೇತನ ಪ್ಯಾಕೇಜ್ ಹತಾಶೆಯ ಕ್ರಮದಂತೆ ಕಾಣುತ್ತಿದೆ. ಬ್ಯಾಂಕಿನ ಹಣಕಾಸು ಚಟುವಟಿಕೆಗಳ ಮೇಲೆ ಮತ್ತು ಠೇವಣಿದಾರರ ಹಿಂತೆಗೆತಕ್ಕೆ ಗರಿಷ್ಠ 50 ಸಾವಿರ ರೂ.ನ ನಿರ್ಬಂಧಗಳನ್ನು ಹೇರಿದ ಮೇಲೆ ಭಾರತೀಯ ಸ್ಟೇಟ್ ಬ್ಯಾಂಕನ್ನು ಪುನಶ್ಚೇತನ ಕ್ರಮ ವಹಿಸಿಕೊಳ್ಳುವಂತೆ ನಿರ್ದೇಶಿಸಿದೆ. ಯಸ್ ಬ್ಯಾಂಕಿನ ನಿಜವಾದ ಪರಿಸ್ಥಿತಿಯನ್ನು ವಿವರವಾಗಿ ಅವಲೋಕಿಸುವ ಮೊದಲೇ ಸ್ಟೇಟ್ ಬ್ಯಾಂಕಿನ ಅಧ್ಯಕ್ಷ ಯಸ್ ಬ್ಯಾಂಕಿಗೆ ಬಂಡವಾಳ ಒದಗಿಸಿ ಪುನಶ್ಚೇತನಗೊಳಿಸಲು 10 ಸಾವಿರ ಕೋಟಿ ರೂ.ವರೆಗೆ ತೆಗೆದಿಡಲು ತಯಾರು ಎಂದು ಘೋಷಿಸಿದ್ದಾರೆ. ಸ್ಟೇಟ್ ಬ್ಯಾಂಕ್ ಬರಿಯ ಸರಕಾರದ ನಿರ್ದೇಶನದಂತೆ ಕ್ರಮ ವಹಿಸುತ್ತಿದೆ ಎಂಬುದು ಸ್ಪಷ್ಟ.

ಸ್ಟೇಟ್ ಬ್ಯಾಂಕ್ ನ 'ಲೈಫ್ ಲೈನ್'

ರಿಸರ್ವ್ ಬ್ಯಾಂಕ್ ತಯಾರಿಸಿರುವ "ಯಸ್ ಬ್ಯಾಂಕ್ ಪುನರ್ರಚನೆ ಯೋಜನೆ, 2020" ಪ್ರಕಾರ ಯಸ್ ಬ್ಯಾಂಕಿನ ಶೇ. 49 ರಷ್ಟು ರೂ. 2 ಬೆಲೆಯ ಶೇರುಗಳನ್ನು ರೂ. 8 ಕ್ಕೆ ಸ್ಟೇಟ್ ಬ್ಯಾಂಕ್ ಕೊಳ್ಳಬೇಕು. ಜೊತೆಗೆ ಯಸ್ ಬ್ಯಾಂಕಿನ ಶೇರು ಬಂಡವಾಳದ ಮೊತ್ತವನ್ನು 800 ಕೋಟಿ ರೂ.ಗಳಿಂದ 5000 ಕೋಟಿ ರೂ.ಗೆ ಹೆಚ್ಚಿಸಬೇಕು. ಅಂದರೆ ಸ್ಟೇಟ್ ಬ್ಯಾಂಕ್ 2450 ಕೋಟಿ ರೂ. ಹೂಡಿಕೆಯಿಂದ ಆರಂಭಿಸಬೇಕು. ಇದು ಬರಿಯ ಆರಂಭ. ಯಸ್ ಬ್ಯಾಂಕಿನ ಆರೋಗ್ಯವನ್ನು ಪೂರ್ಣ ಸುಧಾರಿಸಲು 10 ಸಾವಿರ ಕೋಟಿ ರೂ. ಬೇಕಾದೀತು ಎಂಬುದು ಸ್ಟೇಟ್ ಬ್ಯಾಂಕ್ ಅಧ್ಯಕ್ಷರ ಅಂದಾಜು.

ಸ್ಟೇಟ್ ಬ್ಯಾಂಕ್ ಇಷ್ಟು ದೊಡ್ಡ ಮೊತ್ತ ಹೂಡಬೇಕು ಎಂದು ಸರಕಾರ ಹೇಳುವುದು ಅಂದರೆ ಯಸ್ ಬ್ಯಾಂಕ್ ಕುಸಿತದ ಅಪಾಯ ಗಂಭೀರವಾಗಿದೆಯೆಂದಾಯಿತು. ಯಸ್ ಬ್ಯಾಂಕ್ ಕುಸಿದರೆ ಇಂತಹ ಖಾಸಗಿ ಬ್ಯಾಂಕುಗಳ ಹೆಚ್ಚಿನ ಬಡ್ಡಿದರದ ಆಸೆಯಿಂದ ಇಲ್ಲಿ ಹಣ ಇಟ್ಟ ದೊಡ್ಡ ಸಣ್ಣ ಠೇವಣಿದಾರರಿಗೆ ಭಾರೀ ನಷ್ಟ ಆಗುತ್ತದೆ. ಯಸ್ ಬ್ಯಾಂಕ್ ಕುಸಿಯಲು ಬಿಟ್ಟರೆ ಠೇವಣಿದಾರರು ಗಾಬರಿಯಾಗಿ ಇತರ ಖಾಸಗಿ ಬ್ಯಾಂಕುಗಳು ಮತ್ತು ಸಣ್ಣ ಸಾರ್ವಜನಿಕ ಬ್ಯಾಂಕುಗಳಿಂದಲೂ ಠೇವಣಿ ಹಿಂಪಡೆಯಲು ಆರಂಭಿಸಬಹುದು. ಇದು ಇಡೀ ಬ್ಯಾಂಕಿಂಗ್ ವ್ಯವಸ್ಥೆಯ ಕುಸಿತಕ್ಕೆ ಕಾರಣವಾಗಬಹುದು. ಆದ್ದರಿಂದಲೇ ಹಣಕಾಸು ಮಂತ್ರಿ ಮತ್ತು ಮುಖ್ಯ ಆರ್ಥಿಕ ಸಲಹೆಗಾರ ಠೇವಣಿದಾರರ ಹಣ ಸುಭದ್ರವಾಗಿದೆ. ವದಂತಿಗಳಿಗೆ ಕಿವಿಗೊಟ್ಟು ಗಾಬರಿಯಾಗಬಾರದು ಎಂದು ಪದೇ ಪದೇ ಕಿರುಚಿಕೊಳ್ಳುತ್ತಿದ್ದಾರೆ.

ಯಸ್ ಬ್ಯಾಂಕಿನ ಮೇಲೆ ಅವಲಂಬಿಸಿರುವ ಕಂಪನಿಗಳು ಏಜೆಂಟರ ವ್ಯವಹಾರ ಅಸ್ತವ್ಯಸ್ತವಾಗಬಹುದು ಮತ್ತು ಅವರಿಗೆ ಹೊಸ ಸಾಲದ ಮೂಲಗಳನ್ನು ಹುಡುಕುವುದು ಕಷ್ಟವಾಗಬಹುದು. ಇದರಿಂದಾಗಿ ಅವರು ಪಾವತಿ ಮಾಡಬೇಕಾದವರಿಗೆ ಪಾವತಿ ಮಾಡಲಾಗದೆ ಹೋಗಬಹುದು. ಯಸ್ ಬ್ಯಾಂಕ್ ನಿಂದ ಬಾಂಡುಗಳು ಮತ್ತು ಇತರ ಹಣಕಾಸು ಪರಿಕರಗಳನ್ನು ಪಡೆದವರ ಮೇಲಿನ ಪರಿಣಾಮದಿಂದಾಗಿ ಈ ಮಾರುಕಟ್ಟೆಗಳಲ್ಲಿ ಸಹ ಗಾಬರಿ ಹರಡಬಹುದು. 'ಭಾರತದ ಆರ್ಥಿಕದ ಮೇಲೆ ಅದು ಬೀರಬಹುದಾದ ತೀವ್ರ ದುಷ್ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡು' ಸ್ಟೇಟ್ ಬ್ಯಾಂಕ್ ಈ ಕ್ರಮಗಳನ್ನು ತೆಗೆದುಕೊಳ್ಳಲು ನಿರ್ಧರಿಸಿದೆಯೆಂದು ಅದರ ಅಧ್ಯಕ್ಷರು ತಮ್ಮ ಕ್ರಮಗಳನ್ನು ಸಮರ್ಥಿಸಿಕೊಂಡಿದ್ದಾರೆ. ಆದರೆ ಇಂತಹ ಹತಾಶೆಯ ಕ್ರಮಗಳು ಅಗತ್ಯವಾಗಿರುವುದು ಈ ಮಧ್ಯಪ್ರವೇಶ ಬಹಳ ವಿಳಂಬದ ನಂತರ ಬಂದಿರುವುದರಿಂದ. ಯಸ್ ಬ್ಯಾಂಕಿನಲ್ಲಿ ಆಡಳಿತಾತ್ಮಕ ವೈಫಲ್ಯಗಳು, ಅಕೌಂಟಿನಲ್ಲಿ ಅಕ್ರಮಗಳು, ಬ್ಯಾಲೆನ್ಸ್ ಶೀಟಿನಲ್ಲಿ ದೌರ್ಬಲ್ಯಗಳು ಎರಡು ವರ್ಷಗಳಿಂದ ಕಂಡು ಬಂದಿದ್ದರೂ ರಿಸರ್ವ್ ಬ್ಯಾಂಕ್ ಮಧ್ಯಪ್ರವೇಶ ಮಾಡಿರಲಿಲ್ಲ.

ರಿಸರ್ವ್ ಬ್ಯಾಂಕ್ ಕ್ರಮಗಳು ಫಲ ಕೊಟ್ಟಾವೇ?

ಆದರೆ ಈ ರಿಸರ್ವ್ ಬ್ಯಾಂಕ್ ಕ್ರಮಗಳು ಫಲ ಕೊಟ್ಟಾವೇ? ರಿಸರ್ವ್ ಬ್ಯಾಂಕ್ ನ ಪುನರ್ರಚನಾ ಕ್ರಮಗಳು ಮೂರು ನೀತಿಗಳ ಮೇಲೆ ಆಧಾರಿತವಾಗಿರುವಂತೆ ಕಾಣುತ್ತದೆ. ಮೊದಲನೆಯದಾಗಿ, ಯಸ್ ಬ್ಯಾಂಕಿನಲ್ಲಿ ಸರಕಾರ ನೇರವಾಗಿ ಹೂಡಿಕೆ ಮಾಡುವುದಿಲ್ಲ. ಸರಕಾರ ಹಣಕಾಸು ಪರಿಸ್ಥಿತಿ ನೆಟ್ಟಗಿಲ್ಲದಿರುವುದು ಮತ್ತು ಕಾರ್ಪೊರೇಟುಗಳಿಗೆ ಇತ್ತೀಚಿನ ಭಾರೀ ರಿಯಾಯಿತಿಗಳಿಂದಾಗಿ ಅದು ಇನ್ನಷ್ಟು ಹದಗೆಟ್ಟಿರುವುದು ಇದಕ್ಕೆ ಕಾರಣವಿರಬಹುದು. ಎರಡನೆಯದಾಗಿ ಯಸ್ ಬ್ಯಾಂಕನ್ನು ಸ್ಟೇಟ್ ಬ್ಯಾಂಕ್ ಜತೆ ವಿಲೀನಗೊಳಿಸುವುದಿಲ್ಲ. ಅದು ಸ್ಟೇಟ್ ಬ್ಯಾಂಕಿನ ಅಧೀನ ಬ್ಯಾಂಕ್ ಆಗಿದ್ದರೆ ಸಾಧ್ಯವಾದಾಗ ಮತ್ತು ಅಗತ್ಯಬಿದ್ದರೆ ಸ್ಟೇಟ್ ಬ್ಯಾಂಕ್ ಅದನ್ನು ಮಾರಾಟ ಮಾಡಬಹುದು. ಮೂರನೇಯದಾಗಿ ಸ್ಟೇಟ್ ಬ್ಯಾಂಕ್ ಅಲ್ಲದೆ ಇತರ ಹೂಡಿಕೆದಾರರು ಸಹ ಯಸ್ ಬ್ಯಾಂಕಿನ ಪುನಶ್ಚೇತನಕ್ಕೆ 5 ರಿಂದ 20 ಸಾವಿರ ಕೋಟಿ ರೂ. ಹೂಡಿಕೆ ಮಾಡಬೇಕು. 20 ಇಂತಹ ಹೂಡಿಕೆದಾರರು ಯಸ್ ಬ್ಯಾಂಕಿನ ಪುನಶ್ಚೇತನಕ್ಕಾಗಿ ಮುಂದೆ ಬಂದಿದ್ದಾರೆ ಎಂದು ಸ್ಟೇಟ್ ಬ್ಯಾಂಕ್ ಅಧ್ಯಕ್ಷರು ತಿಳಿಸಿದ್ದಾರೆ.

ಯಾವುದೇ ದಿವಾಳಿಯ ಅಂಚಿಗೆ ಬಂದ ಸಂಸ್ಥೆಯ ಪುನಶ್ಚೇತನ ಕ್ರಮಗಳಲ್ಲಿ ವಿಶ್ವಾಸ ಪ್ರಮುಖ ಪಾತ್ರ ವಹಿಸುತ್ತದೆ. ಇದಿಲ್ಲದೆ ಈ ಕ್ರಮಗಳು ವಿಫಲವಾಗುತ್ತವೆ. 20 ಸಾವಿರ ಕೋಟಿ ರೂ. ಯಸ್ ಬ್ಯಾಂಕಿನ ಪುನಶ್ಚೇತನಕ್ಕೆ ಸಾಕೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಯಸ್ ಬ್ಯಾಂಕಿನ ವ್ಯವಹಾರಗಳು ಕುರಿತು ಲಭ್ಯವಿರುವ ಮಾಹಿತಿ ಪ್ರಕಾರ ಅದು ಇತ್ತೀಚಿನ ವರ್ಷಗಳಲ್ಲಿ ಸಾಲ ನೀಡಿಕೆಯನ್ನು ತೀವ್ರಗೊಳಿಸಿತ್ತು. 2015–16ರಲ್ಲಿ 1 ಲಕ್ಷ ಕೋಟಿ ರೂ. ನಿಂದ, ಸಾಲ ನೀಡಿಕೆ 2017–18 ಕೊನೆಯ ಹೊತ್ತಿಗೆ 2.05 ಲಕ್ಷ ಕೋಟಿ ರೂ.ಗೆ ಹೆಚ್ಚಿತ್ತು. (ಅಂದರೆ ಇಮ್ಮಡಿಯಾಗಿತ್ತು) 2018–19 ಕೊನೆಯ ಹೊತ್ತಿಗೆ 2.45 ಲಕ್ಷ ಕೋಟಿ ರೂ. ಮುಟ್ಟಿತ್ತು. ಇವುಗಳಲ್ಲಿ ಹೆಚ್ಚಿನ ಭಾಗ ಸ್ವತಃ ದಿವಾಳಿಯಾಗಿರುವ ಅಥವಾ ಸಾಲದಲ್ಲಿ ಮುಳುಗಿರುವ ಡಿ.ಎಚ್.ಎಫ್.ಎಲ್, ಅನಿಲ್ ಅಂಬಾನಿ ರಿಲಾಯನ್ಸ್ ಗುಂಪು, ಐ.ಎಲ್. ಅಂಡ್ ಎಫ್.ಎಸ್, ಎಸ್ಸೆಲ್ ಮತ್ತು ವೊಡಾಫೋನ್ ಕಾರ್ಪೊರೆಟ್ ಗುಂಪುಗಳದ್ದು. ಇದರರ್ಥ ಭಾರೀ ಲಾಭದ ಆಶೆಯಲ್ಲಿ ಹೆಚ್ಚಿನ ಮೌಲ್ಯದ ಆದರೆ ಸಾಲಕೂಪದಲ್ಲಿರುವ ಕಂಪನಿಗಳಿಗೆ ಗಮನಾರ್ಹ ಪ್ರಮಾಣದಲ್ಲಿ ಯಸ್ ಬ್ಯಾಂಕ್ ಸಾಲ ಕೊಟ್ಟಿತ್ತು. ಇದರಿಂದಾಗಿ ಯಸ್ ಬ್ಯಾಂಕನ್ನು ಆರೋಗ್ಯಕರಗೊಳಿಸುವ ವೆಚ್ಚ ಮೊದಲ ಅಂದಾಜುಗಳಿಗಿಂತ ಬಹಳಷ್ಟು ಹೆಚ್ಚಿದೆ.

ರಿಸರ್ವ್ ಬ್ಯಾಂಕ್ ಪುನರ್ರಚನಾ ಯೋಜನೆಯಲ್ಲಿ ಸ್ವಲ್ಪ ಮಟ್ಟಿಗೆ ಈ ಸಾಧ್ಯತೆಯನ್ನು ಗಮನಕ್ಕೆ ತೆಗೆದುಕೊಂಡಿದೆ. ಯಸ್ ಬ್ಯಾಂಕ್ ಕೊಟ್ಟ 11 ಸಾವಿರ ಕೋಟಿ ರೂ. ಮೌಲ್ಯದ ಎಟಿ–1 ಬಾಂಡುಗಳನ್ನು ರದ್ದು ಪಡಿಸುವುದಾಗಿ ಘೋಷಿಸಿದೆ. ಎಟಿ–1 ಬಾಂಡುಗಳು ಹೆಚ್ಚಿನ ರಿಸ್ಕ್ ಇರುವುದರಿಂದ ಹೆಚ್ಚಿನ ಲಾಭದ ಸಾಧ್ಯತೆಯನ್ನು ಒಳಗೊಂಡಿರುತ್ತವೆ. ಬ್ಯಾಂಕಿನ ಹೂಡಿಕೆ ಬಂಡವಾಳಕ್ಕೆ ಅಪಾಯ ಬಂದಾಗ ಅದನ್ನು ರದ್ದು ಮಾಡುವ ರಿಸ್ಕನ್ನೂ ಒಳಗೊಂಡಿರುತ್ತದೆ. ಆದರೆ ಹೆಚ್ಚಿನ ಲಾಭದ ಸಾಧ್ಯತೆಯಿಂದಾಗಿ ಎಟಿ–1 ಬಾಂಡುಗಳನ್ನು ಖರೀದಿಸಿದ ಗ್ರಾಹಕರು ಕೋರ್ಟಿಗೆ ಹೋಗಿ ಪುನರ್ರಚನಾ ಯೋಜನೆಗೆ ತೀವ್ರ ತೊಡಕಾಗುವ ಸಾಧ್ಯತೆ ಇದೆ. ಇಂತಹ ಅನಿಶ್ಚಿತತೆ, ಕರಾಳ ಆರ್ಥಿಕ ಪರಿಸ್ಥಿತಿಯಿಂದಾಗಿ ತೀರಾ ಡೋಲಾಯಮಾನವಾಗಿರುವ ಬ್ಯಾಂಕಿನ ಶೇರುಗಳಲ್ಲಿ ಹೂಡಿಕೆದಾರರು ದೊಡ್ಡ ಪ್ರಮಾಣದಲ್ಲಿ ಹೂಡಿಕೆ ಮಾಡುತ್ತಾರೆಂದು ನಿರೀಕ್ಷಿಸುವುದು ತಪ್ಪಾದೀತು.

ಈ ಬಿಕಟ್ಟಿನ ಕಾರಣಗಳ ಕುರಿತು ಸಂಕುಚಿತ ವಿವರಣೆಗಳನ್ನು ಕೊಡಲಾಗುತ್ತಿದೆ. ಡಿ.ಎಚ್.ಎಫ್.ಎಲ್ ಮುಂತಾದ ಕಂಪನಿಗಳಿಗೆ ದೊಡ್ಡ ಸಾಲ ನೀಡಿಕೆಗೆ ಬದಲಾಗಿ, ಯಸ್ ಬ್ಯಾಂಕಿನ ಸಂಸ್ಥಾಪಕರಲ್ಲಿ ಒಬ್ಬರಾದ ರಾಣಾ ಕಪೂರ್ ಅವರ ಕುಟುಂಬದ ಬೋಗಸ್ 'ಶೆಲ್ ಕಂಪನಿ'ಗಳಿಗೆ ಹಣ ಕೊಡಲಾಗಿದೆ ಎಂದು ಆರೋಪಿಸಲಾಗಿದೆ. ಆದರೆ ಈ ಬಿಕ್ಕಟ್ಟನ್ನು ಬರಿಯ ಭ್ರಷ್ಟಾಚಾರದಿಂದ ವಿವರಿಸುವುದು ಸಾಧ್ಯವಿಲ್ಲ. ಈ ಬಿಕ್ಕಟ್ಟಿಗೂ ಸರಕಾರದ ಆರ್ಥಿಕ ನೀತಿಗೂ ನೇರ ಸಂಬಂಧವಿದೆ. ಈಗಿನ ಆರ್ಥಿಕ ಬಿಕ್ಕಟ್ಟಿನಿಂದ ಹೊರಬರಲು ಬೆಳವಣಿಗೆಯಾಗಬೇಕು. ಇದಕ್ಕಾಗಿ ಹೂಡಿಕೆಗೆ ಲಭ್ಯವಾಗುವಂತೆ ಸಾಲದ ಮಹಾಪೂರ ಹರಿಸಬೇಕು ಎಂಬುದು ಸರಕಾರದ ಧೋರಣೆ. ಇದಕ್ಕಾಗಿ ಹಣಕಾಸು ಆರೋಗ್ಯ, ವ್ಯವಹಾರದ ಸಫಲತೆ ಮತ್ತಿತರ ಪರಿಸ್ಥಿತಿಗಳ ಯಾವುದೇ ಪರಿವೆಯಿಲ್ಲದೆ ಕಾರ್ಪೊರೇಟುಗಳಿಗೆ ಸಾಲ ಕೊಡುವುದಕ್ಕೆ ಉತ್ತೇಜನ ಕೊಡಲಾಗಿದೆ. ಇದಕ್ಕಾಗಿ ಬ್ಯಾಂಕುಗಳು ತಮ್ಮ ಎಂದಿನ ಎಚ್ಚರಿಕೆಯ ವಿಶ್ಲೇಷಣೆಯ ನಂತರವೇ ಸಾಲ ನೀಡುವ ಪರಿಪಾಠವನ್ನೂ ಗಾಳಿಗೆ ತೂರಲು ಉತ್ತೇಜನ ಕೊಡಲಾಗಿದೆ. ಇದು ಹೂಡಿಕೆಯ ಮಟ್ಟವನ್ನು ಎತ್ತರಿಸಿದೆ. ಆದರೆ ಹಲವು ಹೂಡಿಕೆಗಳನ್ನು ಆರ್ಥಿಕವಾಗಿ ಲಾಭದಾಯಕವಲ್ಲದ ಪ್ರಾಜೆಕ್ಟುಗಳಲ್ಲಿ ಮಾಡಲಾಗಿದೆ. ಲಾಭ ಮಾತ್ರವಲ್ಲ ಅಸಲು ಸಹ ಮುಳುಗಿ ಹೋಗುವ ಸಾಧ್ಯತೆಯಿರುವ ಪ್ರಾಜೆಕ್ಟುಗಳಲ್ಲಿನ ಹೂಡಿಕೆ ತೀವ್ರ ಅಪಾಯದಲ್ಲಿವೆ. ಇಂತಹ ಸರಕಾರ ಮತ್ತು ಬ್ಯಾಂಕುಗಳ ಧೋರಣೆ, ಭ್ರಷ್ಟರಾಗಿರುವ ದುಷ್ಟ ಬ್ಯಾಂಕರುಗಳು ಮತ್ತು ಸಾಲಗಾರರಿಗೆ ಹಣ ಲೂಟಿ ಹೊಡೆಯಲು ಅವಕಾಶ ಕಲ್ಪಿಸಿಕೊಟ್ಟಿದೆ. ಇದರಿಂದಾಗಿ ದೊಡ್ಡ ಪ್ರಮಾಣದ ಸುಸ್ತಿ ಸಾಲ ಸೃಷ್ಟಿಯಾಗಿದ್ದು ಅದನ್ನು ಹೊಂದಿರುವ ಬ್ಯಾಂಕುಗಳಿಗೆ ಉರುಳಾಗಿ ಬಿಟ್ಟಿದೆ. ಈಗ ಯಸ್ ಬ್ಯಾಂಕಿನಲ್ಲಿ ಸ್ಟೇಟ್ ಬ್ಯಾಂಕ್ ಹೂಡಿಕೆ ಮಾಡುತ್ತಿದೆ. ಆದರೆ ರಿಸರ್ವ್ ಬ್ಯಾಂಕ್ ಪುನರ್ರಚನಾ ಯೋಜನೆ ಅಂದುಕೊಂಡಂತೆ ಕೆಲಸ ಮಾಡದಿದ್ದರೆ (ಮೇಲೆ ವಿವರಿಸಿದಂತೆ ಅಂತಹ ದಟ್ಟ ಸಾಧ್ಯತೆಗಳು ಇವೆ) ಇದರ ದುಷ್ಪರಿಣಾಮಗಳನ್ನು ಸ್ಟೇಟ್ ಬ್ಯಾಂಕಿಗೆ ಸಂಬಂಧಿಸಿದ ಎಲ್ಲರೂ (ಠೇವಣಿದಾರರು, ಸರಕಾರ ಮತ್ತು ತೆರಿಗೆದಾರ ಜನತೆ) ಎದುರಿಸಬೇಕಾಗುತ್ತದೆ.



ಯಸ್

ಕೆಟ್ಟ ಸಾಲ




ಯಸ್

ಸಾರ್ವಜನಿಕ ನಿಧಿಯಿಂದ ಬಚಾವ್

ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ

ವ್ಯಂಗ್ಯಚಿತ್ರ: ಅಲೋಕ್



ಅಧ್ಯಕ್ಷ ಪಿನೆರಾ ರಾಜೀನಾಮೆಗೆ ಒತ್ತಾಯ

ಚಿಲಿ : ಪ್ರತಿಭಟನೆಯ ಇನ್ನೊಂದು ಅಲೆ

ಕಳೆದ ಅಕ್ಟೋಬರ್ ನಿಂದ ಅಧ್ಯಕ್ಷ ಪಿನೆರಾ ಆಡಳಿತದ ವಿರುದ್ಧ ನಡೆಯುತ್ತಿರುವ ತೀವ್ರ ಪ್ರತಿಭಟನೆಗಳ ಇನ್ನೊಂದು ಅಲೆ ಚಿಲಿಯನ್ನು ಕಳೆದ ವಾರ ಅಪ್ಪಳಿಸಿತು. ಇವು ಮಾರ್ಚ್ 8 ರಂದು ವಿಶ್ವ ಮಹಿಳಾ ದಿನದಂದು ಆರಂಭವಾಗಿ ಕುಖ್ಯಾತ ಸರ್ವಾಧಿಕಾರಿ ಪಿನೊಶೆಯ ಆಡಳಿತ ಕೊನೆಯಾದ ದಿನದ 30ನೇ ವಾರ್ಷಿಕೋತ್ಸವವಾದ ಮಾರ್ಚ್ 11 ವರೆಗೆ ಹಲವು ರೂಪಗಳಲ್ಲಿ ಮುಂದುವರೆದವು. ಕಳೆದ ಅಕ್ಟೋಬರ್ ನಲ್ಲಿ ಪ್ರತಿಭಟನೆಗಳು ನಡೆದು ಅಧ್ಯಕ್ಷ ಪಿನೆರಾ ಅವರ ರಾಜೀನಾಮೆಗೆ ತೀವ್ರ ಒತ್ತಡ ಬಂದಾಗ ಸರ್ವಾಧಿಕಾರಿ ಪಿನೊಶೆ ರೂಪಿಸಿದ್ದ ಸಂವಿಧಾನವನ್ನು ಬದಲಾಯಿಸಲು ಜನಮತಸಂಗ್ರಹ ಮಾಡುವುದಾಗಿ ಭರವಸೆ ಕೊಡಲಾಗಿತ್ತು. ಅದರಿಂದ ತೃಪ್ತರಾಗಿ ಜನ ಸುಮ್ಮನಿರುತ್ತಾರೆ ಎಂಬ ಸರಕಾರದ ನಿರೀಕ್ಷೆ ಸುಳ್ಳಾಗಿದೆ. ಜನ–ವಿರೋಧಿ ನವ–ಉದಾರವಾದಿ ನೀತಿಗಳು ಮತ್ತು ಸರ್ವಾಧಿಕಾರ ಇವೆರಡನ್ನೂ ದೃಢವಾಗಿ ವಿರೋಧಿಸುತ್ತಿರುವ ಜನತೆ, ಇವೆರಡನ್ನೂ ಎರಡು ವರ್ಷಗಳಲ್ಲಿತಮ್ಮ ಆಡಳಿತದಲ್ಲಿ ಗಟ್ಟಿಗೊಳಿಸುತ್ತಿರುವ ಅಧ್ಯಕ್ಷ ಪಿನೆರಾ ಅವರ ರಾಜೀನಾಮೆಗೆ ಆಗ್ರಹಿಸುತ್ತಿದ್ದಾರೆ.



ಮಾರ್ಚ್ 8 ರಂದು ಮಹಿಳಾ ದಿನದಂದು ನಡೆದ ಭಾರೀ ಪ್ರತಿಭಟನೆಗಳಿಂದಈ ಇನ್ನೊಂದು ಅಲೆ ಆರಂಭವಾಯಿತು. ಮಹಿಳಾ ಚಳುವಳಿಗಳ ಒಕ್ಕೂಟ ಎರಡು ದಿನಗಳ ಪ್ರತಿಭಟನೆಗೆ ಕರೆ ಕೊಟ್ಟಿತ್ತು. ಮಾರ್ಚ್ 8ರಂದು ರಾಜಧಾನಿ ಮತ್ತು ದೇಶದಾದ್ಯಂತ ಪ್ರತಿಭಟನಾ ಪ್ರದರ್ಶನಗಳಿಗೆ ಮತ್ತು ಮಾರ್ಚ್ 9 ರಂದು ಸಾರ್ವತ್ರಿಕ ಮಹಿಳಾ ಮುಷ್ಕರಕ್ಕೆ ಕರೆ ನೀಡಿತ್ತು. ಮಾರ್ಚ್ 8ರ ಪ್ರತಿಭಟನೆಗಳಲ್ಲಿ ಸುಮಾರು 10 ಲಕ್ಷಕ್ಕೂ ಮತ್ತು ಮಾರ್ಚ್ 9ರಂದು ಮಹಿಳಾ ಮುಷ್ಕರದಲ್ಲಿ 20 ಲಕ್ಷಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದರು ಎಂದು ವರದಿಯಾಗಿದೆ. ಸರಕಾರ ಇವುಗಳ ವಿರುದ್ಧ ಕಠಿಣ ಪ್ರತಿಬಂಧಕ ಮತ್ತು ದಮನಕಾರಿ ಕ್ರಮಗಳನ್ನು ಕೈಗೊಂಡಿದ್ದರೂ ಇಷ್ಟು ಭಾರೀ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದರು. ಶಾಂತಿಯುತ ಮಹಿಳಾ ಪ್ರತಿಭಟನಾಕಾರರ ಕಣ್ಣುಗಳತ್ತ ನೇರವಾಗಿ ಮಿಲಿಟರಿ ಪೋಲೀಸರು ಮೆಣಸಿನ ಗ್ಯಾಸ್ ಎಸೆಯುತ್ತಿದ್ದರು ಎಂದು ವಿದೇಶೀ ಪತ್ರಕರ್ತರು ಹಾಗು ಮಾನವ ಹಕ್ಕು ಕಾರ್ಯಕರ್ತ ವೀಕ್ಷಕರು ಹೇಳಿದ್ದಾರೆ. ಸರಕಾರದ ಈ ದಮನಕಾರಿ ಧೋರಣೆ ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಮಹಿಳೆಯರ ವಿರುದ್ಧ ಹೆಚ್ಚುತ್ತಿರುವ ಹಿಂಸಾಚಾರ, ಕೊಲೆ, ಅಸಮಾನತೆ ಮತ್ತು ಗರ್ಭಪಾತ ನಿಷೇಧ ಕಾನೂನುಗಳ ವಿರುದ್ಧ ಲ್ಯಾಟಿನ್ ಅಮೆರಿಕದಾದ್ಯಂತ ಈ ಮಹಿಳಾ ದಿನದಂದು ಲಕ್ಷಾಂತರ ಮಹಿಳೆಯರು ಭಾಗವಹಿಸಿದ ಭಾರೀ ಪ್ರತಿಭಟನೆಗಳು ನಡೆದಿವೆ. ಕಳೆದ ವರ್ಷ ಜಗತ್ತಿನಾದ್ಯಂತ 10 ಸಾವಿರ ಮಹಿಳೆಯರು ಕೊಲೆಯಾಗಿದ್ದು ಅದರಲ್ಲಿ ಮೂರನೇ ಒಂದು ಭಾಗಕ್ಕಿಂತ ಹೆಚ್ಚು (3500) ಲ್ಯಾಟಿನ್ ಅಮೆರಿಕದಲ್ಲಿ ನಡೆದಿವೆ. ಮೆಕ್ಸಿಕೊ ದಲ್ಲಿ ಕಳೆದ 5 ವರ್ಷಗಳಲ್ಲಿ ಮಹಿಳೆಯರ ಕೊಲೆಗಳು ಇಮ್ಮಡಿಯಾಗಿವೆ. ಲ್ಯಾಟಿನ್ ಅಮೆರಿಕದ ಹೆಚ್ಚಿನ ದೇಶಗಳಲ್ಲಿ ಗರ್ಭಪಾತದ ಮೇಲೆ ವಿವಿಧ ರೀತಿಯ ನಿರ್ಬಂಧ–ನಿಷೇಧಗಳಿದ್ದು ಇದರಿಂದಲೂ ಮಹಿಳೆಯರ ಸಾವು–ನೋವು ಸಂಕಷ್ಟಗಳು ಹೆಚ್ಚಿವೆ. ಕೆಲಸದ ಸ್ಥಳದಲ್ಲೂ ಮಹಿಳೆಯರು ತೀವ್ರ ಕಿರುಕುಳ, ತಾರತಮ್ಯ, ಅಸಮಾನತೆ ಎದುರಿಸುತ್ತಿದ್ದಾರೆ. ಇಂತಹ ಪರಿಸ್ಥಿತಿಯ ವಿರುದ್ಧ ಲ್ಯಾಟಿನ್ ಅಮೆರಿಕದಾದ್ಯಂತ ಮಹಿಳೆಯರ ಪ್ರತಿಭಟನೆಯಲ್ಲಿ ಚಿಲಿಯ ಮಹಿಳೆಯರ ಪ್ರತಿಭಟನೆಯೇ ಅತಿ ದೊಡ್ಡದಾಗಿತ್ತು. ಮಹಿಳೆಯರ ನಿರ್ದಿಷ್ಟ ಹಕ್ಕೊತ್ತಾಯಗಳ ಜತೆಗೆ, ಇವೆಲ್ಲವನ್ನೂ ಹೆಚ್ಚಿಸುತ್ತಿರುವ ನವ–ಉದಾರವಾದಿ ನೀತಿಗಳ ವಿರುದ್ಧ ಚಳುವಳಿಯ ಭಾಗವಾಗಿ ಅಧ್ಯಕ್ಷ ಪಿನೆರಾ ಅವರ ರಾಜೀನಾಮೆಗೂಚಿಲಿಯ ಮಹಿಳೆಯರು ಆಗ್ರಹಿಸಿದರು. ಹೊಸ ಸಂವಿಧಾನ ರೂಪಿಸುವಲ್ಲಿ ಮಹಿಳಾ ಸಂಘಟನೆಗಳನ್ನು ಒಳಗೊಳ್ಳಬೇಕೆಂದು ಒತ್ತಾಯಿಸಿದರು.

ಕುಖ್ಯಾತ ಸರ್ವಾಧಿಕಾರಿ ಪಿನೊಶೆಯ ಆಡಳಿತ ಕೊನೆಯಾದ ದಿನದ 30ನೇ ವಾರ್ಷಿಕೋತ್ಸವವಾದ ಮಾರ್ಚ್ 11ರಂದು ಸಹ ಭಾರೀ ಪ್ರತಿಭಟನೆಗಳು ನಡೆದವು. ಜನತೆಯ ಹಕ್ಕೊತ್ತಾಯಗಳನ್ನು ಮನ್ನಿಸದ ಮತ್ತು ಅದು ದನಿಯೆತ್ತಿದಾಗ ದಮನಚಕ್ರ ಹರಿಯಬಿಡುವ ಅಧ್ಯಕ್ಷ ಪಿನೆರಾರಾಜೀನಾಮೆಗೆ ಆಗ್ರಹದ ಕೂಗು ಇನ್ನಷ್ಟು ಗಟ್ಟಿಯಾಗಿ ಕೇಳಬಂತು. ಈ ಸುತ್ತಿನ ಪ್ರತಿಭಟನೆಯಲ್ಲಿ ವಿದ್ಯಾರ್ಥಿಗಳು ಪ್ರಮುಖ ಪಾತ್ರ ವಹಿಸಿದ್ದರು. ವಿದ್ಯಾರ್ಥಿಗಳ ಭಾರಿ ಪ್ರತಿಭಟನಾ ಪ್ರದರ್ಶನಗಳ ವಿರುದ್ಧ ಸಹ ಸರಕಾರ ಮಿಲಿಟರಿ ಪೋಲಿಸ್ ದಮನಚಕ್ರ ಬಳಸಲು ಮುಂದಾಯಿತು. ಹದಿಹರೆಯದ ವಿದ್ಯಾರ್ಥಿಗಳ ಮೇಲೆ ದಾಳಿ ಮಾಡಿದೆ. ಬಂಧನಗಳನ್ನು ಮಾಡಿದೆ. ವಿದ್ಯಾರ್ಥಿ ಸಂಘಗಳು ಶಿಕ್ಷಣ ಸಂಸ್ಥೆಗಳನ್ನು 'ವಶಪಡಿಸಿಕೊಳ್ಳಲು' ಕರೆ ಕೊಟ್ಟಿವೆ. ದೇಶದ 9 ಪ್ರಮುಖ ಶಿಕ್ಷಣ ಶಿಕ್ಷಣ ಸಂಸ್ಥೆಗಳನ್ನು ವಿದ್ಯಾರ್ಥಿಗಳು 'ವಶಪಡಿಸಿ'ಕೊಂಡಿದ್ದಾರೆ. ಅವುಗಳನ್ನು ಬಿಡಿಸಲು ಪೋಲಿಸರು ಹೆಣಗುತ್ತಿದ್ದಾರೆ ಎಂದು ವರದಿಯಾಗಿದೆ.

ಹೀಗೆ ಕಳೆದ ಅಕ್ಟೋಬರ್ ನಿಂದ ಅಧ್ಯಕ್ಷ ಪಿನೆರಾ ಆಡಳಿತದ ವಿರುದ್ಧ ನಡೆಯುತ್ತಿರುವ ತೀವ್ರ ಸಾಮಾಜಿಕ ಪ್ರತಿಭಟನೆಗಳ ಇನ್ನೊಂದು ಅಲೆ ಚಿಲಿಯನ್ನು ಅಪ್ಪಳಿಸಿದೆ. ಮಿಲಿಟರಿ ಪೋಲೀಸರ ದಮನದಿಂದ ಈ ಸಾಮಾಜಿಕ ಪ್ರತಿಭಟನೆಗಳನ್ನು ಹತ್ತಿಕ್ಕುವ ಪ್ರಯತ್ನದಲ್ಲಿ ಸುಮಾರು 4 ಸಾವಿರ ಸಾವು–ನೋವುಗಳಾದರೂ, ಅವನ್ನು ದಮನಿಸಲು ಅಧ್ಯಕ್ಷ ಪಿನೆರಾ ಆಡಳಿತಕ್ಕೆ ಸಾಧ್ಯವಾಗುತ್ತಿಲ್ಲ.

ಕಳೆದ ದಶಕದಲ್ಲಿ ಹೆಚ್ಚು ಕಡಿಮೆ ಇಡೀ ಲ್ಯಾಟಿನ್ ಅಮೆರಿಕದಲ್ಲಿ ಎಡ–ಪ್ರಗತಿಪರ ಸರಕಾರಗಳು ಅಧಿಕಾರಕ್ಕೆ ಬಂದು ನವ–ಉದಾರವಾದಿ ನೀತಿಗಳನ್ನು ಬದಲಾಯಿಸಿ ಜನ–ಪರ ನೀತಿಗಳನ್ನು ಜಾರಿಗೆ ತರಲು ಆರಂಭಿಸಿದ್ದವು. ಇದನ್ನು ಸಹಿಸದ ಅಮೆರಿಕ ಈ ಸರಕಾರಗಳಿಗೆ ಆರ್ಥಿಕ ಅಸಹಕಾರ ದಿಗ್ಬಂಧನಗಳ ಮೂಲಕ ತೊಡಕುಗಳನ್ನು ಸೃಷ್ಟಿಸಿದ್ದವು. ನೇರ ಅಥವಾ ಪರೋಕ್ಷ ರಾಜಕೀಯ ಮಿಲಿಟರಿ ಮಧ್ಯಪ್ರವೇಶ ಮಾಡಿದ್ದವು. ಆ ಮೂಲಕ ಕೆಲವು ದೇಶಗಳಲ್ಲಿ (ಬ್ರೆಜಿಲ್, ಬೊಲಿವಿಯ, ಚಿಲಿ ಇತ್ಯಾದಿ) ಅದರ ಬಾಲಬಡುಕ ಬಲಪಂಥೀಯ ಸರಕಾರಗಳನ್ನು ಅಧಿಕಾರಕ್ಕೆ ತಂದಿದ್ದವು. ಆದರೆ ಈ ಸರಕಾರಗಳ ವಿರುದ್ಧ ಜನತೆಯ ಆಕ್ರೋಶ ಸಿಡಿದಿದ್ದು, ಅವುಗಳನ್ನು ಬದಲಾಯಿಸಲು ಮುಂದಿನ ಚುನಾವಣೆಯವರೆಗೆ ಕಾಯಲು ತಾವು ಸಿದ್ಧರಿಲ್ಲ ಎಂದು ಜನತೆ ತೋರ್ಪಡಿಸುತ್ತಿದ್ದಾರೆ. ಚಿಲಿಯ ಈ ಬೆಳವಣಿಗೆಗಳು ಈ ನಿಟ್ಟಿನಲ್ಲಿ ಗಮನಾರ್ಹವಾದದ್ದು. ನವ–ಉದಾರವಾದದ ವಿರುದ್ಧ ಇಡೀ ಲ್ಯಾಟಿನ್ ಅಮೆರಿಕದಲ್ಲಿ ಎದ್ದಿರುವ ಆಕ್ರೋಶ ಯಾವ ರೂಪ ತೆಗೆದುಕೊಳ್ಳುತ್ತದೆ ಎಂಬುದಕ್ಕೆ ಇವು ದಿಕ್ಸೂಚಿಯಾಗಲಿವೆ.

ಜಗದ ಸುತ್ತ

ವಸಂತರಾಜ ಎನ್.ಕೆ.

ಡೆಮೊಕ್ರಾಟಿಕ್ ಚುನಾವಣೆ : ಸ್ಯಾಂಡರ್ಸ್ ಹೋರಾಟ ಮುಂದುವರೆಯುವುದು

ಡೆಮೊಕ್ರಾಟಿಕ್ ಅಧ್ಯಕ್ಷೀಯ ಅಭ್ಯರ್ಥಿಯ ಆಯ್ಕೆಗಾಗಿ ನಡೆಯುವ ಪ್ರಾಥಮಿಕ ಚುನಾವಣೆಗಳಲ್ಲಿ ಈ ವರೆಗೆ ಮೊದಲ ಸ್ಥಾನದಲ್ಲಿದ್ದ ಎಡಪಂಥೀಯ ಅಭ್ಯರ್ಥಿ ಬರ್ನಿ ಸ್ಯಾಂಡರ್ಸ್ ಅವರಿಗೆ, ಇತ್ತೀಚಿನ ಎರಡು ಸುತ್ತುಗಳಲ್ಲಿ ಹಿನ್ನಡೆಯಾಗಿ ಎರಡನೇ ಸ್ಥಾನಕ್ಕೆ ಸರಿದಿದ್ದಾರೆ. ಇತ್ತೀಚಿನ ಎರಡು ಸುತ್ತುಗಳಲ್ಲಿಪ್ರಾಥಮಿಕ ಚುನಾವಣೆ ನಡೆದ 6 ರಾಜ್ಯಗಳಲ್ಲಿ 4 (ಮಿಶಿಗನ್, ಮಿಸ್ಸೂರಿ, ಮಿಸ್ಸಿಸಿಪಿ, ಇದಾಹೊ) ರಾಜ್ಯಗಳನ್ನು ಮಾಜಿ ಉಪಾಧ್ಯಕ್ಷ ಜೊ ಬಿಡೆನ್ ಗೆದ್ದುಕೊಂಡಿದ್ದಾರೆ. ಒಂದು ರಾಜ್ಯವನ್ನು (ಉತ್ತರ ಡಕೋಟಾ) ಮಾತ್ರ ಸ್ಯಾಂಡರ್ಸ್ ಗೆದ್ದಿದ್ದಾರೆ. ವಾಶಿಂಗ್ಟನ್ ರಾಜ್ಯದ ಫಲಿತಾಂಶಗಳು ಇನ್ನೂ ಬರಲಿದ್ದು ಇಬ್ಬರೂ ನಿಕಟ ಸ್ಪರ್ಧೆಯಲ್ಲಿದ್ದಾರೆ. ಬಿಡೆನ್ ಈ ವರೆಗೆ 854 ಪ್ರತಿನಿಧಿಗಳ ಸ್ಥಾನಗಳನ್ನು ಗೆದ್ದಿದ್ದು, ಸ್ಯಾಂಡರ್ಸ್ 686 ಸ್ಥಾನಗಳನ್ನು ಗೆದ್ದಿದ್ದಾರೆ. ಇನ್ನೂ ಹಲವು ರಾಜ್ಯಗಳಿಂದ 2000 ಕ್ಕೂ ಹೆಚ್ಚು ಪ್ರತಿನಿಧಿಗಳ ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು 168 ಸ್ಥಾನಗಳ ವ್ಯತ್ಯಾಸ ಗಮನಿಸಿದರೆ ಸ್ಯಾಂಡರ್ಸ್ ಹಿನ್ನಡೆ ಶಾಶ್ವತ ಎಂದೇನೂ ಹೇಳುವಂತಿಲ್ಲ. (ಡೆಮೊಕ್ರಾಟಿಕ್ ಅಧ್ಯಕ್ಷೀಯ ಅಭ್ಯರ್ಥಿಯ ಆಯ್ಕೆ ಸಹ ಪರೋಕ್ಷ ಚುನಾವಣೆಯಾಗಿದ್ದು, ಪ್ರತಿರಾಜ್ಯದ ಮತದಾರರ ಆಯ್ಕೆಯ ಆಧಾರದ ಮೇಲೆ ಪ್ರತಿನಿಧಿಗಳನ್ನು ಚುನಾಯಿಸಲಾಗುತ್ತದೆ. ಈ ಪ್ರತಿನಿಧಿಗಳು ಅಧ್ಯಕ್ಷೀಯ ಅಭ್ಯರ್ಥಿಯ ಆಯ್ಕೆಯನ್ನು ಮಾಡುತ್ತಾರೆ.) ಆಗಲೇ ಹಲವು ಆಶ್ಚರ್ಯಕರ ತಿರುವುಗಳನ್ನು ಕಂಡಿರುವ ಈ ಪ್ರಾಥಮಿಕ ಚುನಾವಣೆಯಲ್ಲಿ ಏನನ್ನೂ ಖಚಿತವಾಗಿ ಹೇಳುವಂತಿಲ್ಲ. ಕರಿಯರು, ಬಿಳಿಯ ಕಾರ್ಮಿಕರು, ಮಧ್ಯಮ ವರ್ಗದ ಉದಾರವಾದಿಗಳು, ಹಿರಿಯರಲ್ಲಿ ಬಹುಸಂಖ್ಯಾತರು ಬಿಡೆನ್ ಅವರನ್ನು ಬೆಂಬಲಿಸುತ್ತಿರುವಂತೆ ಕಾಣುತ್ತಿದೆ. ಎಲ್ಲ ಸಮುದಾಯಗಳ ವಿದ್ಯಾರ್ಥಿ–ಯುವಜನರು, ಲ್ಯಾಟಿನೊಗಳು, ಎಡಪಂಥೀಯರು ಸ್ಯಾಂಡರ್ಸ್ ನ್ನು ಬೆಂಬಲಿಸುವಂತೆ ಕಾಣುತ್ತಿದೆ. ಸ್ಯಾಂಡರ್ಸ್ ತಮ್ಮ ಬೆಂಬಲಿಗರ ವಲಯ ವಿಸ್ತರಿಸಿಕೊಳ್ಳದಿದ್ದರೆ, ಮತ್ತು ಇದೇ ಟ್ರೆಂಡ್ ಮುಂದುವರೆದರೆ ಸ್ಯಾಂಡರ್ಸ್ ಮೊದಲ ಸ್ಥಾನ ಗಳಿಸುವುದು ಕಷ್ಟಸಾಧ್ಯ ಎಂದು ಹೇಳಲಾಗುತ್ತಿದೆ.



ಹಲವು ಡೆಮೊಕ್ರಾಟಿಕ್ ಪಕ್ಷದ ನಾಯಕರು ಮತ್ತು ಮಾಧ್ಯಮಗಳು ಸ್ಯಾಂಡರ್ಸ್ ಸೋಲು ಖಚಿತ, ಆದ್ದರಿಂದ ಅವರು ಹಿಂದೆ ಸರಿದು ಟ್ರಂಪ್ ವಿರುದ್ಧ ಬಿಡೆನ್ ಕೈ ಬಲಪಡಿಸಬೇಕು ಎಂದು ಹೇಳುತ್ತಿದ್ದಾರೆ. ಆದರೆ ಎಡ ಜನಪರ ಶಕ್ತಿಗಳು ಸ್ಯಾಂಡರ್ಸ್ಅವರು ತಮ್ಮ ಸ್ಪರ್ಧೆ ಮುಂದುವರೆಸಬೇಕು ಎಂದು ಬಯಸುತ್ತಾರೆ. ಏಕೆಂದರೆ ಇದು ಬರಿಯ ಅಭ್ಯರ್ಥಿಯ ಪ್ರಶ್ನೆಯಲ್ಲ. ಡೆಮೊಕ್ರಾಟಿಕ್ ಅಭ್ಯರ್ಥಿ ಯಾವ ಪ್ರಣಾಳಿಕೆಯೊಂದಿಗೆ ಜನರ ಹತ್ತಿರ ಹೋಗಿ ಟ್ರಂಪ್ ನ್ನು ಎದುರಿಸುತ್ತಾರೆ ಎಂಬುದು ಪ್ರಮುಖವಾಗುತ್ತದೆ. ಬಿಡೆನ್ ರಂತಹ ಡೆಮೊಕ್ರಾಟಿಕ್ ಪಕ್ಷದ ಸ್ಥಾಪಿತ ನಾಯಕತ್ವದ ನೀತಿಗಳಿಗೂ, ಟ್ರಂಪ್ ನೀತಿಗಳಿಗೂ ಮೂಲಭೂತ ವ್ಯತ್ಯಾಸವೇನಿಲ್ಲ. ಆದರೆ ಸ್ಯಾಂಡರ್ಸ್ ಪತಿಪಾದಿಸುತ್ತಿರುವ ಪ್ರಣಾಳಿಕೆಯ ಅಂಶಗಳು ಜನಪ್ರಿಯವಾಗಿವೆ. ಬಿಡೆನ್ ಬೆಂಬಲಿಸಿದವರು ಸಹ ಈ ಪ್ರಣಾಳಿಕೆಯ ಪ್ರಮುಖ ಅಂಶಗಳನ್ನು (ಇವನ್ನು ಬಿಡೆನ್ ಒಪ್ಪಿಲ್ಲದಿದ್ದರೂ) ಬೆಂಬಲಿಸುತ್ತಾರೆ ಎಂದು ಸಮೀಕ್ಷೆಗಳಿಂದ ತಿಳಿದು ಬಂದಿದೆ.

2016ರ ಡೆಮೊಕ್ರಾಟಿಕ್ ಅಭ್ಯರ್ಥಿ ಚುನಾವಣೆಯ ಉದಾಹರಣೆ ಸಹ ನಮ್ಮ ಮುಂದಿದೆ. ಸ್ಯಾಂಡರ್ಸ್ ಅಭ್ಯರ್ಥಿಯಾಗಿದ್ದರಿಂದ ಅವರು ತಮ್ಮ ಪ್ರಣಾಳಿಕೆಯ ಕುರಿತು ಬಿರುಸಿನ ಪ್ರಚಾರ ಮಾಡಿದ್ದರಿಂದಾಗಿ ಅವರು ಗೆಲ್ಲದಿದ್ದರೂ ಡೆಮೊಕ್ರಾಟಿಕ್ ಪಕ್ಷ ಅಧ್ಯಕ್ಷೀಯ ಚುನಾವಣೆಗೆ ಹಿಂದೆಂದಿಗಿಂತಲೂ ಪ್ರಗತಿಪರ ಪ್ರಣಾಳಿಕೆಯೊಂದಿಗೆ ಹೋಯಿತು. 15 ಡಾಲರುಗಳ ಕನಿಷ್ಠ ಕೂಲಿ, ಸಾಲ–ಮುಕ್ತ ➚

ಕಾಲುವೆಗೆ ನೀರು ಹರಿಸಲು ಅನುವು ಮಾಡದಿದ್ದರೆ ರೈಲು ತಡೆ ಚಳುವಳಿ ರೈತ ಸಂಘಟನೆ ಎಚ್ಚರಿಕೆ

ಕೂಡಗಿ ಬಳಿ ಹಾದು ಹೋಗಿರುವ ಮುಳವಾಡ ಏತ ನೀರಾವರಿ ಕಾಲುವೆಗೆ ನೀರು ಹರಿಸಿ ಕೆರೆ ಹಾಗೂ ಬಾಂದಾರಗಳನ್ನು ತುಂಬಿಸುವುದು ಹಾಗೂ ಕೂಡಿಗಿ ಬಳಿ ಹಾಯ್ದು ಹೋಗಿರುವ ಕಾಲುವೆಯಲ್ಲಿ ರೈಲ್ವೆ ಬ್ರಿಜ್ ಕೆಳಗಡೆ ಬಾಕ್ಸ್ ಪುಸ್ಸಿಂಗ್ ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿದ್ದು, ಹಾಗೂ ಮಣ್ಣುಗುಂಪೆಯನ್ನು ತಗೆಯಲು ರೇಲ್ವೆ ಇಲಾಖೆ ವಿಳಂಬ ನೀತಿಯನ್ನು ಅನುಸರಿಸುತ್ತಿದ್ದು, ಕಾಮಗಾರಿನ್ನು ಸ್ಥಗಿತಗೊಳಿಸಿ ಕಾಲುವೆಗೆ ನೀರು ಹರಿಸಲು ರೇಲ್ವೆ ಇಲಾಖೆ ಅನುವು ಮಾಡಿಕೊಡಬೇಕು. ಇಲ್ಲದಿದ್ದರೆ ಕೂಡಗಿ ಬಳಿ ನಡೆದಿರುವ ಬಾಕ್ಸ್ ಪುಸ್ಸಿಂಗ್ ಕಾಮಗಾರಿ ಬಳಿ ರೈಲ್ವೆ ಬ್ರಿಜ್ಡ್ ಮೇಲೆ ಅಹೋರಾತ್ರಿ ಧರಣಿ ಪ್ರಾರಂಭಿಸಿ ರೈಲು ಸಂಚಾರ ಸ್ಥಗಿತಗೊಳಿಸಬೇಕಾಗುತ್ತದೆ ಎಂದು ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಕಾರ್ಯದರ್ಶಿ ಅರವಿಂದ ಕುಲಕರ್ಣಿ ರೇಲ್ವೆ ಇಲಾಖೆಗೆ ಎಚ್ಚರಿಕೆ ನೀಡಿದರು.

ಅಖಂಡ ಕರ್ನಾಟಕ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘ ಜಂಟಿಯಾಗಿ ಪ್ರತಿಭಟನೆ ನಡೆಸಿ ಹೆಚ್ಚುವರಿ ಜಿಲ್ಲಾಧಿಕಾರಿ ಡಾ. ಔದ್ರಾಪ ಅವರಿಗೆ ಮನವಿ ಸಲ್ಲಿಸಿದರು.

ಅದಕ್ಕೂ ಮುಂಚೆ ಎರಡು ಸಂಘಟನೆಯ ನೂರಾರು ರೈತರು ಅಂಬೇಡ್ಕರ್ ವೃತ್ತದಲ್ಲಿ ಜಮಾಯಿಸಿ ಜಾತಾ ಮೂಲಕ ಜಿಲ್ಲಾಧಿಕಾರಿ ಕಚೇರಿ ತಲುಪಿದರು.

ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಹಾಗೂ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಭೀಮಶಿ ಕಲಾದಗಿ ಮಾತನಾಡಿ, ಕೂಡಗಿ ಬಳಿ ಹಾಯ್ದು ಹೋಗಿರುವ ಮುಳವಾಡ ಏತ ನೀರಾವರಿ ಕಾಲುವೆಯಲ್ಲಿ ರೇಲ್ವೆ ಬ್ರಿಜ್ಕೆಳಗಡೆ ಭಾಕ್ಸುಸ್ಸಿಂಗ್ಕಾಮಗಾರಿ ನಡೆಯುತ್ತಿದ್ದು, ಮಂದಗತಿಯಲ್ಲಿ ಬಾಕ್ಸ್ ಪುಸ್ಸಿಂಗ್ ಮಡೆಯುತ್ತಿದೆ. ಸುತ್ತಲಿನ ಮಣ್ಣುಗುಂಪಿಯನ್ನು ತಗೆದು ಹೊರ ಹಾಕಲು ರೈಲ್ವೆ ಇಲಾಖೆ ವಿಳಂಬ ಮಾಡುತ್ತಿದ್ದು, ನಿಧಾನಗತಿಯಲ್ಲಿ ಕೆಲಸ ನಡೆಯುತ್ತಿದೆ. ಇದೇ ತಿಂಗಳ 20 ಒಳಗಾಗಿ ಬಾಕ್ಸುಸ್ಸಿಂಗ್ಕಾಮಗಾರಿ ಮುಗಿಸಿ ಕಾಲುವೆಗೆ ನೀರು ಹರಿಸಿ ಕೆರೆಗಳನ್ನು ತುಂಬಿಸಲಾಗುವುದೆಂದು ನೀರಾವರಿ ಇಲಾಖೆ ಅಧಿಕಾರಿಗಳು ಭರವಸೆ ನೀಡಿದ್ದರು. ಆದರೆ ರೈಲ್ವೆ ಇಲಾಖೆಯವರು ಭಾಕ್ಸುತ್ತಲು ಹರಡಿರುವ ಮಣ್ಣನ್ನು ಹೊರಹಾಕಲು ವಿಳಂಬ ಮಾಡುತ್ತಿದ್ದಾರೆ. ಇದರಿಂದ ಈ ತಿಂಗಳು ಕಾಲುವೆಗೆ ನೀರು ಹರಿಸುವುದು ಅನುಮಾನವಾಗಿವೆ. ಬೇಸಿಗೆ ಪ್ರಾರಂಭವಾಗಿದ್ದರಿಂದ ಹಳ್ಳಿಗಳಲ್ಲಿ ಜನ ಹಾಗೂ ಜಾನುವಾರುಗಳಿಗೆ ಕುಡಿಯಲು ನೀರಿನ ಆಹಾಕಾರವುಂಟಾಗುತ್ತಿದೆ.

ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸದಾಶಿವ ಬರಟಗಿ, ತಾಲೂಕಾ ಅಧ್ಯಕ್ಷ ಸಿದ್ಧರಾಮ ಅಂಗಡಗೇರಿ, ತಾಲೂಕಾ ಪ್ರಧಾನ ಕಾರ್ಯದರ್ಶಿ ರೇವಣೆಪ್ಪ ಕಡಗೋಲ, ಗಂಗಯ್ಯ ಚಿಕ್ಕಮಠ, ಅಣ್ಣುಗೌಡ ಪಾಟೀಲ, ವಿಠ್ಠಲ ಬಿರಾದಾರ, ಕಾಸಪ್ಪ ಬಡಿಗೇರ, ರವಿ ಕೊಲ್ಲೂರ, ದೇವೇಂದ್ರ ಕೊಡೇಕಲ, ಜನವಾದಿ ಮಹಿಳಾ ಸಂಘದ ಮುಖಂಡರಾದ ಸುರೇಖಾ ರಜಪೂತ, ರಾಮಣ್ಣ ಶಿರಮಗೋಳ, ಖಾಜೇಸಾಬ ಕೋಲಾರ, ಮಳಸಿದ್ದ ನಾಯ್ಕೋಡಿ, ಗಂಗಯ್ಯ ಚಿಕ್ಕಮಠ, ಮಹಮ್ಮದ ಅಲಿ ಕೊಲಾರ, ಭೂತಾಳಿ ಪೂಜೇರಿ, ರಮೇಶ ತೋಟದ, ಜಿ.ಎಸ್. ಇಂಗಳಗಿ, ಸಂಗಮೇಶ ಬಾಗಿ, ಮಳಿಸಿದ್ದ ನಾಯ್ಕೋಡಿ, ನಾಗಪ್ಪ ಹಡಪದ, ಮೈಬೂಸಾಬ ಮುಲ್ಲಾ, ಬಸವರಾಜ ಅಗಸರ, ಕಾಸಪ್ಪ ಬಡಿಗೇರ, ಸಿದ್ದಪ್ಪ ಕೊರಬು, ಲಾಲಸಾಬ ಹಳ್ಳೂರ, ಈರಣ್ಣ ಮಠಪತಿ, ಕೃಷ್ಣಪ್ಪ ಬಮ್ಮರಡ್ಡಿ, ಧರೆಪ್ಪ ಅವಟಿ, ಚಂದ್ರಾಮ ತೆಗ್ಗಿ ಸೇರಿದಂತೆ ನೂರಾರು ರೈತರು ಪಾಲ್ಗೊಂಡಿದ್ದರು.

ಮಲೆಯಾಳಂ ಸುದ್ದಿ ವಾಹಿನಿಗಳ ಮೇಲೆ ನಿಷೇಧ

ಪುಟ 12 ರಿಂದ

ಮತ್ತು ಹಿಂಸಾಚಾರವನ್ನು ಪ್ರಚೋದಿಸಿದ ಆಳುವ ಪಕ್ಷದ ಮುಖಂಡರನ್ನು ರಕ್ಷಿಸುವ ಒಟ್ಟಾರೆ ಪ್ರಯತ್ನದ ಭಾಗವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಭಾರತ ಘೋಷಿತ ತುರ್ತು ಪರಿಸ್ಥಿಯನ್ನು ಒಪ್ಪಲಿಲ್ಲ,

ಅಘೋಷಿತ ತುರ್ತು ಪರಿಸ್ಥಿತಿಯನ್ನೂ ಒಪ್ಪುವುದಿಲ್ಲ– ಯೆಚುರಿ

ಎರಡು ವಾಹಿನಿಗಳ ಮೇಲಿನ ಈ ನಿಷೇಧ ಕಾನೂನಿನ ದೃಷ್ಟಿಯಿಂದ ಕೆಟ್ಟದ್ದು, ಅಲ್ಲದೆ ಪ್ರಜಾಪ್ರಭುತ್ವ–ವಿರೋಧಿ ಮತ್ತು ಸರ್ವಾಧಿಕಾರಶಾಹಿತನದ್ದು ಎಂದು ಟೀಕಿಸಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ, " ಯಾರೂ ಟೀಕಾತೀತರಲ್ಲಿ, ಅದರಲ್ಲೂ ಸರ್ದಾರ್ ಪಟೇಲ್ ನಿಷೇಧಿಸಿದ ಆರೆಸ್ಸೆಸ್ ಅಂತೂ ಖಂಡಿತಾ ಅಲ್ಲ" ಎಂದು ಟಿಪ್ಪಣಿ ಮಾಡಿದ್ದಾರೆ.

ಮುಂದುವರೆದು ಅವರು "ಯಾವುದೇ ಆಳ್ವಿಕೆಯ ಇಂತಹ ನಡೆಗಳ ಅಂತ್ಯ ಹೇಗೆ ಎಂಬುದನ್ನು ಇತಿಹಾಸ ನಮಗೆ ತೋರಿಸಿದೆ. ಭಾರತ ಘೋಷಿತ ತುರ್ತು ಪರಿಸ್ಥಿತಿಯನ್ನು ತಿರಸ್ಕರಿಸಿದೆ, ಈಗ ಅದು ಒಂದು ಅಘೋಷಿತ ತುರ್ತು ಪರಿಸ್ಥಿತಿಯನ್ನೂ ಒಪ್ಪುವುದಿಲ್ಲ" ಎಂದಿದ್ದಾರೆ.

ಕಮ್ಯುನಿಸ್ಟ್ ಪಥಪ್ರದರ್ಶಕರು

– ಸಾಮಾಜಿಕ ಸುಧಾರಣಾ ಚಳುವಳಿಯ ಮುಂದಾಳುಗಳು

ಪುಟ 11 ರಿಂದ

ಸಮುದಾಯದ ಒಳಗಡೆಯ ಸಾಮಾಜಿಕ ಸುಧಾರಣೆಯ ಅಗತ್ಯತೆಯ ಬಗ್ಗೆ ನಿರಂತರವಾಗಿ ಬರೆದರು. ಒಂದು ಸಾಂಪ್ರದಾಯಿಕ ನಂಬೂದಿರಿ ಕುಟುಂಬದಿಂದ ಬಂದ ಅವರು ಆ ಸಮುದಾಯದಲ್ಲಿನ ಮಹಿಳೆಯರ ಪಾಡಿನ ಬಗ್ಗೆ ಮತ್ತು ಇತರ ಹೇಸಿಗೆ ಹುಟ್ಟಿಸುವ ಸಂಪ್ರದಾಯಗಳ ಬಗ್ಗೆ ಚೆನ್ನಾಗಿ ತಿಳಿದಿದ್ದರು. ವಿಧವಾ ಮರುವಿವಾಹದ ಪರವಾಗಿ ಮತ್ತು ಬಹುವಿವಾಹದ ವಿರುದ್ಧ ಕ್ರಿಯಾಶೀಲ ಪ್ರಚಾರ ನಡೆಸಿದರು. ನಂಬೂದಿರಿ ಮಹಿಳೆಯರಲ್ಲಿ ರೂಢಿಗತವಾಗಿದ್ದ ಪರದಾ ಪದ್ಧತಿಯ ವಿರುದ್ಧ ಹಾಗೂ ತಮ್ಮ ದೇಹದ ಮೇಲ್ಭಾಗವನ್ನು ಮುಚ್ಚಿಕೊಳ್ಳುವ ಹಕ್ಕಿಗಾಗಿ ಹೋರಾಡಿದರು ಕೂಡ. ಅವರ ಮೊದಲ ಬಂಧನದ ನಂತರ, ಅವರ ದೊಡ್ಡಣ್ಣ ಅವರ ಜತೆಗಿನ ಸಂಬಂಧಗಳನ್ನು ಕಡಿದುಕೊಂಡರು; ಏಕೆಂದರೆ ಜೈಲಿನಲ್ಲಿರುವವರನ್ನು ಜಾತಿಯಿಂದ ಹೊರ ಹಾಕಬೇಕೆಂಬ ಪದ್ಧತಿ ಆಗ ಜಾರಿಯಲ್ಲಿತ್ತು. ಅವಾವುದೂ ಇ.ಎಂ.ಎಸ್. ಅವರನ್ನು ಅವರ ಹೋರಾಟದ ಹಾದಿಯಿಂದ ಕದಲಿಸಲಾಗಲಿಲ್ಲ: ಅವರು ತಮ್ಮ ಸಾಮಾಜಿಕ ಹಾಗೂ ಆರ್ಥಿಕ ವಿಮೋಚನಾ ಚಳುವಳಿಯನ್ನು ಮುಂದುವರಿಸಿದರು. ಈ ಹಾದಿಯಲ್ಲೇ ಮುಂದುವರಿದ ಅವರು ಸಮಾಜವಾದಿ ಚಿಂತನೆಗಳತ್ತ ಹೊರಳಿದರು ಮತ್ತು ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷವನ್ನು ಸೇರಿದರು, ಅದರ ಅಖಿಲ ಭಾರತ ಸಹಕಾರ್ಯದರ್ಶಿಯಾಗಿ ಆಯ್ಕೆಯಾದರು. ಆ ನಂತರದಲ್ಲಿ, ಕೇರಳದ ಸಿ.ಎಸ್.ಪಿ.ಯು ಇಡಿಯಾಗಿ ಕಮ್ಯುನಿಸ್ಟ್ ಪಕ್ಷವಾಗಿ ಪರಿವರ್ತನೆಯಾಗುವಲ್ಲಿ ಇಎಂ.ಎಸ್. ಮಹತ್ವದ ಪಾತ್ರ ವಹಿಸಿದರು.

ಪಿ.ರಾಮಮೂರ್ತಿ, ಇ.ಎಂ.ಎಸ್, ಏಕೆಜಿ– ಇವರೆಲ್ಲರೂ ಕಮ್ಯುನಿಸ್ಟ್ ಪಕ್ಷವನ್ನು ಒಂದು ನೈಜ ಪರ್ಯಾಯವೆಂದು ಗುರುತಿಸಲು ತಮಗೆ ಸಹಾಯ ಮಾಡಿದ ಪಿ.ಸುಂದರಯ್ಯ ಅವರ ಕೊಡುಗೆಯನ್ನು ನೆನೆಯುತ್ತಾರೆ. ಪಿ.ಸುಂದರಯ್ಯ ಅವರು ತಮ್ಮ ರಾಜಕೀಯ ಬದುಕನ್ನು ಪ್ರಾರಂಭಿಸಿದ್ದೇ ಬಹುತೇಕ ದಲಿತರೇ ಇರುವ ಕೃಷಿ ಕೂಲಿಗಾರರನ್ನು ಸಂಘಟಿಸುವ ಮೂಲಕ. ದಲಿತರ ವಿರುದ್ಧದ ತಾರತಮ್ಯವನ್ನು ಖಂಡತುಂಡವಾಗಿ ವಿರೋಧಿಸಿದರು: ಮೇಲ್ಜಾತಿಯ ಮನೆಗಳಿಗೆ ದಲಿತರ ಪ್ರವೇಶವನ್ನೇ ನಿರ್ಬಂಧ ಮಾಡುತ್ತಿದ್ದುದನ್ನು ಮತ್ತು ಅಸ್ಪೃಶ್ಯತೆಯನ್ನು ಅವರ ಕಡುವಾಗಿ ವಿರೋಧಿಸಿದರು. ಕೃಷಿ ಕೂಲಿಗಾರರ ಮೊದಲ ಸಂಘವನ್ನು ಆರಂಭಿಸಿದರು ಮತ್ತು ದಲಿತರ ಜತೆ ಮೇಲ್ಜಾತಿಯವರ ಸಹಪಂಕ್ತಿ ಭೋಜನ ಸಂಘಟಿಸಿದರು. ಅಸ್ಪೃಶ್ಯತೆಯ ವಿರುದ್ಧ ದಂಗೆ ಎದ್ದಿದ್ದು ಮಾತ್ರವಲ್ಲ, ದಲಿತರ ಜತೆ ಹೊಲ ಗದ್ದೆಗಳಲ್ಲಿ ಭುಜಕ್ಕೆ ಭುಜ ಕೊಟ್ಟು ಕೆಲಸವನ್ನೂ ಮಾಡಿದರು; ದಲಿತರ ಸಾಮಾನ್ಯ ಖಾಯಿಲೆಗಳಿಗೆ ವೈದ್ಯಕೀಯ ಸಹಾಯ ಹಾಗೂ ಅವರ ಅನುಕೂಲಕ್ಕಾಗಿ ಪಡಿತರ ಅಂಗಡಿಗಳನ್ನೂ ತೆರೆದರು. ಈ ರೀತಿಯಲ್ಲಿ, ಅವರು ಜಾತಿ ತಾರತಮ್ಯದ ವಿರುದ್ಧ ಹೋರಾಟ ಮಾಡುವುದರ ಜತೆಯಲ್ಲೇ ತಮ್ಮ ಕಲ್ಯಾಣ ಚಟುವಟಿಕೆಗಳ ಮೂಲಕ ಪರ್ಯಾಯವನ್ನೂ ತೋರಿದರು. ಈ ಪ್ರಕ್ರಿಯೆಯಲ್ಲಿ ಸುಂದರಯ್ಯ ಅವರು ತಮ್ಮ ಹೆಸರಿನಲ್ಲಿದ್ದ ಜಾತಿಸೂಚಕ ಪದವನ್ನೂ ಕಿತ್ತುಹಾಕಿಕೊಂಡರು.

ಸಮಸಮಾಜದ ಚಿಂತನೆಗಳಿಂದ ಪ್ರೇರಿತರಾಗಿ, ದಲಿತರ ಸಾಮಾಜಿಕ ತುಳಿತ ಹಾಗೂ ಆರ್ಥಿಕ ಶೋಷಣೆಗೆ ನಿಜವಾದ ಕಾರಣಗಳೇನು ಎನ್ನುವುದನ್ನು ಕಮ್ಯುನಿಸ್ಟರು ದಲಿತರ ನಡುವೆ ಪ್ರಚಾರ ಮಾಡುವ ಪ್ರಯತ್ನ ಮಾಡಿದರು ಮತ್ತು ಅವರನ್ನು ಕಮ್ಯುನಿಸ್ಟ್ ಪಕ್ಷದ ಅಡಿಯಲ್ಲಿ ಸಂಘಟಿಸಿದರು ಕೂಡ. ಸುಂದರಯ್ಯ ಮತ್ತು ಎಂ.ಬಸವಪುನ್ನಯ್ಯ ಅವರಂತಹ ಮುಖಂಡರು ಕೃಷಿ ಕೂಲಿಗಾರರ ನಡುವೆ ಮಾರ್ಗದರ್ಶಕ ಕೆಲಸಗಳನ್ನು ಮಾಡಿದ ಕಾರಣದಿಂದಲೇ ಆಂಧ್ರ ಪ್ರದೇಶದ ಕಮ್ಯುನಿಸ್ಟ್ ಪಕ್ಷವನ್ನು 'ದಲಿತರ ಪಕ್ಷ' ಎಂದೂ ಆಗ ಕರೆಯುತ್ತಿದ್ದರು.

ಮಾರ್ಕ್ಸ್‌ವಾದ–ಲೆನಿನ್‌ವಾದ ಸಿದ್ಧಾಂತ ಮಾತ್ರವೇ ಮತ್ತು ಕಮ್ಯುನಿಸ್ಟ್ ಪಕ್ಷದಂತಹ ಶಕ್ತಿ ಮಾತ್ರವೇ ಒಂದು ಸಮಸಮಾಜದ ಸ್ಥಾಪನೆಯತ್ತ ಹೋರಾಟವನ್ನು ಮುಂದೊಯ್ಯಲು ಸಾಧ್ಯ ಎನ್ನುವುದನ್ನು ಕಮ್ಯುನಿಸ್ಟ್ ಪಥಪ್ರದರ್ಶಕರು ತಮ್ಮ ಪ್ರಯೋಗಗಳ ಮೂಲಕ ಕಂಡುಕೊಂಡರು. ಅಂತಹ ಒಂದು ಸಮಾಜ ನಿರ್ಮಾಣಕ್ಕಾಗಿ ಅವರು ಹಲವಾರು ವರ್ಗ ಹಾಗೂ ಸಾಮೂಹಿಕ ಸಂಘಟನೆಗಳನ್ನು ಸ್ಥಾಪಿಸಿದರು ಮತ್ತು ತಮ್ಮ ಹೋರಾಟದ ಭಾಗವಾಗಿ ಸಾಮಾಜಿಕ ದಬ್ಬಾಳಿಕೆಗಳ ಪ್ರಶ್ನೆಗಳನ್ನೂ ಕೈಗೆತ್ತಿಕೊಂಡರು. ಈ ಪ್ರಯತ್ನಗಳು ಕಮ್ಯುನಿಸ್ಟ್ ಪಕ್ಷಕ್ಕೆ ಒಂದು ಭದ್ರ ಬುನಾದಿಯನ್ನು ಹಾಕಿದವು ಮತ್ತು ಬ್ರಿಟಿಷ್ ಆಳರಸರು ಹಾಗೂ ಸ್ಥಳೀಯ ಭೂಮಾಲಕರು ಹರಿಬಿಡುತ್ತಿದ್ದ ದಾಳಿ ದಬ್ಬಾಳಿಕೆಗಳನ್ನು ಎದುರಿಸಲು ಸಹಾಯಕವಾದವು. ಕಮ್ಯುನಿಸ್ಟ್ ಚಳುವಳಿಯನ್ನು ಬಹಳ ಮುಖ್ಯವಾಗಿ 1930ರ ನಂತರ ತ್ವರಿತ ಗತಿಯಲ್ಲಿ ಕೊಂಡೊಯ್ಯಲು ದಾರಿ ಮಾಡಿಕೊಟ್ಟವು.

➘ ಕಾಲೇಜು ಶಿಕ್ಷಣ, ಮೆಡಿಕೇರ್ ವಿಸ್ತರಣೆ, ಸಮುದಾಯ ಆರೋಗ್ಯ ಕೇಂದ್ರಗಳು, ದೈತ್ಯ ಬ್ಯಾಂಕುಗಳ ನಿಬಂಧನೆ, ಟಿಪಿಪಿ ಒಪ್ಪಂದ ರದ್ದತಿ, ಅಣ್ವಸ್ತ್ರ ವೆಚ್ಚ ಕಡಿತ ಮತ್ತು ಮರಣ ದಂಡನೆ ರದ್ದತಿ – ಈ ಪ್ರಗತಿಪರ ಪ್ರಣಾಳಿಕೆಯ ಮುಖ್ಯಾಂಶಗಳಗಿದ್ದವು. ಈ ಡೆಮೊಕ್ರಾಟಿಕ್ ಪ್ರಣಾಳಿಕೆಗೆ ನೇರ ಮತಗಳ ಲೆಕ್ಕದಲ್ಲಿ ಅತ್ಯಂತ ಹೆಚ್ಚು ಮತ ಬಂದಿತ್ತು ಎಂದೂ ಗಮನಿಸಬೇಕು. ಅಮೆರಿಕದ ಪರೋಕ್ಷ ಅಧ್ಯಕ್ಷೀಯ ಚುನಾವಣೆಯ ವ್ಯವಸ್ಥೆಯಿಂದಾಗಿ ಅಷ್ಟೇ ಡೆಮೊಕ್ರಾಟಿಕ್ ಪಕ್ಷ ಸೋತಿತು. ಎಲ್ಲರಿಗೂ ಮೆಡಿಕೇರ್, ಗ್ರೀನ್ ನ್ಯೂ ಡೀಲ್, ವಿದ್ಯಾರ್ಥಿ ಸಾಲ ಮನ್ನಾ, ಜೀವನಾವಶ್ಯಕ ಕನಿಷ್ಠ ವೇತನ – ಇವು ಸ್ಯಾಂಡರ್ಸ್ ನ್ನು ಮುನ್ನೆಲೆಗೆ ತಂದ ಪ್ರಣಾಳಿಕೆಯ ಮುಖ್ಯಾಂಶಗಳು. ಇವ್ಯಾವುವೂ ಬಿಡೆನ್ ಪ್ರಣಾಳಿಕೆಯಲ್ಲಿ ಇಲ್ಲ. ಆದರೆ ಬಿಡೆನ್ ಬೆಂಬಲಿಗರೂ ಈಗಾಗಲೇ ಹೇಳಿದ ಹಾಗೆ ಇವನ್ನು ಮೆಚ್ಚಿಕೊಳ್ಳುತ್ತಾರೆ. ಹಾಗೂ ಇವು ಕೊನೆಗೆ ಡೆಮೊಕ್ರಾಟಿಕ್ ಪ್ರಣಾಳಿಕೆಯಲ್ಲಿ ಇಲ್ಲದಿದ್ದರೆ ಅವರಿಗೆ ಆ ಪಕ್ಷಕ್ಕೆ ಮತ ಹಾಕುವ ಕುರಿತು ಅತೀವ ಆಸಕ್ತಿ ಉಳಿಯಲಿಕ್ಕಿಲ್ಲ. ಸ್ಯಾಂಡರ್ಸ್ ಕಣದಲ್ಲಿದ್ದು ಈ ಅಂಶಗಳ ಕುರಿತು ಪ್ರಚಾರ ಮಾಡಿ ಒತ್ತಡ ತಂದರೆ ಮಾತ್ರ ಇವು ಡೆಮೊಕ್ರಾಟಿಕ್ ಪ್ರಣಾಳಿಕೆಯಲ್ಲಿ ಬರಲು ಸಾಧ್ಯ. ಕೊರೊನಾ ವೈರಸ್ ನಿಂದ ಇನ್ನಷ್ಟು ಹದಗೆಡಲಿರುವ ಆರ್ಥಿಕ ಪರಿಸ್ಥಿತಿಯಿಂದ ಅವು ಇನ್ನಷ್ಟು ತುರ್ತು ಅಗತ್ಯಗಳಾಗಲಿವೆ. ಎಲ್ಲರಿಗೂ ಮೆಡಿಕೇರ್ ಇಲ್ಲದೆ ಸಾಂಕ್ರಾಮಿಕವಾಗಬಹುದಾದ ಕೊರೊನಾ ವೈರಸ್ ಸೋಂಕು ನಿಯಂತ್ರಿಸುವುದು ಅಸಾಧ್ಯವಾಗಲಿದೆ. ಆದರೆ ಬಿಡೆನ್ ಎಲ್ಲರಿಗೂ ಮೆಡಿಕೇರ್ ಕಾಯಿದೆ ಸದನ ಪಾಸು ಮಾಡಿದರೆ ಅದನ್ನು ವಿಟೋ ಬಳಸಿ ತಡೆಯುವುದಾಗಿ ಅಪ್ಪಣೆ ಕೊಡಿಸಿದ್ದಾರೆ. ಇಂತಹ ಆಸಾಮಿ 'ಎಲ್ಲರಿಗೂ ಮೆಡಿಕೇರ್' ಒಪ್ಪಿಕೊಳ್ಳಬೇಕು ಅಥವಾ ಸೋಲಬೇಕು. 2016ರ ಅಧ್ಯಕ್ಷೀಯ ಚುನಾವಣೆಯಲ್ಲಿಯೂ ಟ್ರಂಪ್ ಸೋಲಿಸಲು ಸ್ಯಾಂಡರ್ಸ್ ಹೆಚ್ಚಿನ ಅಂತರದಿಂದ ಸೋಲಿಸಬಲ್ಲ ಅಭ್ಯರ್ಥಿ ಎಂದು ಸಮೀಕ್ಷೆಗಳು ಹೇಳಿದ್ದವು. ಹಿಲೆರಿ ಅಭ್ಯರ್ಥಿಯಾದರೆ ಗೆಲುವಿನ ಅಂತರ ಕಡಿಮೆಯಿರುತ್ತದೆ ಎಂದು ಹೇಳಲಾಗಿತ್ತು. ನಡುಪಂಥೀಯ ಅಭ್ಯರ್ಥಿಗಿಂತ ಎಡಪಂಥೀಯ ಅಭ್ಯರ್ಥಿ ಟ್ರಂಪ್ ನ್ನು ಸೋಲಿಸುವುದು ಹೆಚ್ಚು ಸುಲಭ ಎಂದು ಈ ಬಾರಿಯೂ ಹೇಳಲಾಗುತ್ತಿದೆ.

ಸ್ಯಾಂಡರ್ಸ್ ಮುಂದೆ ಬರುವ ರಾಜ್ಯಗಳಲ್ಲಿ ತಮ್ಮ ಹೋರಾಟ ಮತ್ತು ಪ್ರಣಾಳಿಕೆಯನ್ನು ಮುಂದುವರೆಸುವುದಾಗಿ ಹೇಳಿದ್ದಾರೆ.

ನೌಕರರ ಭವಿಷ್ಯ ನಿಧಿಯ ಮೇಲಿನ ಬಡ್ಡಿ ಕಡಿತ

ಪುಟ 12 ರಿಂದ

ಬೇಡಿಕೆ. ಆದರೆ ನವ–ಉದಾರವಾದಿ ಆಳ್ವಿಕೆಗಳು ಕಾರ್ಮಿಕರ ಸಾಮಾಜಿಕ ಭದ್ರತಾ ಉಳಿತಾಯಗಳು, ಮತ್ತು ಒಟ್ಟಾರೆಯಾಗಿ ಜನಸಾಮಾನ್ಯರ ಸಣ್ಣ ಉಳಿತಾಯಗಳ ಮೇಲಿನ ಬಡ್ಡಿದರಗಳನ್ನು ಇಳಿಸುತ್ತಲೇ ಬಂದಿವೆ. ಇದರಿಂದಾಗಿ ಕಾರ್ಮಿಕರಿಗೆ ಮತ್ತು ತಮ್ಮ ಜೀವಮಾನದ ಉಳಿತಾಯದ ಬಡ್ಡಿ ಹಣವೇ ಜೀವನಾಧಾರವಾಗಿರುವ ನಿವೃತ್ತ ವ್ಯಕ್ತಿಗಳಿಗೆ ಭಾರಿ ನಷ್ಟ ಉಂಟಾಗಿದೆ. ಅದೇ ವೇಳೆಯಲ್ಲಿ ಇವೇ ಸರಕಾರಗಳು ಕಾರ್ಪೊರೇಟ್‌ಗಳಿಗೆ ಎಷ್ಟೊಂದು ಉದಾರವಾಗಿವೆಯೆಂದರೆ ಕಾರ್ಪೊರೇಟ್ ತೆರಿಗೆ ದರಗಳನ್ನು ಮತ್ತು ಶೇರು ಮಾರುಕಟ್ಟೆಯಲ್ಲಿ ಸಟ್ಟಾಕೋರ ಹೂಡಿಕೆಗಳ ಮೇಲಿನ ಆದಾಯಗಳ ಮೇಲಿನ ತೆರಿಗೆ ದರಗಳನ್ನೂ ಇಳಿಸಿವೆ. ಇದು ದೇಶೀ ಮತ್ತು ವಿದೇಶೀ ಖಾಸಗೀ ಕಾರ್ಪೊರೇಟ್‌ಗಳು ಮತ್ತು ಸಟ್ಟಾಕೋರರ ಪ್ರಯೋಜನಕ್ಕಾಗಿ ಜಿಡಿಪಿಯನ್ನು ನಿರ್ಮಿಸುವ ಮತ್ತು ರಾಷ್ಟ್ರೀಯ ಖಜಾನೆಗೆ ಆದಾಯಗಳನ್ನು ಉತ್ಪನ್ನ ಮಾಡುವ ದುಡಿಯುವ ಜನಗಳ ಕೋಟ್ಯಂತರ ರೂ.ಗಳ ಲೂಟಿಯಲ್ಲದೆ ಬೇರೇನೂ ಅಲ್ಲ ಎಂದು ಸಿಐಟಿಯು ಹೇಳಿದೆ.

ಆದ್ದರಿಂದ ಇಂತಹ ಕಾರ್ಮಿಕ–ವಿರೋಧಿ, ಕಾರ್ಪೊರೇಟ್–ಪರ ಮತ್ತು ಸಟ್ಟಾಕೋರರ ಪರವಾದ ಧೋರಣೆಗಳನ್ನು ಸರಕಾರ ಕೈಬಿಡುವಂತೆ ಕಾರ್ಮಿಕರು ಮತ್ತು ಜನತೆ ಆಗ್ರಹಿಸಬೇಕು ಎಂದು ಕರೆ ನೀಡಿರುವ ಸಿಐಟಿಯು ಈ ರೀತಿಯ ಜನಸಾಮಾನ್ಯರ ಲೂಟಿಯ ನವ–ಉದಾರವಾದಿ ವ್ಯವಸ್ಥೆಯ ವಿರುದ್ಧ ಐಕ್ಯ ಹೋರಾಟ ನಡೆಸಬೇಕು ಎಂದು ಕರೆ ನೀಡಿದೆ.

JANASHAKTHI KANNADA VARA PATRIKE March 16-22, 2020 Price: Rs. 10/- Date of Publication: 13 March 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283



ಪೌರತ್ವ ಕಾಯ್ದೆಯ ವಿರುದ್ಧ ಸಿಪಿಐಎಂ ನಿಂದ ಪ್ರಚಾರಾಂದೋಲನ

ಕೇಂದ್ರ ಸರಕಾರ ನಮ್ಮ ನೆಲದಲ್ಲಿ ಇರುವವರನ್ನು ಪರಕೀಯರನ್ನಾಗಿ ಮಾಡಲು ಪೌರತ್ವ ತಿದ್ದುಪಡಿ ಕಾಯ್ದೆಯನ್ನು ಜಾರಿಗೆ ತಂದಿದ್ದು ದಾಖಲೆಗಳನ್ನು ತೋರಿಸುವ ಅಗತ್ಯವಿಲ್ಲ. ಕಾಯ್ದೆ ವಾಪಸ್ಸು ಹೋಗಲಿ ಎಂದು ಗಟ್ಟಿಧ್ವನಿಯಲ್ಲಿ ಹೇಳಬೇಕಾಗಿದೆ ಎಂದು ಸಿಪಿಐಎಂ ರಾಜ್ಯ ಸಮಿತಿ ಸದಸ್ಯ ನಿತ್ಯಾನಂದಸ್ವಾಮಿ ತಿಳಿಸಿದರು.

ಕೋಲಾರ ನಗರದ ಪತ್ರಕರ್ತರ ಭವನದಲ್ಲಿ ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದಿಂದ ಸೋಮವಾರ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು ಪೌರತ್ವ ತಿದ್ದುಪಡಿ ಕಾಯ್ದೆಯನ್ನು ವಾಪಸ್ಸು ಪಡೆಯಬೇಕೆಂದು ಮಾರ್ಚ 23 ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಯಲಿದ್ದು ಕೇಂದ್ರ ಸರಕಾರದ ವಿರುದ್ಧ ಮನೆ ಮನೆ ಪ್ರಚಾರಾಂದೋಲನ ನಡೆಯಲಿದೆ ಎಂದರು.

ರೈತ ಹಾಗೂ ಇತರ ದುಡಿಯುವ ವರ್ಗ ಹಲವಾರು ಜ್ವಲಂತ ಸಮಸ್ಯೆಗಳನ್ನು ಎದುರಿಸುತ್ತಿದ್ದರೂ ಸರ್ಕಾರ ಆ ಬಗ್ಗೆ ನಿರ್ಲಕ್ಷ್ಯ ವಹಿಸುತ್ತಿದೆ ಬೆಲೆ ಏರಿಕೆ, ಅಸಮರ್ಪಕ ರೇಷನ್ ವ್ಯವಸ್ಥೆ, ಹೆಚ್ಚುತ್ತಿರುವ ನಿರುದ್ಯೋಗ, ಅಸಂಘಟಿತ ಕಾರ್ಮಿಕರ ಕನಿಷ್ಟ ಕೂಲಿ ಇತ್ಯಾದಿ ಹಲವು ಬೇಡಿಕೆಗಳನ್ನು ಸರ್ಕಾರ ಈಡೇರಿಸದೇ ಪೌರತ್ವದ ಹೆಸರಿನಲ್ಲಿ ಜನರನ್ನು ವಿಭಾಗಿಸುತ್ತಾ ಇದೆ ಎಂದರು.

ಪೌರತ್ವ ಕಾಯ್ದೆ ತಿದ್ದುಪಡಿ ಅಗತ್ಯವೇನಿತ್ತು. ಇದೊಂದು ರಾಜಕೀಯ ಅಜೆಂಡಾ. ರಾಷ್ಟ್ರೀಯ ಪೌರತ್ವ ನೋಂದಣಿ ಮಾಡಲು ಕಾಯಿದೆಗೆ ತಿದ್ದುಪಡಿ ತಂದಿದ್ದು ದೇಶದಲ್ಲಿ ಸಂವಿಧಾನ ವಿರುದ್ಧ ಆಡಳಿತ ನಡೆಸಲು, ಮತೀಯ ಆಧಾರದಲ್ಲಿ ಪೌರತ್ವ ನೀಡಲು ಸಾಧ್ಯವೇ ಇಲ್ಲ. ಕೇಂದ್ರ ಸರಕಾರ ತಮಗೆ ಮತ ಕೊಟ್ಟ ಜನರ ಹಿತ ಕಾಯುವುದನ್ನು ಬಿಟ್ಟು ಉದ್ಯಮಿಗಳ ಹಿತ ಕಾಯಲು ಹೊರಟಿದೆ. ನಮಗೆ ಪೌರತ್ವ ಕಾಯಿದೆ ತಿದ್ದುಪಡಿ ಅಗತ್ಯವಿಲ್ಲ. ಪ್ರಣಾಳಿಕೆಯಲ್ಲಿಹೇಳಿದಂತೆ ಪ್ರತಿವರ್ಷ 2 ಕೋಟಿ ಉದ್ಯೋಗ ಸೃಷ್ಟಿ ಮಾಡಿ ಎಂದು ಒತ್ತಾಯಿಸಿದರು,

ಬಾಂಗ್ಲಾದೇಶ, ಅಫಘಾನಿಸ್ತಾನ, ಪಾಕಿಸ್ತಾನದಿಂದ ವಲಸೆ ಬಂದಂತಹ ಹಿಂದು, ಕ್ರಿಶ್ಚಿಯನ್, ಬೌದ್ಧ, ಸಿಖ್, ಜೈನ್ ಧರ್ಮಗಳ ಜನ ಸಮುದಾಯಗಳನ್ನು ಮಾತ್ರ ಕಾನೂನು ಬದ್ಧವೆಂದು ಪರಿಗಣಿಸಿ ಪೌರತ್ವ ನೀಡಲು ಒಪ್ಪಿದೆ. ಅದೇ ಸಮಯದಲ್ಲಿ ಅದೇ ದೇಶಗಳಿಂದ ವಲಸೆ ಬಂದಂತಹ ಮುಸ್ಲಿಮರನ್ನು ಕಾನೂನು ಬಾಹೀರ ವಲಸೆಗಾರರೆಂದು ಪರಿಗಣಿಸುವುದು ಯಾವ ನ್ಯಾಯ ಇದು ಭಾರತೀಯ ಸಂವಿಧಾನ ವಿರೋಧಿ ನೀತಿಯಾಗಿದ್ದು, ಕೂಡಲೇ ಪಾಸ್ ಮಾಡಿದ ಕಾಯ್ದೆಯನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಸಂವಿಧಾನದ ಕಾನೂನಿನ ಮುಂದೆ ದೇಶದ ಪ್ರತಿಯೊಬ್ಬ ಪ್ರಜೆ ಸಮಾನರೆಂದು ಪರಿಗಣಿಸಿದೆ. ಧರ್ಮ, ಜಾತಿ, ಭಾಷೆ, ಪ್ರದೇಶ ಹಾಗು ಲಿಂಗ ತಾರತಮ್ಯ ಮಾಡುವಂತಿಲ್ಲ. ಆದರೆ ಬಿಜೆಪಿಯ ಕೇಂದ್ರ ಸರ್ಕಾರ ಧರ್ಮ, ಜಾತಿ ಹೆಸರಿನಲ್ಲಿ ಬೇರ್ಪಡಿಸಿ ಒಡೆದು ಆಳುವ ನೀತಿ ಅನುಸರಿಸುತ್ತಿದೆ. ಇದು ದೇಶದ ಐಕ್ಯತೆ ಹಾಗು ಸಮಗ್ರತೆಗೆ ಹಾನಿಯನ್ನುಂಟು ಮಾಡುವ ಸಂಗತಿಯಾಗಿದೆ. ಈ ಮಸೂದೆಯ ಉದ್ದೇಶ ಕೋಮು ವಿಭಜನೆ ಆಗಿದೆ ಎಂದು ಆರೋಪಿಸಿದರು.



ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಪಿ.ಶ್ರೀನಿವಾಸ್ ಮಾತನಾಡಿ. ಕೇಂದ್ರ ಸರ್ಕಾರದ ಖಾಸಗೀಕರಣ, ಜಾಗತೀಕರಣ, ಉದಾರಿಕರಣ ನೀತಿಗಳಿಂದ ಕೃಷಿ, ಕೈಗಾರಿಕೆ ವಲಯದ ಉತ್ಪಾದನೆ ಕುಂಠಿತವಾಗಿದೆ. ಸಣ್ಣ ಸಣ್ಣ ಉದ್ಯಮಗಳು ಮುಚ್ಚುತ್ತಿವೆ. ಇದರಿಂದ ದೇಶ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿದೆ. ರೈತರ ಬೆಳೆಗಳಿಗೆ ಬೆಂಬಲ ಬೆಲೆ ಇಲ್ಲದೇ ರೈತ ಆತ್ಮಹತ್ಯ ಮಾಡಿಕೊಳ್ಳುತ್ತಿದ್ದರೂ ರೈತರ ಸಾಲಮನ್ನಾ ಮಾಡುತ್ತಿಲ್ಲ. ಆದರೆ ಬಂಡವಾಳಶಾಯಿಗಳಿಗೆ ಮಾತ್ರ ಸಾಲಮನ್ನಾ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ವಿಮಾನ ನಿಲ್ದಾಣಗಳು ಸೇರಿದಂತೆ ದೇಶಕ್ಕೆ ಆದಾಯ ತರುವ ರೈಲ್ವೇ ಇಲಾಖೆ, ಸರ್ಕಾರಿ ಸ್ವಾಮ್ಯದ ಎಲ್ಲಾ ಕೈಗಾರಿಕೆಗಳನ್ನು ಕೇಂದ್ರ ಸರ್ಕಾರ ಖಾಸಗೀಕರಣ ಮಾಡುತ್ತಿದೆ. ಬಂಡವಾಳಶಾಯಿಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ದೇಶದ ಸಂಪನ್ಮೂಲವನ್ನು ಧಾರೆ ಎರೆದು ಕೊಡುತ್ತಿದೆ. ಆದರೆ ಆದಾಯ ತರುವ ಕಾರ್ಮಿಕ ವರ್ಗಕ್ಕೆ ಮಾತ್ರ ವೇತನ ಕಡಿತಗೊಳಿಸುತ್ತಿದೆ ಎಂದು ದೂರಿದರು.

ಈ ಸಮಾವೇಶದಲ್ಲಿ ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಪಿ.ಆರ್ ಸೂರ್ಯನಾರಾಯಣ, ವಿ. ಗೀತಾ, ಟಿ.ಎಂ ವೆಂಕಟೇಶ್ ಇದ್ದರು.

ವರದಿ: ಸಿ. ಅಮರೇಶ್

ಪೌರತ್ವ ತಿದ್ದುಪಡಿ ಕಾಯಿದೆ ವಿರೋಧಿಸಿ ಪ್ರಚಾರಭಿಯಾನ



ಸಿಪಿಐ(ಎಂ) ಪಕ್ಷದ ಕರೆಯಂತೆ ಸಿಎಎ, ಎನ್‌ಪಿಆರ್, ಎನ್‌ಆರ್‌ಸಿ ವಿರುದ್ಧ ಜನ ಜಾಗೃತಿಗಾಗಿ ಮನೆ, ಮನೆ ಪ್ರಚಾರಭಿಯಾನ ಇದೇ 23 ಮಾರ್ಚ್ 2020 ರ ವರೆಗೆ ನಡೆಯಲಿದ್ದು, ಇದರ ಅಂಗವಾಗಿ ಸಿಪಿಐ(ಎಂ) ಬೈಂದೂರು ವಲಯ ಸಮಿತಿ ನೇತೃತ್ವದಲ್ಲಿ ಇಂದು ನಾಡ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮನೆ, ಮನೆ ಬೇಟಿ ಮಾಡಿ ವ್ಯಾಪಕವಾಗಿ ಕರಪತ್ರ ವಿತರಣೆ ಮಾಡಲಾಯಿತು. ಪಕ್ಷದ ಜಿಲ್ಲಾ ಮುಖಂಡರೂ, ಕೃಷಿ ಕೂಲಿಕಾರರ ಸಂಘ, ಜನವಾದಿ ಮಹಿಳಾ ಸಂಘದ ಮುಖಂಡರು ಪ್ರಚಾರೊಂದಲನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಹೆಮ್ಮಾಡಿ: ಸಿಪಿಐ(ಎಂ) ಪಕ್ಷದ ಬೈಂದೂರು ವಲಯ ಸಮಿತಿ ನೇತೃತ್ವದಲ್ಲಿ ಪಕ್ಷದ ಹೋರಾಟ ನಿಧಿ ಸಂಗ್ರಹ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ (ಒಖಂಘಗ) ದ ರಾಜ್ಯ ಸಮಿತಿಯ ವತಿಯಿಂದ ಹೊರಡಿಸಲಾದ ಪೌರತ್ವ ತಿದ್ದುಪಡಿ ಕಾಯಿದೆ ಸಿಎಎ, ಎನ್‌ಆರ್‌ಸಿ, ಎನ್‌ಪಿಆರ್, ವಿರೋಧಿ ಕರಪತ್ರದ ಪ್ರಚಾರಭಿಯಾನ ಕಾರ್ಯಕ್ರಮ ಯಶಸ್ವಿಯಾಗಿ ಜರಗಿತು. ಪ್ರಚಾರಭಿಯಾನದ ಜಾಥಾ ತಂಡ ಹೆಮ್ಮಾಡಿ ಪೇಟೆಯ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಎಲ್ಲಾ ಅಂಗಡಿ ಮುಂಗಟ್ಟು ಹಾಗೂ ಸಾರ್ವಜನಿಕರಿಗೆ ಕರಪತ್ರ ವಿತರಿಸಿ ವ್ಯಾಪಕ ಪ್ರಚಾರ ನಡೆಸಲಾಯಿತು. ಸಿಪಿಐ(ಎಂ) ಮುಖಂಡರಾದ ಸುರೇಶ್ ಕಲ್ಲಾಗರ, ಮಹಾಬಲ ವಡೇರ ಹೋಬಳಿ, ವೆಂಕಟೇಶ ಕೋಣಿ, ನಾಗರತ್ನ ನಾಡ, ಸಂತೋಷ ಹೆಮ್ಮಾಡಿ, ಶೀಲಾವತಿ ಹಡವು, ಲಯನ್ಸ್ ರಬೆಲ್ಲೊ ಮೊದಲಾದವರು ಪ್ರಚಾರಭಿಯಾನ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.ಹೆಮ್ಮಾಡಿಯಲ್ಲಿ ಸಾರ್ವಜನಿಕರು ಸಿಎಎ ವಿರೋಧಿ ಪ್ರಚಾರಭಿಯಾನಕ್ಕೆ ತುಂಬು ಬೆಂಬಲ ವ್ಯಕ್ತಪಡಿಸಿದರು.

ವರದಿ: ವೆಂಕಟೇಶ ಕೋಣಿ



JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**